ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

ಏಪ್ರಿಲ್ 23, 2008 ರೂ. 12/-



ಕಾಸಿದ್ದೋರಿಗೆ ಟಿಕೆಟ್ ನಿಷ್ಠಾವಂತರಿಗೆ ಬಕೆಟ್

ಯಡ್ಡಿ ಲಿಂಗಾಯತನೆ?

ರ್ನಾಟಕದ ಜಯಲಲಿತಾ

ಮೀಕ್ಷೆ: ಚಿತ್ರದುರ್ಗ, ಧಾರವಾಡ, ಪ್ಪಳ, ಶಿವಮೊಗ್ಗ, ಬೀಳಗಿ, ಳ್ಳೇಗಾಲ, ಮೂಡಿಗೆರೆ




ಚಿಕ್ಕಬಳ್ಳಾಪುರ: ರೌಡಿ ಆಂಜಿನಪ್ಪನಿಗೆ ಕಾಂಗ್ರೆಸ್ ಟಿಕೆಟ್?





ಹಾವೇರಿ ಪಂಚಮಸಾಲಿ, ಸಾದರ ಹಣಾಹಣಿ

ಹಣದುಬ್ಬರ, ಬೆಲೆ ಏರಿಕೆ ಮತ್ತು ಪ್ರಜಾ'ಸತ್ತೆ'?



ಹಣದುಬ್ಬರದ ಪ್ರತಿಫಲವನ್ನು ಜಗತ್ತಿನಾದ್ಯಂತ ಜನತೆ ಅನುಭವಿಸುತ್ತಿದ್ದಾರೆ. ಭಾರತವನ್ನೂ ಒಳಗೊಂಡಂತೆ, ಬಾಂಗ್ಲಾದೇಶ, ಯೆಮೆನ್, ಬೊಲಿವಿಯಾ ಇನ್ನಿತ್ಯಾದಿ ದೇಶಗಳಲ್ಲಿ ಬಡ ಜನತೆಯ ದುಡಿಮೆಯಿಂದ ಎರಡು ಹೊತ್ತಿನ ಊಟವೂ ದೊರೆಯದಂತಹ ಭೀಕರ ಪರಿಸ್ಥಿತಿ ಎದುರಾಗಿದೆ. ಹೀಗಾಗಿಯೇ ಜಗತ್ತಿನೆಲ್ಲೆಡೆ ಬಡಜನರು ಆಳುವ ಸರ್ಕಾರಗಳ ವಿರುದ್ಧ ಬೀದಿ ಕಾಳಗದಲ್ಲಿ ತೊಡಗಿದ್ದಾರೆ.

ಕೆಳೆದ ಮೂರು ವಾರಗಳಿಂದ ಜನತೆಯ ನಿತ್ಯ ಬಳಕೆಯ ಆಹಾರ ಧಾನ್ಯಗಳ ಬೆಲೆಯು ಒಂದೇ ಸಮನೆ ಏರುತ್ತಿದೆ. ಒಂದು ಅಂದಾಜಿನ ಪ್ರಕಾರ 1971ರಲ್ಲಿ ಬಿಟ್ಟರೆ ಈ ವೇಗದಲ್ಲಿ ಬೆಲೆಗಳು ಏರುತ್ತಿರುವುದು ಈಗಲೇ. ಗೋಧಿ, ಅಕ್ಕಿ, ದ್ವಿದಳ ಧಾನ್ಯಗಳು, ಎಣ್ಣೆ ಇತ್ಯಾದಿಗಳ ಬೆಲೆಗಳು ಕಳೆದ ಮೂರು ತಿಂಗಳಲ್ಲಿ ಹೆಚ್ಚು ಕಡಿಮೆ ಒಂದೂವರೆ ಪಟ್ಟು ಹೆಚ್ಚಿದೆ. ಹಣದುಬ್ಬರದ ಪ್ರಮಾಣ ಮೂರು ವಾರಗಳ ಕೆಳಗೆ ಶೇ.7 ರಷ್ಟಿದ್ದದ್ದು ಈಗ ಶೇ.7.43ಕ್ಕೆ ಏರಿದೆ. ಅಂದರೆ ಅಪ್ಪರಮಟ್ಟಿಗೆ ಎಲ್ಲಾ ವಸ್ತುಗಳ ಬೆಲೆ - ಅದರಲ್ಲೂ ಆಹಾರ ಧಾನ್ಯಗಳ ಬೆಲೆ - ತುಟ್ಟಿಯಾಗಿದೆ. ಮತ್ತೊಂದು ಕಡೆ ಅಗ್ಗದ ದರದಲ್ಲಿ ಕನಿಷ್ಠ ಪ್ರಮಾಣದ ಆಹಾರ ಧಾನ್ಯಗಳನ್ನು ಒದಗಿಸುತ್ತಿದ್ದ ಪಡಿತರ ಪದ್ಧತಿಯಿಂದ ಕೋಟ್ಯಂತರ ಬಡಜನರನ್ನು ಹೊರಗಿಟ್ಟಿರುವುದರಿಂದ ದೇಶ ಮತ್ತು ಕರ್ನಾಟಕದಲ್ಲೂ ಈ ಬೆಲೆ ಏರಿಕೆಯ ಬಿಸಿಯಿಂದ ಬಡಜನತೆ ತತ್ತರಿಸುತ್ತಿದ್ದಾರೆ.

ಆದರೆ ಚುನಾವಣೆಯ ಬಿಸಿಯಲ್ಲಿ ಓಟನ್ನು ಬೇಯಿಸಿಕೊಳ್ಳಲು ಹುನ್ನಾರ ನಡೆಸಿರುವ ಚುನಾವಣಾ ಪಕ್ಷಗಳು ಬಡ ಜನತೆಯ ಈ ಸಂಕಷ್ಟವನ್ನೂ ತಮ್ಮ ಓಟಿನ ಬೇಟೆಗೆ ಬಳಸಿಕೊಳ್ಳುತ್ತಿವೆ. ಉದಾಹರಣೆಗೆ ಈವರೆಗೆ ಎಂದೂ ಬೆಲೆ ಏರಿಕೆಯ ಬಗ್ಗೆ ಮಾತನಾಡದಿದ್ದ ಬಿಜೆಪಿ ಪಕ್ಷ ತಮ್ಮ ಚುನಾವಣಾ ಪ್ರಚಾರದಲ್ಲಿ ಬೆಲೆ ಏರಿಕೆಯನ್ನೇ ಪ್ರಮುಖ ವಿಷಯವನ್ನಾಗಿ ಮಾಡಿಕೊಳ್ಳುವುದಾಗಿ ಹೇಳಿದೆ. ಅದರ ರಾಷ್ಟ್ರೀಯ ಕಾರ್ಯದರ್ಶಿ ಅರುಣ್ ಜೈಟ್ಲಿ ಪಕ್ಷದ ಚುನಾವಣಾ ಪ್ರಚಾರದ ಬಗ್ಗೆ ಮಾತನಾಡುತ್ತಾ "ಜೆಡಿಎಸ್‌ನ ವಿಶ್ವಾಸದ್ರೋಹ ಚುನಾವಣೆಯಲ್ಲಿ ಒಂದು ವಿಷಯವೇ ಹೊರತು ಅದೇ ಪ್ರಮುಖವಲ್ಲ. ಬೆಲೆ ಏರಿಕೆ ಮತ್ತು ಹಣದುಬ್ಬರ ಪ್ರಮುಖ ವಿಷಯಗಳಾಗಲಿವೆ" ಎಂದು ಘೋಷಿಸಿದ್ದಾರೆ. ಮತ್ತೊಂದೆಡೆ ಯುಪಿಎ ಸರ್ಕಾರ ಬೆಲೆ ಏರಿಕೆ ನಿಯಂತ್ರಣಕ್ಕೆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವುದಾಗಿ ಹೇಳುತ್ತಿದೆ. ಆದರೆ ಅದೇ ಸಮಯದಲ್ಲಿ "ಈ ಬಗೆಯ ಹಣದುಬ್ಬರಗಳು ಎಲ್ಲಾ ಪ್ರಗತಿಶೀಲ ದೇಶಗಳಲ್ಲೂ ಸಂಭವಿಸುತ್ತಿದೆ. ಉದಾಹರಣೆಗೆ ಚೀನಾದಲ್ಲಿ ಹಣದುಬ್ಬರವು ಶೇ.8.7ರ ದರದಲ್ಲೂ, ರಷಿಯಾದಲ್ಲಿ ಶೇ.11.9ರ ದರದಲ್ಲೂ, ಟರ್ಕಿಯಲ್ಲಿ ಶೇ. 8.1ರ ದರದಲ್ಲೂ ಬೆಳೆಯುತ್ತಿದೆ. ಹಾಗೆ ನೋಡಿದರೆ ಭಾರತದಲ್ಲಿ ಅದು ಕೇವಲ ಶೇ.7.44ರಷ್ಟರಲ್ಲಿ ಮಾತ್ರ ಇದೆ" ಎಂದು ಹಣದುಬ್ಬರವೂ ಅಭಿವೃದ್ಧಿಯ ಸಂಕೇತವೇನೋ ಎಂಬಂತೆ ಕೇಂದ್ರ ಮಂತ್ರಿ ಕಪಿಲ್ ಸಿಬಾಲ್ ಬಣ್ಣಿಸಿದ್ದಾರೆ. ಮಾತ್ರವಲ್ಲ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆ ಸತತವಾಗಿ ಏರುತ್ತಿರುವುದೇ ಅದಕ್ಕೆ ಪ್ರಧಾನ ಕಾರಣವೆಂದೂ ಹೇಳಿದ್ದಾರೆ.

ವಿಶ್ವ ಬ್ಯಾಂಕಿನ ವರದಿಯ ಪ್ರಕಾರವೂ 2007ರ ಆಗಸ್ಟ್ ಮತ್ತು 2008ರ ಮಾರ್ಚ್ ನಡುವೆ ಕೃಷಿ ವಸ್ತುಗಳ ಬೆಲೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇ.73ರಷ್ಟು ಏರಿದೆ. ಇದರಲ್ಲಿ ಗೋಧಿಯ ಬೆಲೆ ಶೇ.74 ರಷ್ಟು ಏರಿದ್ದರೆ ಅಕ್ಕಿಯ ಬೆಲೆ ಶೇ.72ರಷ್ಟು ಮತ್ತು ಅಡುಗೆ ಎಣ್ಣೆಯ ಬೆಲೆ ಶೇ.71ರಷ್ಟು ಏರಿದೆ. ಸಕ್ಕರೆಯ ಬೆಲೆಯೂ ಶೇ.35ರಷ್ಟು ಏರಿದ್ದರೆ ಉಳಿದ ಆಹಾರ ಧಾನ್ಯಗಳ ಬೆಲೆ ಶೇ.88ರಷ್ಟು ಏರಿಕೆ ಕಂಡಿದೆ. ಇವ್ಯಾವುದನ್ನೂ ನಿರಾಕರಿಸದ ಯುಪಿಎ ಸರ್ಕಾರ ವಾಸ್ತವವಾಗಿ ಈಗ ಆಗಿರುವ ಬೆಲೆ ಏರಿಕೆಯು ಆಹಾರ ವಸ್ತುಗಳನ್ನು ಅಂತರರಾಷ್ಟ್ರೀಯ ಮಾರುಕಟ್ಟೆಯಿಂದ ಆಮದು ಮಾಡಿಕೊಂಡಿದ್ದರಿಂದಲೇ ಆಗಿದೆ ಎಂದೂ ಒಪ್ಪುತ್ತದೆ. ಸಿಬಾಲ್ ಪ್ರಕಾರ ಇದು ಹಣದುಬ್ಬರದ ಆಮದೇ ಆಗಿದೆ. ಹಾಗಿದ್ದಲ್ಲಿ ಹಣದುಬ್ಬರವನ್ನು ನಿಯಂತ್ರಿಸಬೇಕೆಂದರೆ ಆಹಾರ ಧಾನ್ಯಗಳ ಆಮದನ್ನು ನಿಯಂತ್ರಿಸಬೇಕಲ್ಲವೇ? ಅದರ ಬಗ್ಗೆ ಮಾತ್ರ ಸರ್ಕಾರ ಯಾವುದೇ ಕ್ರಮಗಳನ್ನು ಪ್ರಕಟಿಸುತ್ತಿಲ್ಲವೇಕೆ? ಅಥವಾ ಪ್ರಮುಖ ವಿರೋಧ ಪಕ್ಷವಾದ ಬಿಜೆಪಿ ಅದಕ್ಕಾಗಿ ಆಗ್ರಹಿಸುತ್ತಿಲ್ಲವೇಕೆ?

ಆದ್ದರಿಂದ ಅಸಲು ಪ್ರಶ್ನೆಯೆಂದರೆ ನಾವು ಜಾಗತಿಕ ಮಾರುಕಟ್ಟೆಯಿಂದ ಆಹಾರ ಧಾನ್ಯಗಳನ್ನು ಏಕೆ ಆಮದು ಮಾಡಿಕೊಳ್ಳಬೇಕು ಎಂಬುದು. ಕೇಂದ್ರ ಸರ್ಕಾರದ ಪ್ರಕಾರ ಈ ಬಾರಿ ಆಹಾರ ಧಾನ್ಯಗಳ ಉತ್ಪಾದನೆ ಕುಸಿದಿರುವುದರಿಂದ ಹೆಚ್ಚಿನ ಬೆಲೆ ತೆತ್ತಾದರೂ ಅಂತರರಾಷ್ಟ್ರೀಯ ಮಾರುಕಟ್ಟೆಯಿಂದ ಆಮದು ಮಾಡಿಕೊಳ್ಳಲೇಬೇಕಿದೆ. ಆದರೆ ಇದು ಅಪ್ಪಟ ಸುಳ್ಳು. ಅಕ್ಕಿ, ಗೋಧಿ, ಸಕ್ಕರೆ ಈ ಎಲ್ಲದರ ಉತ್ಪಾದನೆಯು ಅಗತ್ಯಕ್ಕಿಂತ ಹೆಚ್ಚೇ ಆಗಿದೆ. ವಾಸ್ತವವಾಗಿ ಭಾರತದಲ್ಲಿ ಎಡಬಿಡದೆ ಏರುತ್ತಿರುವ ಹಣದುಬ್ಬರದ ಲಕ್ಷಣವೇನು? ಆಹಾರದ ದಾಸ್ತಾನೂ ಏರುತ್ತಿದೆ. ಹಾಗೆಯೇ ಬಡಜನತೆಯ ಹಸಿವೂ ಏರುತ್ತಿದೆ. ಏಕಕಾಲದಲ್ಲಿ ಮತ್ತು ಪೈಪೋಟಿಯಲ್ಲಿ! ಅಂಗಡಿಯಲ್ಲಿ ಮೂಟೆಗಟ್ಟಲೆ ಆಹಾರ ಧಾನ್ಯಗಳ ದಾಸ್ತಾನಿದ್ದರೂ ಅದನ್ನು ಕೊಳ್ಳುವ ಶಕ್ತಿ ಇಲ್ಲದೆ ಹಸಿವಿನಿಂದ ಜನ ಸಾಯುತ್ತಿದ್ದಾರೆ. ಇದೇ ಅಭಿವೃದ್ಧಿಯ ವಿಲಕ್ಷಣ.

ಚಾರ್ವಾಕ
ಶಿವಸುಂದರ್

ಸರ್ಕಾರದ ಈ ಬಗೆಯ ಜನದ್ರೋಹಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಗೋಧಿ ಆಮದು. ನಮ್ಮ ದೇಶದ ಒಟ್ಟಾರೆ ಗೋಧಿ ಬಳಕೆ 65-70 ಮಿಲಿಯನ್ ಟನ್. ಆದರೆ ಈ ವರ್ಷ ದೇಶದ ರೈತರು ದಾಖಲೆ ಪ್ರಮಾಣದಲ್ಲಿ ಅಂದರೆ 73 ಮಿಲಿಯನ್ ಟನ್ನಿನಷ್ಟು (ಅಂದರೆ ಅಗತ್ಯಕ್ಕಿಂತ 5-10 ಮಿಲಿಯನ್ ಟನ್ನಿನಷ್ಟು) ಗೋಧಿಯನ್ನು ಅಧಿಕವಾಗಿಯೇ ಉತ್ಪಾದನೆ ಮಾಡಿದ್ದರು. ಆದರೂ ಸರ್ಕಾರ ಒಂದು ಮಿಲಿಯನ್ ಟನ್ನಿನಷ್ಟು ಗೋಧಿಯನ್ನು ಆಸ್ಟ್ರೇಲಿಯಾ ಮತ್ತು ಅಮೆರಿಕಗಳಿಂದ ಆಮದು ಮಾಡಿಕೊಂಡಿತು. ಅದು ಯಾವ ಬೆಲೆಯಲ್ಲಿ? ನಮ್ಮ ರೈತರು ಕ್ವಿಂಟಾಲಿಗೆ 850 ರೂ. ಬೆಂಬಲ ಬೆಲೆಯನ್ನು ಆಗ್ರಹಿಸಿದರೆ ಅದನ್ನು ನಿರಾಕರಿಸಿದ ಸರ್ಕಾರ ಆಸ್ಟ್ರೇಲಿಯಾದಿಂದ ಕ್ವಿಂಟಾಲಿಗೆ 1650 ರೂ. ಬೆಲೆ ತೆತ್ತು ಆಮದು ಮಾಡಿಕೊಂಡಿತು. ಏಕೆಂದರೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗೋಧಿಯ ದರ ಹೆಚ್ಚಿತ್ತು! ಆದರೆ ಗೋಧಿಯ ವಿಷಯದಲ್ಲಿ ನಾವು ಸಂಪೂರ್ಣ ಸ್ವಾವಲಂಬಿಗಳಾಗಿದ್ದರೂ ವಿದೇಶದಿಂದ ಅಧಿಕ ಬೆಲೆಗೆ ಗೋಧಿಯನ್ನು ಆಮದು ಮಾಡಿಕೊಂಡಿದ್ದೇಕೆ ಎಂದು, ಇಂದು ಹಣದುಬ್ಬರವನ್ನು

18ನೇ ಪುಟಕ್ಕೆ...

No Comments

"ನನಗೆ ಟಿಕೆಟ್ ಸಿಕ್ಕಿರುವುದರಿಂದ ಉಳಿದ 9 ಮಂದಿ ಆಕಾಂಕ್ಷಿಗಳಿಗೆ ಬೇಸರವಾಗಿರಬಹುದು. ಅದು ಸಹಜ. ಮಾತುಕತೆಯ ಮೂಲಕ ಭಿನ್ನಾಭಿಪ್ರಾಯ ಬಗೆಹರಿಸಿಕೊಳ್ಳುತ್ತೇವೆ."

-ಶೋಭಾ ಕರಂದ್ಲಾಜೆ



"ಒಂದೇ ಸಮನೆ ಏರುತ್ತಿರುವ ಜಾಗತಿಕ ಆಹಾರ ಧಾನ್ಯದ ಬೆಲೆಗಳು ಬಡದೇಶಗಳ ಬಡಜನತೆಯನ್ನು ಮತ್ತಷ್ಟು ದಾರುಣತೆಗೆ ತಳ್ಳುತ್ತಿದೆಯಲ್ಲದೆ ಬಡತನದ ವಿರುದ್ಧದ ನಮ್ಮ ಹೋರಾಟವನ್ನು ಕನಿಷ್ಠ ಪಕ್ಷ ಏಳು ವರ್ಷಗಳಷ್ಟು ಹಿಂದಕ್ಕೆ ತಳ್ಳಿದೆ."

-ವಿಶ್ವಬ್ಯಾಂಕ್

"ಟಿಬೆಟ್ ವಿಷಯದಲ್ಲಿ ನಾವು ಚೀನಾ ಸರ್ಕಾರವನ್ನು ಸಂಪೂರ್ಣವಾಗಿ ಬೆಂಬಲಿಸು... ಅಮೆರಿಕವು ಬೀಜಿಂಗ್ ಒಲಂಪಿಕ್ಸ್ ಅನ್ನು ಹಾಳುಗೆಡವಲೆಂದೇ ಟಿಬೆಟ್ ವಿಷಯವನ್ನು ರೊಚ್ಚಿಗೆಬ್ಬಿಸುತ್ತಿದೆ."

-ಹ್ಯೂಗೋ ಶವೇಜ್, ವೆನಿಜುಯೇಲಾ ದೇಶದ ಅಧ್ಯಕ್ಷ



"ಬಿಜೆಪಿಯು ನಮ್ಮ ಜೊತೆ ಸಂಪರ್ಕ ಮಾಡದೆ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸುವ ಮೂಲಕ ಮಿತ್ರಧರ್ಮವನ್ನು ಗಾಳಿಗೆ ತೂರಿದೆ."

-ಶರದ್ ಯಾದವ್, ಜೆಡಿಯು ಪಕ್ಷದ ರಾಜ್ಯಾಧ್ಯಕ್ಷ

"ಹಣದುಬ್ಬರ ಉಂಟಾಗಿದೆ ಎಂದು ನಾವು ಕುರುಡು ನಿಯಂತ್ರಣವನ್ನು ಹೇರುವುದಾಗಲೀ, ಕೃಷಿ ಉತ್ಪನ್ನದ ಮಾರಾಟಗಳ ಮೇಲೆ ನಿಯಂತ್ರಣ ಹೇರುವುದನ್ನಾ... ಮಾಡಲು ಸಾಧ್ಯವಿಲ್ಲ."

-ಮನಮೋಹನ್ ಸಿ...

ನಂಬಿದ್ರೆನಂಬಿ ಬಿಟ್ರೆಬಿಡಿ

"ಜಾಗತಿಕ ಆಹಾರ ಧಾನ್ಯಗಳ ಬೆಲೆಯು ಕಳೆದ ಮೂರು ವರ್ಷಗಳಲ್ಲಿ ಶೇ.83... ಏರಿದೆ."


-ರಾಬರ್ಟ್ ಜೋಲಿಕ್, ವಿಶ್ವಬ್ಯಾಂಕ್ ಅ...

"ನಾನು ಯಾವುದಕ್ಕೂ ಹೆದರದೆ ಇರುವುದಕ್ಕೆ ಕಾರಣ ನನ್ನಲ್ಲಿರುವ ಆತ್ಮವಿಶ್ವಾಸ ... ಆತ್ಮ ಪರಿಶುದ್ಧತನ."

-ದೇವೇ...

"ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದರೆ ಎಲ್ಲಾ ವರ್ಗಗಳ ಜನರಿಗೂ ಶೇ.3ರ ದರ... ಸಾಲ ನೀಡಲಾಗುವುದು."

-ಯಡಿಯೂರಪ್ಪ



"ಚುನಾವಣೆಯಲ್ಲಿ ಬಿಎಸ್‌ಪಿಯು ಎರಡಂಕಿ ಸ್ಥಾನವನ್ನು ಗಳಿಸುವುದರಲ್ಲಿ ಸಂಶಯವಿಲ್ಲ."

-ಸಿಂಧ್ಯಾ

"ವಾಸ್ತವವೆಂದರೆ ಭಾರತದ ಉದ್ಯಮಿಗಳು ತಮ್ಮ ಉದ್ಯೋಗಿಗಳ ಪ್ರತಿಭೆಯನ್ನು ಆಧರಿಸಿ ಆಯ್ಕೆ ಮಾಡುತ್ತಾರೆಯೇ ವಿನಃ ಜಾತಿ ಮತ್ತು ಧರ್ಮಗ... ಆಧರಿಸಿ ಅಲ್ಲ."

-ಅಮಿತ್ ಮಿತ್ರ *FICCI* ಅ...

ದೇಹ ವಿಕ್ರಯದ ವರ್ಗ ವಿಭಜನೆ!

"ಸೆಕ್ಸ್ ವರ್ಕರ್ಸ್‌ಗಳಲ್ಲಿ ಹೈ ಸೊಸೈಟಿ ಜನ, ಮಧ್ಯಮ ವರ್ಗ ಮತ್ತು ಕೆಳವ... ಜನರಿರುತ್ತಾರೆ. 10-15 ರೂಪಾಯಿಗಳಿಗೆ ಮೈ ಮಾರಿಕೊಳ್ಳುವವರಿಂದ ಹಿಡಿದು ಗ... ಸಾವಿರ ರೂಪಾಯಿ ಸಂಪಾದಿಸುವವರೂ ಇರುತ್ತಾರೆ. ಅತ್ಯಂತ ಪ್ರತಿಷ್ಠಿತ ವರ್ಗದವ... ಸೆಕ್ಸ್ ವರ್ಕರ್ ಎಂದು ಪರಿಗಣಿಸುವುದೇ ಇಲ್ಲ. ಮಧ್ಯಮ ವರ್ಗದವರು ಇದರೊ... ಬೇರಿನ್ನೇನಾದರೂ ಕೆಲಸದಲ್ಲಿ ತೊಡಗಿರುತ್ತಾರೆ. ಆದರೆ ಕೆಳವರ್ಗದವರು ಮಾತ್ರ ... ನರಳಾಟಕ್ಕೆ ಒಳಗಾಗುತ್ತಾರೆ."

-"ನಮ್ಮ ಮಾನಸ" ಪತ್ರಿಕೆಯ...

ಕಳ್ಳನಿಗೊಂದು ಪಿಳ್ಳೆನೆವ!

"ಮಹೇಶ್ ಭೂಪತಿ ಜೊತೆ ಡಬಲ್ಸ್ ಆಡಲು ನಿರ್ಧರಿಸಿದ್ದು ನನ್ನ ವೃತ್ತಿ ಜೀವನ... ತೆಗೆದುಕೊಂಡ ಅತಿ ಕೆಟ್ಟ ನಿರ್ಧಾರ."

-ಲಿಯಾಂಡರ್ ಪೇ...

ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುವವರು!

"ಕ್ರಿಮಿನಲ್ ಹಿನ್ನೆಲೆಯ ವ್ಯಕ್ತಿಗಳಿಗೆ ಟಿಕೆಟ್ ಕೊಟ್ಟರೆ ಜನ ಅನುಮಾನ ಪಡುತ್ತಾರೆ ಎ... ಈಗ ಎಲ್ಲಾ ಪಕ್ಷಗಳಿಗೆ ಚಿಂತೆ ಶುರುವಾಗಿದೆ. ಇದಕ್ಕೆ ಕಾರಣ ವಿಜಯ ಕರ್ನಾಟಕ ಸಂಪಾ... ವಿಶ್ವೇಶ್ವರ ಭಟ್ಟರ ಒಂದು ಲೇಖನ."

-ವಿಜಯ ಕರ್ನಾಟಕದ ಮುಖಪುಟ ವರದಿ

ಯಡ್ಡಿಗೆ ಸಿಎಂ ಆಸೆ ಆದ್ರೆ ಜೈಟ್ಲಿಗೆ ಡೆಲ್ಲಿ ಆಸೆ!



"ಜೆಡಿಎಸ್‌ನ ವಿಶ್ವಾಸದ್ರೋಹ ಚುನಾವಣೆಯಲ್ಲಿ ಒಂದು ವಿಷಯವೇ ಹೊರತು ಅದೇ ಪ್ರಮುಖವಲ್ಲ. ಬೆಲೆ ಏರಿಕೆ ಮತ್ತು ಹಣದುಬ್ಬರ ಪ್ರಮುಖ ವಿಷಯಗಳಾಗಲಿವೆ."

ಅರುಣ್ ಜೈಟ್ಲಿ

ಎಚ್ಚರಿಕೆಯೋ? ಭಯೋತ್ಪಾದನೆಯೋ ಕಾಮ್ರೇಡ್!

"ತ್ರಿಪುರ ಚುನಾವಣೆಯಲ್ಲಿ ಫಾರ್ವರ್ಡ್ ಬ್ಲಾಕ್ ನಮ್ಮನ್ನು ಬಿಟ್ಟು ಏಕಾಂಗಿಯಾಗಿ 12 ... ಚುನಾವಣೆಯಲ್ಲಿ ಸೆಣಸಿತು. ಆದರೆ ಅದು 12 ಕ್ಷೇತ್ರಗಳಲ್ಲಿ ಪಡೆದ ಒಟ್ಟಾರೆ ಓಟು ನ... ಜೊತೆಗಿದ್ದಾಗ ಒಂದು ಕ್ಷೇತ್ರದಲ್ಲಿ ಪಡೆದ ಓಟಿಗಿಂತ ಕಡಿಮೆಯಾಗಿತ್ತು. ಇದು ನಮ... ವಿಮರ್ಶಿಸುವ ಎಲ್ಲರಿಗೂ ಒಂದು ಎಚ್ಚರಿಕೆಯಾಗಿದೆ."

-ಯೆಚೂರಿ, ಸಿಪಿಎಂ ನಾ...

ಪ್ರಜಾಸತ್ತೆಯ ಕೊಲೆಗಾರರು ಯಾರು?

"ಪ್ರಜಾಸತ್ತೆಯು ಇದ್ದಕ್ಕಿದ್ದಂತೆ ನಡೆಯುವ ಹತ್ಯಾ ಪ್ರಯತ್ನದಿಂದ ಸಾಯುವುದಿಲ್ಲ. ... ಜನರ ನಿರಾಸಕ್ತಿ, ಉದಾಸೀನಗಳಿಂದ ಉಂಟಾಗುವ ಅಪೌಷ್ಟಿಕತೆಯ ಕಾರಣದಿಂದಲೇ ನಿಧಾನ... ಸತ್ತುಹೋಗುತ್ತದೆ."

-ರಾಬರ್ಟ್.ಎಂ.ಹಚಿ...

ವಾಜಪೇಯಿ ಎಂಬ ಮೋಸಗಾರನೂ, ಅಡ್ವಾಣಿ ಎಂಬ ಸುಳ್ಳುಗಾರನೂ



ಕಂಡಹಾಗೆ

■ ಗೌರಿ ಲಂಕೇಶ್

ಅಟಲ್ ಬಿಹಾರಿ ವಾಜಪೇಯಿ ಎಂಬ ...ಎಸ್‌ಎಸ್‌ನ ಮುಖವಾಡ ಈಗ ವೃದ್ಧಾಪ್ಯದ ...ರಣದಿಂದಾಗಿ ತನ್ನ ಮೋಸದಾಟಕ್ಕೆ ಬಲವಂತವಾಗಿ ಎಳೆಯಬೇಕಾಗಿದೆ. ಈ ವಾಜಪೇಯಿ ಒಂದೆಡೆ ...ಮೂಕಯ್ಯನೂ ಹೌದು, ಇನ್ನೊಂದೆಡೆ ನಿಷ್ಠಾವಂತ ...ದೂತ್ವವಾದಿಯೂ ಹೌದು, ಮತ್ತೊಂದೆಡೆ ಚಪಲ ...ಗರಾಯನೂ ಹೌದು. ತನ್ನ ನಯವಂಚನೆಯ ...ತುಗಾರಿಕೆಯಿಂದಲೇ ಎಲ್ಲ ಕಡೆ ಸಲ್ಲುತ್ತಿದ್ದ ವಾಜ...ಯಿ ಎಂತಹ ಮನುಷ್ಯನೆಂದರೆ ಸ್ವಾತಂತ್ರ್ಯ ಸಂಗ್ರಾಮ...ಲ್ಲಿ ಭಾಗವಹಿಸದಿದ್ದರೂ, ಬದಲಾಗಿ ಈತ ನೀಡಿದ ...ಕ್ಷಿಯಿಂದಾಗಿ ನಿಜವಾದ ಸ್ವಾತಂತ್ರ್ಯ ಹೋರಾಟಗಾರರು ...ಲುಪಾಲಾಗಿದ್ದರೂ ತಾನೋರ್ವ ಸ್ವಾತಂತ್ರ್ಯ ಹೋರಾಟ...ರ ಎಂದು ಯಾವ ಮುಜುಗರವೂ ಇಲ್ಲದೆ ...ಬಿಸಿಕೊಳ್ಳುತ್ತಿದ್ದ. ರಾಮನೇ ಆದರ್ಶ ಪುರುಷ ಎಂದು ...ಳುತ್ತಲೇ ಸ್ವತಃ ತಾನೇ ಮತ್ತೊಬ್ಬರ ಹೆಂಡತಿಯನ್ನು ...ಪಟಾಯಿಸಿ ಆಕೆಯೊಂದಿಗೆ ಸಂಸಾರ ನಡೆಸಿದ. ...ೋಮಾತೆ ಪವಿತ್ರ ಎಂದು ಘೋಷಿಸುತ್ತಲೇ ಭಾರತ...ದ ಪರದೇಶಗಳಿಗೆ ಗೋಮಾಂಸದ ಎಕ್ಸ್‌ಪೋರ್ಟ್ ...ಚ್ಚಾಗುವಂತೆ ನೋಡಿಕೊಂಡ. ತನ್ನದು ಕವಿ ಹೃದಯ ...ದು ಹೇಳಿಕೊಳ್ಳುತ್ತಲೇ ಗುಜರಾತಿನಲ್ಲಿ ನರೇಂದ್ರ ...ೋದಿ ಎಂಬ ನರಹಂತಕ ನಡೆಸಿದ ಅಲ್ಪಸಂಖ್ಯಾತರ ...ದೋಕುಳಿಯನ್ನು ಕಂಡೂ ಸುಮ್ಮನಿದ್ದ. ತಾನು ...ರತದ ಪ್ರಧಾನಿಯಾಗಿದ್ದರೂ ತಾನು ರಾಷ್ಟ್ರಸೇವಕ ...ದು ಘೋಷಿಸುವ ಬದಲಾಗಿ ತಾನು ಆರ್‌ಎಸ್‌ಎಸ್ ...ಬ ಕೋಮುವಾದಿ ಸಂಘಟನೆಯ ನಿಷ್ಠಾವಂತ ಸೇವಕ ಎಂದು ಕರೆದುಕೊಂಡ. ವಿಪರ್ಯಾಸವೆಂದರೆ ಈತನ ಬಗ್ಗೆ ಇದೆಲ್ಲ ಗೊತ್ತಿಲ್ಲದವರು "ಬೇರೆಯವರಿಗಿಂತ ವಾಜಪೇಯಿ ಪರವಾಗಿಲ್ಲ ಕಣ್ರೀ" ಎನ್ನುವುದುಂಟು.

ವಾಜಪೇಯಿಗೂ, ರಥಯಾತ್ರಿಕ ಅಡ್ವಾಣಿಗೂ ಅಂತರಾಳದಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲ. ಆದರೆ ಮೇಲು ನೋಟದಲ್ಲಿ ಹಲವು ವ್ಯತ್ಯಾಸಗಳು ಕಂಡುಬರುತ್ತದೆ. ಆದರೆ ಈಗಿನ ರಾಜಕೀಯ ನಡೆಯುವುದೇ ಮೇಲು ನೋಟಕ್ಕೆ ಕಂಡದ್ದನ್ನು ಆಧರಿಸಿ. ಆದ್ದರಿಂದ ಈಗ ಅಡ್ವಾಣಿಯು ತನ್ನ ಇಮೇಜ್‌ಗೆ ಒಂದಿಷ್ಟು ಕಾಸ್ಮೆಟಿಕ್ ಬದಲಾವಣೆಗಳನ್ನು ತರುವಲ್ಲಿ ನಿರತರಾಗಿದ್ದಾರೆ. ಅಂತಹ ಒಂದು ಪ್ರಯತ್ನವೇ ಇತ್ತೀಚೆಗೆ ಬಿಡುಗಡೆಯಾಗಿರುವ 'ಮೈ ಲೈಫ್, ಮೈ ಕಂಟ್ರಿ' ಎಂಬ ಆತ್ಮಕಥನ.

ಈ ಆತ್ಮಕಥನದ ಶೀರ್ಷಿಕೆಯನ್ನೇ ನೋಡಿ. ಮೊದಲ ನೋಟಕ್ಕೆ ಅಡ್ವಾಣಿಯ ಬದುಕು ಮತ್ತು ಈ ದೇಶದ ಇತಿಹಾಸ ಬೆಸೆದುಕೊಂಡಿದೆ ಎಂಬಂತೆ, ತನ್ನ ಬದುಕೇ ಈ ದೇಶದ ದಿಕ್ಕನ್ನು ನಿರ್ದೇಶಿಸಿದೆ ಎಂಬಂತೆ, ತಾನೂ ಮತ್ತು ಈ ದೇಶ ಬೇರೆಬೇರೆ ಅಲ್ಲ ಎಂಬಂತೆ ಹಲವಾರು ಅರ್ಥಗಳನ್ನು ಒಮ್ಮೆಗೆ ಹೊರಡಿಸುವಂತಿದೆ. ತನ್ನ ಇಡೀ ಜೀವನವನ್ನು ಈ ದೇಶದ ಉದ್ಧಾರಕ್ಕೆ ಮುಡುಪಿಟ್ಟಿದ್ದ, ಕೊನೆಗೆ ಅದಕ್ಕೆಂದೇ ಸಾವನ್ನು ಅಪ್ಪಿದ ನಮ್ಮ ದೇಶದ ರಾಷ್ಟ್ರಪಿತ ಮಹಾತ್ಮಾ ಗಾಂಧಿಯೇ ಎಂದೂ ತನ್ನನ್ನು ಭಾರತದೊಂದಿಗೆ ಸಮೀಕರಿಸಿಕೊಂಡಿರಲಿಲ್ಲ. ಆದರೆ ತನ್ನ ಬದುಕಿನುದ್ದಕ್ಕೂ ಈ ದೇಶದಲ್ಲಿ ಕೋಮುದ್ವೇಷ ಹಬ್ಬುವಂತೆ, ಅಮಾಯಕರ ರಕ್ತ ಚೆಲ್ಲುವಂತೆ, ಜಾತ್ಯತೀತ ಸಂವಿಧಾನಕ್ಕೆ ಮಣ್ಣೆರಚುವಂತಹ ಕಾರ್ಯಗಳಲ್ಲಿ ತೊಡಗಿರುವ ಅಡ್ವಾಣಿಗೆ ತನ್ನ ಬದುಕನ್ನು ಭಾರತದೊಂದಿಗೆ ಸಮೀಕರಿಸಿಕೊಳ್ಳುವ ಹುಂಬತನವಿದೆ!

ಸುಮಾರು ಒಂದು ಸಾವಿರ ಪುಟಗಳಷ್ಟು ಉದ್ದವಿರುವ ಈ ಪುಸ್ತಕವನ್ನು ಸ್ವತಃ ಅಡ್ವಾಣಿ ಬರೆದರೊ ಅಥವಾ ಇನ್ಯಾರೋ ಘೋಸ್ಟ್ ರೈಟರ್ ಬರೆದರೊ ಎಂಬುದರ ಬಗ್ಗೆ ಗುಮಾನಿಗಳಿರುವುದರಿಂದ ಇದನ್ನು ಆತ್ಮಕಥೆ ಎಂದು ಕರೆಯಬೇಕೋ ಅಥವಾ ಕೇವಲ ಜೀವನಚರಿತ್ರೆ ಎಂದು ಕರೆಯಬೇಕೋ ಎಂದು ಗೊಂದಲಗಳಿವೆ.

ಹೋಗಲಿ, ಈ ಪುಸ್ತಕದಲ್ಲಿ ಇರುವುದಾದರೂ ಏನು? ಇದನ್ನು ವಿಮರ್ಶಿಸಿರುವ ಖ್ಯಾತ ಬರಹಗಾರ ಖುಷ್ವಂತ್ ಸಿಂಗ್‌ರವರು 'ಔಟ್‌ಲುಕ್' ಪತ್ರಿಕೆಯಲ್ಲಿ "ಅಡ್ವಾಣಿ ಈ ದೇಶದಲ್ಲಿ ದ್ವೇಷದ ವಿಷಬೀಜ ಬಿತ್ತಿದ ವ್ಯಕ್ತಿ" ಎಂದು ಕರೆದಿದ್ದಾರೆ. ಆ ವಿಮರ್ಶೆಯ ಒಂದು ಭಾಗ ಹೀಗಿದೆ:


"ಮಸೀದಿಯನ್ನು ನಾಶ ಮಾಡುವುದು ತನ್ನ ಉದ್ದೇಶವಾಗಿರಲಿಲ್ಲ, ಮಸೀದಿ ಧ್ವಂಸಗೊಳಿಸುತ್ತಿದ್ದವರನ್ನು ತಡೆಯಲು ಮುರಳಿ ಮನೋಹರ ಜೋಷಿ ಹಾಗೂ ಉಮಾಭಾರತಿಯವರನ್ನು ವೇದಿಕೆಯಿಂದ ಕಳಿಸಿದೆ ಎಂದು ಅಡ್ವಾಣಿ ತಮ್ಮ ಪುಸ್ತಕದಲ್ಲಿ ಬರೆಯುತ್ತಾರೆ. ಅದು ನಿಜವೇ ಆಗಿದ್ದರೆ ಬಾಬರಿ ಮಸೀದಿ ಧ್ವಂಸದ ಆ ಭಯಾನಕ ಕಾರ್ಯಾಚರಣೆ ಮುಕ್ತಾಯಗೊಂಡ ಬಳಿಕ ಜೋಷಿ ಹಾಗೂ ಉಮಾಭಾರತಿ ಪರಸ್ಪರ ಆಲಂಗಿಸಿಕೊಂಡು ಸಂಭ್ರಮಿಸಿದ್ದು ಯಾಕೆ? ಅಂದು ಏನಾಯಿತೆಂದು ತಿಳಿಯಲು ನಾವು ಲಿಬರ್‌ಹಾನ್ ಆಯೋಗದ ವರದಿ ಪ್ರಕಟವಾಗುವವರೆಗೆ ಕಾಯಬೇಕಿಲ್ಲ. ಅದನ್ನು ನಾವು ನಮ್ಮ ಕಣ್ಣಾರೆ ನೋಡಿದ್ದೇವೆ. ಶಿವಸೇನೆ ಹಾಗು ಆರೆಸ್ಸೆಸ್‌ನ ಕಾರ್ಯಕರ್ತರು ಮಸೀದಿಯನ್ನು ಧ್ವಂಸಗೊಳಿಸಿದ ಬಳಿಕ ತಮ್ಮ ಸಾಧನೆಯ ಬಗ್ಗೆ ಹೆಮ್ಮೆಯಿಂದ ಘೋಷಿಸಿಕೊಂಡಿದ್ದಾರೆ. ಅಂದು ಅಲ್ಲಿನ ಹಾಗೂ ಅಲ್ಲಿಂದ ದೆಹಲಿಗೆ ಹಿಂದಿರುಗುವಾಗ ಸಂಭ್ರಮದ ಕುರಿತು ಅಡ್ವಾಣಿ ಬರೆಯುತ್ತಾರೆ. ಅದರ ಪರಿಣಾಮ ಇಡೀ ಜಗತ್ತಿನಾದ್ಯಂತ ಕಾಣಲಾರಂಭಿಸಿತು. ಬಾಂಗ್ಲಾದೇಶದಿಂದ ಇಂಗ್ಲೆಂಡ್‌ವರೆಗೆ ಎಲ್ಲೆಡೆ ಉದ್ರಿಕ್ತ ಮುಸ್ಲಿಮರು, ಹಿಂದೂ ಹಾಗೂ ಸಿಖ್ ದೇವಾಲಯಗಳ ಮೇಲೆ ದಾಳಿ ಮಾಡಿದರು. ಭಾರತದಲ್ಲಿ ಹಿಂದೂ-ಮುಸ್ಲಿಮ್ ಸಂಬಂಧದ ಸ್ವರೂಪ ಸಂಪೂರ್ಣವಾಗಿ ಬದಲಾಯಿತು. ದೇಶದ ವಿವಿಧ ಭಾಗಗಳಲ್ಲಿ ನಡೆದ ಕೋಮು ಹಿಂಸಾಚಾರಗಳು, ಮುಂಬಯಿಯ ಸರಣಿ ಬಾಂಬ್ ಸ್ಫೋಟ, ಗೋಧ್ರಾದಲ್ಲಿ ಸಾಬರಮತಿ ಎಕ್ಸ್‌ಪ್ರೆಸ್ ಮೇಲಿನ ದಾಳಿ, ಆ ಬಳಿಕ ಗುಜರಾತ್‌ನಲ್ಲಿ ನಡೆದ ಅಮಾಯಕ ಮುಸ್ಲಿಮರ ಮಾರಣಹೋಮ ಇವೆಲ್ಲವೂ ಬಾಬರಿ ಮಸೀದಿ ಧ್ವಂಸದ ಕರಾಳ ಪರಿಣಾಮಗಳು....

ಗುಜರಾತ್ ಮುಖ್ಯಮಂತ್ರಿ ನರೇಂದ್ರ ಮೋದಿ ಬಗ್ಗೆ ಅಡ್ವಾಣಿ ತನ್ನ ಪುಸ್ತಕದಲ್ಲಿ ಬಹಳಷ್ಟು ಹೇಳಿದ್ದಾರೆ. ಗೋಧ್ರಾದಲ್ಲಿ ಸಾಬರಮತಿ ಎಕ್ಸ್‌ಪ್ರೆಸ್ ಮೇಲೆ ದಾಳಿ ನಡೆದ ಬಳಿಕ ಗುಜರಾತ್‌ನಲ್ಲಿ ಮುಸ್ಲಿಮರ ಮಾರಣಹೋಮ ನಡೆಯಲು ಅವಕಾಶ ನೀಡಿದ ಆರೋಪದಿಂದ ನರೇಂದ್ರ ಮೋದಿಗೆ ಅಡ್ವಾಣಿ ಕ್ಲೀನ್‌ಚಿಟ್ ನೀಡುತ್ತಾರೆ. ಇದೊಂದು ಕೊಡು-ಕೊಳ್ಳುವಿಕೆಯ ಒಪ್ಪಂದದಂತೆ. ಅಡ್ವಾಣಿಗೆ ಗುಜರಾತ್‌ನ ಗಾಂಧಿನಗರದಿಂದ ಚುನಾವಣೆ ಗೆಲ್ಲಲು ಮೋದಿ ಸಹಕರಿಸುತ್ತಾರೆ. ಮೋದಿಯ ವರ್ತನೆ ಬಗ್ಗೆ ಬಿಜೆಪಿಯ ಉನ್ನತ ಸ್ತರದಲ್ಲಿ ಅಪಸ್ವರಗಳೆದ್ದಾಗಲೆಲ್ಲಾ ಅಡ್ವಾಣಿ, ಮೋದಿಯ ರಕ್ಷಣೆಗಿಳಿಯುತ್ತಾರೆ.

ಈಗ ದೇಶಕ್ಕೆ ಮುಖ್ಯವಾಗಿರುವುದು ಅಡ್ವಾಣಿಗೂ ಆತ್ಮಕತೆಯಲ್ಲಿರುವ ಸಾಹಿತ್ಯಿಕ ಅಂಶಗಳಲ್ಲ. ಕೊನೆಗೂ ಅಡ್ವಾಣಿ ಈ ದೇಶದ ಪ್ರಧಾನಿಯಾಗುತ್ತಾರೆಯೇ ಎಂಬುದೇ ಮುಖ್ಯ. ಗಾಂಧೀಜಿ ಹಾಗು ನೆಹರೂ ಕಲ್ಪನೆಯ ಜಾತ್ಯತೀತ ರಾಷ್ಟ್ರವಾಗಿ ಭಾರತ ಉಳಿಯಬಹುದು ಅಥವಾ ಜಾತ್ಯತೀತತೆಯ ಕುರಿತ ಅಡ್ವಾಣಿಯ ಸಿದ್ಧಾಂತಕ್ಕೆ ಬಲಿಯಾಗಿ 'ಹಿಂದೂ ಜಾತ್ಯತೀತ ಸಮಾಜವಾದಿ ರಿಪಬ್ಲಿಕ್ ಆಫ್ ಭರತವರ್ಷ' ಆಗಿಬಿಡಬಹುದು. ಆ ಆಲೋಚನೆಯೇ ನಾಶವಾಗಲಿ."

ಹೀಗೆ ಇತರೆ ವಿಮರ್ಶಕರೂ ಕೂಡ ಅಡ್ವಾಣಿಯ ಈ ಪುಸ್ತಕದಲ್ಲಿನ ಅಸತ್ಯ ಅಪಕ್ವತೆ ಮತ್ತು ಅಸಮರ್ಥನೀಯ ನಿಲುವುಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಆದರೆ ಸಂಘ ಪರಿವಾರದವರಿಗೆ ನಾಚಿಕೆ ಎಂಬುದು ಎಂದೂ ಇಲ್ಲವಲ್ಲ, ಆದ್ದರಿಂದ ಅಡ್ವಾಣಿ ಕೂಡ ಯಾವ ನಾಚಿಕೆಯನ್ನೂ ಪ್ರದರ್ಶಿಸುತ್ತಿಲ್ಲ.

(ಮುಂದಿನ ಪುಟಕ್ಕೆ)



ವಾಜಪೇಯಿ ಎಂಬ ಮೋಸಗಾರನೂ, ಅಡ್ವಾಣಿ ಎಂಬ ಸುಳ್ಳುಗಾರನೂ



ಇತ್ತೀಚೆಗೆ ಪುಸ್ತಕವೊಂದನ್ನು ಬರೆದರೆ ಸಾಲದು, ಅದರ ಬಿಡುಗಡೆಯಿಂದ ಹಿಡಿದು ಅದಕ್ಕೆ ಆದಷ್ಟು ಪ್ರಚಾರ ಸಿಗುವಂತೆ ಮಾಡಿ ಪುಸ್ತಕವು ಅಧಿಕ ಸಂಖ್ಯೆಯಲ್ಲಿ ಮಾರಾಟವಾಗುವಂತೆ ನೋಡಿಕೊಳ್ಳಬೇಕಾಗುತ್ತದೆ. ಆ ನಿಟ್ಟನಲ್ಲಿ ಅಡ್ವಾಣಿ ಕೂಡ ಪತ್ರಿಕೆ ಮತ್ತು ಟಿವಿ ಮಾಧ್ಯಮಗಳಿಗೆ ತಮ್ಮ ಪುಸ್ತಕ ಕುರಿತು ಹಲವಾರು ಸಂದರ್ಶನಗಳನ್ನು ನೀಡಿದ್ದಾರೆ.


ಆದರೆ ಮಜಾ ಸಂಗತಿ ಏನೆಂದರೆ ಅವರ ಇಂತಹ ಪ್ರತಿಯೊಂದು ಸಂದರ್ಶನವೂ ಅಡ್ವಾಣಿಯ ಸುಳ್ಳುಗಳನ್ನು ಬಹಿರಂಗಪಡಿಸುತ್ತಾ ಅವರ ಬಿಜೆಪಿ ಪಕ್ಷಕ್ಕೆ ಮುಜುಗರ ಮಾಡುತ್ತಿವೆ.

ಉದಾಹರಣೆಗೆ ಒಂದು ಸಂದರ್ಶನದಲ್ಲಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಬಗ್ಗೆ ಮಾತನಾಡುತ್ತಾ ಆಕೆಯೊಂದಿಗೆ ತನಗೆ ಮಾತನಾಡುವುದೇ ಅತಿ ಕಷ್ಟಕರವಾದ ಸಂಗತಿ ಎಂದರು ಅಡ್ವಾಣಿ. ಆದರೆ ಮರುದಿನವೇ ತನ್ನ ಹೆಂಡತಿಯೊಂದಿಗೆ ಸೋನಿಯಾ ಗಾಂಧಿಯವರ ಮನೆ ಮುಂದೆ ದೈನೇಸಿಯಂತೆ ಹಾಜರಾದ ಅಡ್ವಾಣಿ ಸೋನಿಯಾರಿಗೆ ತಮ್ಮ ಪುಸ್ತಕದ ಒಂದು ಪ್ರತಿಯನ್ನು ನೀಡಿದರು. ತನ್ನ ವಿರುದ್ಧ ಅಡ್ವಾಣಿ ಕೆಟ್ಟದಾಗಿ ಮಾತನಾಡಿದ್ದರೂ, ಹಿಂದೆಲ್ಲ ತನ್ನನ್ನು ಮತ್ತು ತನ್ನ ಯುಪಿಎ ಸರ್ಕಾರವನ್ನು ಅಡ್ವಾಣಿ ಟೀಕಿಸಿದ್ದರೂ, ಆತನನ್ನು ಮತ್ತಾತನ ಹೆಂಡತಿಯನ್ನು ಸೌಜನ್ಯದಿಂದಲೇ ತನ್ನ ಮನೆಗೆ ಬರಮಾಡಿಕೊಂಡ ಸೋನಿಯಾ ತಾನು ಅಡ್ವಾಣಿಗಿಂತ ಎಷ್ಟು ಸುಸಂಸ್ಕೃತೆ ಎಂಬುದನ್ನು ಮತ್ತೊಮ್ಮೆ ಸಾಬೀತುಪಡಿಸಿದರು. ಈ ಪ್ರಕರಣದಿಂದ ಬಿಜೆಪಿಗಳಿಗೆ ಕಪಾಳಕ್ಕೆ ಬಾರಿಸಿಕೊಂಡಂತಾಯಿತಲ್ಲದೆ ಸೋನಿಯಾರ ವರ್ಚಸ್ಸಿಗೆ ಯಾವುದೇ ಕುಂದುಂಟಾಗಲಿಲ್ಲ!

ಇನ್ನೊಂದು ಸಂದರ್ಶನದಲ್ಲಿ 1999 ರಲ್ಲಿ ಖಂದಹಾರ್ ವಿಮಾನ ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಡುಗಡೆಗೊಂಡ ಉಗ್ರರೊಂದಿಗೆ ಅಂದಿನ ವಿದೇಶಾಂಗ ಸಚಿವ ಜಸ್ವಂತ್ ಸಿಂಗ್ ಹೋಗಿದ್ದು ತನಗೆ ಗೊತ್ತೇ ಇರಲಿಲ್ಲ ಎಂದು ಅಡ್ವಾಣಿ ಹೇಳಿದರು. ಆದರೆ ಇದಕ್ಕೆ ಕೂಡಲೇ ಪ್ರತಿಕ್ರಿಯಿಸಿದ ಅವರ ಮಾಜಿ ಸಂಪುಟ ಸಹೋದ್ಯೋಗಿ ಜಾರ್ಜ್ ಫರ್ನಾಂಡಿಸ್‌ರವರು "ಅದು ಸಾಧ್ಯವೇ ಇಲ್ಲ. ಉಗ್ರರೊಂದಿಗೆ ಜಸ್ವಂತ್ ಸಿಂಗ್‌ರನ್ನು ಕಳುಹಿಸುವ ವಿಚಾರ ಹಿರಿಯ ಮಂತ್ರಿಗಳ ಸಭೆಯಲ್ಲಿ ಚರ್ಚಿಸಲಾಗಿತ್ತಲ್ಲದೆ, ಆ ಸಭೆಯಲ್ಲಿ ಅಡ್ವಾಣಿ ಕೂಡ ಇದ್ದರು" ಎಂದು ಹೇಳಿದರು.

ತಾನು ಹೇಳಿದ್ದು ಸುಳ್ಳು ಎಂಬುದು ಹೀಗೆ ಬಹಿರಂಗಗೊಂಡಾಗ ಅದನ್ನು ಮುಚ್ಚಲೆಂದು ಅಡ್ವಾಣಿ ಇನ್ನೊಂದು ಸುಳ್ಳನ್ನು ಹೇಳಿದರು. "ಪ್ರಾಯಶಃ ಆದರ ಬಗ್ಗೆ ಜಸ್ವಂತ್ ಸಿಂಗ್ ಅಂದಿನ ಪ್ರಧಾನಿ ವಾಜಪೇಯಿಯೊಂದಿಗೆ ಚರ್ಚಿಸಿದ್ದಿರಬಹುದು." ಈ ಹೇಳಿಕೆಯ ಹಿಂದಿರುವ ಉದ್ದೇಶ ಇಷ್ಟೆ: ತಾನು ಆಗ ಗೃಹ ಸಚಿವನಾಗಿದ್ದರೂ, ಜೊತೆಗೆ ಉಪಪ್ರಧಾನಿ ಆಗಿದ್ದರೂ, ತಾನು ಅಮಾಯಕ ಎಂಬಂತೆ ಬಿಂಬಿಸಿಕೊಳ್ಳುವುದು ಮತ್ತು ಆ ತಪ್ಪಿನ ಆರೋಪವನ್ನು ವಾಜಪೇಯಿ ಮೇಲೆ ಹೊರಿಸಿ ತಾನು ಬಚಾವಾಗುವುದು. ಆದರೆ ಅಡ್ವಾಣಿಯ ದುರದೃಷ್ಟಕ್ಕೆ ಇವತ್ತಿಗೂ ಬಿಜೆಪಿ ಮತ್ತು ಆರ್‌ಎಸ್‌ಎಸ್‌ನಲ್ಲಿ ಸಾಕಷ್ಟು ವಾಜಪೇಯಿ ಬೆಂಬಲಿಗರಿದ್ದು ಅವರೆಲ್ಲಾ ಈಗ ಅಡ್ವಾಣಿ ವಿರುದ್ಧ ಹಲ್ಲು ಮಸೆಯುತ್ತಿದ್ದಾರೆ.

ತನ್ನ ಪುಸ್ತಕದಲ್ಲಿ ಒಂದನ್ನೂ, ಸಂದರ್ಶನಗಳಲ್ಲಿ ಇನ್ನೊಂದನ್ನೂ ಹೇಳುತ್ತಾ ಇಂತಹ ಎಡವಟ್ಟುಗಳನ್ನು ಮಾಡಿಕೊಳ್ಳುತ್ತಿರುವ ಅಡ್ವಾಣಿಯ ಸುಳ್ಳುಗಳ ಸರಣಿ ಇಲ್ಲಿಗೆ ನಿಲ್ಲುವುದಿಲ್ಲ. ಉದಾಹರಣೆಗೆ ತನ್ನ ಪುಸ್ತಕದಲ್ಲಿ ಗುಜರಾತಿನ ನರಮೇಧ ನಡೆದ ನಂತರ ತಾನು ನರೇಂದ್ರ ಮೋದಿಗೆ ರಾಜೀನಾಮೆ ನೀಡುವಂತೆ ಸೂಚಿಸಿದ್ದೆ ಎಂದು ದಾಖಲಿಸಿರುವ ಅಡ್ವಾಣಿ ಸಂದರ್ಶನವೊಂದರಲ್ಲಿ 'ಪಾಪ, ನರೇಂದ್ರ ಮೋದಿ ನಿಜವಾಗಲೂ ಅಮಾಯಕ' ಎಂದು ಹೇಳಿದರು. ಅಂದರೆ ಯಾವುದು ಸತ್ಯ? ಗುಜರಾತಿನಲ್ಲಿ ನರೇಂದ್ರ ಮೋದಿಯ ಮಾರ್ಗದರ್ಶನದಲ್ಲಿ ಸಾವಿರಾರು ಜನರ ಹತ್ಯೆ ನಡೆದಿದ್ದೋ? ಅಥವಾ ಅಮಾಯಕ ಮೋದಿಯ ರಾಜ್ಯದಲ್ಲಿ ಯಾವ ಕೊಲೆಯೂ ನಡೆಯದಿದ್ದದ್ದೋ? ಸುಳ್ಳು ಹೇಳುವುದಕ್ಕೂ ಮಿತಿ ಬೇಡವೆ?



ಕರ್ನಾಟಕ ರಾಜ್ಯವು ಚುನಾವಣಾ ಸಿದ್ಧತೆಯಲ್ಲಿರುವಾಗ ಅಡ್ವಾಣಿ ಬಗ್ಗೆ ಈಗ ಯಾಕೆ ಇಷ್ಟೆಲ್ಲ ಎಂದು ಓದುಗರಿಗೆ ಅನ್ನಿಸಿರಬಹುದು. ಕಾರಣ ಇದೆ. ಇದೇ ಸುಳ್ಳುಗಾರ ಅಡ್ವಾಣಿ ಸದ್ಯದಲ್ಲೇ ಚುನಾವಣಾ ಪ್ರಚಾರಕ್ಕೆಂದು ರಾಜ್ಯಕ್ಕೆ ಬರಲಿದ್ದಾನೆ ಮತ್ತು ತನ್ನ ಗುಣಕ್ಕೆ ಸರಿಯಾಗಿ ಸುಳ್ಳುಗಳು ತುಂಬಿರುವ ಭಾಷಣಗಳನ್ನು ಬಿಗಿಯುತ್ತಾನೆ.

ಹಾಗೆಯೇ ಆತ ಹೇಳಿದ್ದೇ ಸತ್ಯ ಎಂಬಂತೆ ಯಡಿಯೂರಪ್ಪನಿಂದ ಹಿಡಿದು ಪುಡಿ ಚೆಡ್ಡಿಗಳ ತನಕ ಎಲ್ಲರೂ ಮಾತನಾಡಲಾರಂಭಿಸುತ್ತಾರೆ. ಆ ಮೂಲಕ ಜನರನ್ನು ಮೋಸ ಮಾಡುತ್ತಾರೆ. ಅವರೆಲ್ಲರನ್ನು ಎಚ್ಚರಿಸಲೆಂದೇ ಇಷ್ಟೆಲ್ಲ ಹೇಳಬೇಕಾಯಿತು.

ಅಂದಹಾಗೆ ಅಡ್ವಾಣಿಯ ಪುಸ್ತಕದ ಬಗ್ಗೆ ವಿಮರ್ಶಕರೊಬ್ಬರು ಹೀಗೆ ಹೇಳಿದ್ದಾರೆ: "ಇದನ್ನು ಓದಿದ ನಂತರ ಅನಿಸಿದ್ದೇನೆಂದರೆ ಇದರ ಶೀರ್ಷಿಕೆ 'ನನ್ನ ಬದುಕು, ನನ್ನ ದೇಶ' ಎಂಬುದರ ಬದಲಾಗಿ 'ನನ್ನ ಬದುಕು, ನನ್ನ ಸುಳ್ಳುಗಳು' ಎಂದಿದ್ದರೇ ಸೂಕ್ತವಾಗಿರುತ್ತಿತ್ತು."

■

ಹರ್ಷಿತೆ ಈಗ ದುಃಖಿತೆ



ಈ ಹರ್ಷಿತಾ ಸಕ್ಸೇನಾ ಎಂಬ ಇಪ್ಪತ್ತು ವಯಸ್ಸಿನ ಗೋವಾ ಹುಡುಗಿ ಸುತ್ತಾ ಒಂದು 'ಸುಂದರ ಜಗಳ' ಶುರುವಾಗಿದೆ.

ಕಳೆದ ವಾರ ಮುಂಬೈನಲ್ಲಿ ಕೆಲವರು ಸೇರಿಕೊಂಡು ಈ ಹರ್ಷಿತಾ ಸಕ್ಸೇನಾ ಸುಂದರವಾಗಿಯೂ-ಸೆಕ್ಸಿಯಾಗಿಯೂ ಇದ್ದಾಳೆಂದು ಕಂಡುಹಿಡಿದು ಅವಳಿಗೆ 'Pantaloons Femina Miss India Earth 2008' ಎಂಬ ಕಿರೀಟ ಕೊಟ್ಟು ಕಳಿಸಿದ್ದರು. ಅದರಲ್ಲಿ ಯಾವ ಪದ ಪ್ರಶಸ್ತಿಯದು, ಯಾವ ಪದ ಕಂಪನಿದೂ ಅಂತ ತಕ್ಷಣ ಗೊತ್ತಾಗಲ್ಲ ಬಿಡಿ.


ಇವರ ಜಗಳ ಏನೆಂದರೆ ಈ ಹರ್ಷಿತಾ ಗ್ಲಾಡ್‌ರ್‍ಯಾಗ್ಸ್ ಬ್ಯೂಟಿ ಪೆಜೆಂಟ್ಸ್ ಎಂಬ ಕಂಪನಿ ಜೊತೆ 2 ವರ್ಷದ ಒಪ್ಪಂದ ಮಾಡಿಕೊಂಡು, ಅವರನ್ನ ಕೇಳದೆ ಬೇರೆ ಸೌಂದರ್ಯ ಸ್ಪರ್ಧೆಗೆ ಹೋಗಲ್ಲ ಅಂತ ಬರೆದುಕೊಟ್ಟಿದ್ದಳಂತೆ. ಆದರೆ ಆ ಒಪ್ಪಂದ ಅವಧಿ ಇನ್ನೂ ಮೂರು ದಿನ ಬಾಕಿ ಇದ್ದಾಗಲೇ ಈ ಫೆಮಿನಾ ಮಿಸ್ ಇಂಡಿಯಾ ಸ್ಪರ್ಧೆಗೆ ಹೋಗಿ ತಾನೇ ಭಾರತ ಸುಂದರಿ ಅನ್ನಿಸಿಕೊಂಡು ಬಂದಿದ್ದಾಳೆ.

ಅದನ್ನು ಗ್ಲಾಡ್‌ರ್‍ಯಾಗ್ಸ್ ವಿರೋಧಿಸಿದೆ.

ಹರ್ಷಿತಾ ಈಗ ಫೆಮಿನಾ ಪ್ರಶಸ್ತಿ ಬಿಟ್ಟುಕೊಟ್ಟಿದ್ದಾಳೆ.

■

IPL ಕ್ರಿಕೆಟ್-ಪತ್ರಿಕೆಗಳ ಜಗಳ



ಏಪ್ರಿಲ್ 18 ರಿಂದ ಶುರುವಾಗಲಿರುವ ಇಂಡಿಯನ್ ಪ್ರೀಮಿಯರ್ ಲೀಗ್‌ನ ಟ್ವೆಂಟಿ 20 ಟೂರ್ನಿ ಹೊಸ ಜಗಳಗಳನ್ನು ಹುಟ್ಟು ಹಾಕಿದೆ.

ದುಡ್ಡು ಕಾಸಿನ ಜಗಳ ಇದು. ಸಾವಿರಾರು ಕೋಟಿ ರೂಪಾಯಿ ವಹಿವಾಟು ನಡೆಸಬಲ್ಲ ಸರಕಾಗಿ ಹೋಗಿರುವ ಕ್ರಿಕೆಟ್ ಈಗ ಭಾರತದ ಅಧಿಕೃತ ರಾಷ್ಟ್ರೀಯ ಕ್ರೀಡೆಯ ಸ್ಥಾನಮಾನವನ್ನು ಕಿತ್ತುಕೊಂಡಿದೆ.

ಹಾಕಿ ಆಟಕ್ಕಿದ್ದ ಸ್ಥಾನ ಅದು.

ಈಗಿನ ಜಗಳ ಏನೆಂದರೆ IPL ಟೂರ್ನಿಯ ಆಟ ನಡೆಯುವಾಗ ಫೋಟೋ ತೆಗೆದುಕೊಳ್ಳುವ ದಿನಪತ್ರಿಕೆಗಳು ಅವನ್ನು ತಮಗಿಷ್ಟ ಬಂದಾಗ ಬಳಸುವಂತಿಲ್ಲ. ಫೋಟೋ ತೆಗೆದ 24 ಗಂಟೆಯೊಳಗೆ ಅವನ್ನೆಲ್ಲಾ IPL ವೆಬ್‌ಸೈಟಿಗೆ ಹಾಕಲೇಬೇಕು ಹಾಗೂ ಆಮೇಲೆ ಯಾರೇ ಆಗಲಿ ಅಂತಾ ಫೋಟೋ ಮತ್ತೆ ಬಳಸಲು IPL ಅನುಮತಿ ಕೇಳಬೇಕು ಎಂಬಿತ್ಯಾದಿ ಷರತ್ತುಗಳನ್ನು ಹೇರಲಾಗಿದೆ.

ಭಾರತದ ಎಲ್ಲಾ ಪತ್ರಿಕೆಗಳೂ ಇದರ ವಿರುದ್ಧ ತಿರುಗಿಬಿದ್ದಿವೆ.

ಭಾರತೀಯರಿಗೆ ಕ್ರಿಕೆಟ್ ಆಟದ ಮೇಲಿರುವ ಮೋಹವನ್ನು ದುಡ್ಡು ಮಾಡುವ ವ್ಯಾಪಾರವಾಗಿಸಿರುವ BCCI ಈಗ ಫೋಟೋ ವ್ಯಾಪಾರಕ್ಕೂ ಇಳಿದುಬಿಟ್ಟಿದೆ.

ಈ ಷರತ್ತು ಹಿಂಪಡೆಯದೇ ಹೋದರೆ ಪತ್ರಿಕೆಗಳು IPL ಟೂರ್ನಿಯನ್ನೇ ಬಹಿಷ್ಕರಿಸುವುದು ಖಚಿತ.

ಈ ಟ್ವೆಂಟಿ 20 ಯ ಉನ್ಮಾದ ಈಗ ಯಾವ ಹಂತಕ್ಕೆ ಹೋಗಿದೆಯೆಂದರೆ ಸಿನಿಮಾ ನಟರು ಕ್ರಿಕೆಟ್ ಆಡುವಂತೆಯೂ ಕ್ರಿಕೆಟಿಗರು ಸಿನಿಮಾಗಳಲ್ಲಿ ನಟಿಸುವಂತೆಯೂ ಹೊಸ ಒಪ್ಪಂದಗಳು ಏರ್ಪಡುತ್ತಿವೆ.

ಇದನ್ನು ಶುರು ಮಾಡುತ್ತಿರುವುದು ಅಮೀರ್ ಖಾನ್!

ಶಾರೂಖ್ ಖಾನ್ ಕೊಲ್ಕತ್ತಾ ನೈಟ್ ರೈಡರ್ಸ್ ಟೀಂ ಖರೀದಿ ಮಾಡಿದ ಮೇಲೆ ಕ್ರಿಕೆಟ್‌ನಲ್ಲಿರುವ ದುಡ್ಡಿನ ಬಗ್ಗೆ ಅಮೀರ್‌ಗೆ ಜ್ಞಾನೋದಯವಾಯಿತೆಂದು ಕಾಣುತ್ತದೆ. ಆದರೆ ಅಷ್ಟರಲ್ಲಿ ಎಲ್ಲಾ ಟೀಂ ಆಟಗಾರರೂ ಹರಾಜಾಗಿ ಹೋಗಿದ್ದರು. ಅದಕ್ಕೆ ಈಗ ಅಮೀರ್ ಖಾನ್ ಹೊಸ ದಾರಿ ಹುಡುಕಿಕೊಂಡಿದ್ದಾನೆ.

ಪಾಕಿಸ್ತಾನದ ಲಾಹೋರ್ ಬಾದ್‌ಶಾಹಾಸ್ ಟೀಂನೊಂದಿಗೆ ಆಮೀರ್ ಒಂದು ಡೀಲ್ ಕುದುರಿಸಿಕೊಂಡಿದ್ದಾನೆ. ಅದರಂತೆ ಆ ಟೀಂನವರೊಂದಿಗೆ ಅಮೀರ್ ಕ್ರಿಕೆಟ್ ಆಡಲಿದ್ದಾನೆ. ಅದರ ಬದಲಾಗಿ ಇಂಜಮಾಮ್ ಉಲ್-ಹಕ್, ಮಹಮದ್ ಸಮಿ, ಅಜರ್ ಮಹಮದ್ ಇವರೆಲ್ಲಾ ಆಮಿರ್ ಖಾನ್‌ನ ಮುಂದಿನ ಸಿನಿಮಾದಲ್ಲಿ ನಟಿಸಲಿದ್ದಾರೆ.

ಪಾಕಿಸ್ತಾನದಲ್ಲೂ ತನ್ನ ಸಿನಿಮಾಗಳಿಗೆ ಮಾರ್ಕೆಟ್ ಗಿಟ್ಟಿಸಲು ಅಮಿರ್ ಹಾಕಿರುವ ಪ್ಲಾನ್ ಇದು. ಆಟಕ್ಕೂ-ನಟನೆಗೂ ವ್ಯತ್ಯಾಸ ಗೊತ್ತಿರದ ಮೂರ್ಖರು ಮಾಡುವ ಕೆಲಸಗಳಿವು. ಯೂರೋಪ್‌ನಲ್ಲಿ ಈಗಲೂ ಕೂಡಾ ಕ್ರೀಡೆ ಎಷ್ಟೇ ಕಮರ್ಷಿಯಲೈಸ್ ಆಗಿದ್ದರೂ ಅದನ್ನು ಸಿನಿಮಾ ನಟರ ಚೇಷ್ಟೆಯ ಅಂಗಳವಾಗಲು ಬಿಟ್ಟಿಲ್ಲ. ಆದರೆ ಇಂಡಿಯಾದಲ್ಲಿ ಮಾತ್ರ ಇಂತಹ ಅವಿವೇಕಗಳು ನಡೆಯುತ್ತವೆ.

ಟ್ವೆಂಟಿ 20 ಯ ಇನ್ನೊಂದು ಸುದ್ದಿ ಏನೆಂದರೆ ಬೇರೆಬೇರೆ ಟೀಂಗಳ ಮಾಲೀಕರ ಬಳಿಗೆ ಖಾಸಗಿ ಹೂಡಿಕೆ ಸಂಸ್ಥೆಗಳು ಹೋಗಿ ನಿಮ್ಮ ಟೀಂನಲ್ಲಿ ನಾವೂ ಬಂಡವಾಳ ಹಾಕಲು ರೆಡಿ. ನಮಗೂ ಸ್ವಲ್ಪ ಶೇರ್ ಬಿಟ್ಟು ಕೊಡ್ತೀರಾ ಎಂದು ದುಂಬಾಲು ಬಿದ್ದಿದ್ದಾರಂತೆ. ಅನಿಲ್ ಅಂಬಾನಿ, ಐಸಿಐಸಿಐ ಬ್ಯಾಂಕ್‌ನವರೂ ಕೂಡಾ ಈ ಕ್ರಿಕೆಟ್ ವ್ಯಾಪಾರದಲ್ಲಿ ಏನಾದರೂ ಲಾಭ ಗಿಟ್ಟಿಸಲು-ತಡವಾಗಿದ್ದರೂ ಕೂಡಾ-ಹೊಸ ಸಾಧ್ಯತೆಗಳನ್ನು ಹುಡುಕುತ್ತಿದ್ದಾರಂತೆ.

ನೆನಪಿಡಿ,

IPL ಟೂರ್ನಿಯ ಒಂದೇ ಒಂದು ಬಾಲ್ ಅನ್ನು ಕೂಡಾ ಇನ್ನು ಎಸೆದಿಲ್ಲದಿರುವಾಗಲೇ ಇಂಥ ವ್ಯಾಪಾರಿ ಹವಾ ಕ್ರಿಯೇಟ್ ಆಗಿದೆ.


ಮುಂದೆ ಹೇಗೋ ಏನೋ?

■

ಬಿಜೆಪಿ ಬಳಗದಲ್ಲಿ ಮೊದಲ ಕ್ರಿಮಿನಲ್

ಕ್ರಿಮಿನಲ್ಲು, ರೌಡಿಗಳು, ಭೂಗಳ್ಳರಿಗೆ ನಮ್ಮ ಪಕ್ಷದಿಂದ ಯಾವುದೇ ಕಾರಣಕ್ಕೂ ಟಿಕೆಟ್ಟು ಕೊಡೋಲ್ಲ. ಅಷ್ಟೇ ಅಲ್ಲ ಇಂಥ ಸಮಾಜಕಂಟಕರಿಗೆ ಪಕ್ಷದ ಕನಿಷ್ಠ ಮೆಂಬರ್‌ಶಿಪ್ಪನ್ನೂ ಕೊಡುವುದಿಲ್ಲ!

ಇಲ್ಲಿಗೆ ವಾರದ ಹಿಂದಷ್ಟೇ ಬಿಜೆಪಿ ರಾಜ್ಯಾಧ್ಯಕ್ಷ ಸದಾನಂದಗೌಡರು ಮಾಧ್ಯಮಗಳೆದುರು ವೀರಾವೇಶದಿಂದ ಹೊಡೆದ ಸದರಿ ಡೈಲಾಗನ್ನು ಪತ್ರಿಕೆಗಳಲ್ಲಿ ಯಾರು ತಾನೇ ಓದಿಲ್ಲ?



ಕೇಬಲ್ ಶ್ರೀಧರ

ಕುಚೋದ್ಯವೇನು ಗೊತ್ತೆ? ಇದಾಗಿ ಮೂರೇ ದಿನಕ್ಕೆ ಬೆಂಗಳೂರಿನ ಸರ್ವಜ್ಞನಗರಕ್ಕೆ ಬಿಜೆಪಿ ಅಭ್ಯರ್ಥಿ ಶ್ರೀಧರ್ ಎಂಬಾತ ಎಂಬ ಸುದ್ದಿ ಎಲ್ಲೆಡೆ ಹಬ್ಬಿತು. ಈ ಶ್ರೀಧರ್ ಬೇರೆ ಯಾರೂ ಅಲ್ಲ, ಬಹುಜನ ಸಮಾಜ ಪಕ್ಷದ ನಾಯಕ ಸತ್ಯವೇಲು ಕೊಲೆಯ ಮೊದಲ ಆರೋಪಿ ಕೇಬಲ್ ಶ್ರೀಧರ!

ಬಿಜೆಪಿ ಅಧ್ಯಕ್ಷ ಸದಾನಂದ ಗೌಡರಿಗೆ ಮಂಡೆ ಸರಿ ಇದ್ದಿದ್ದೇ ಆದರೆ ಈ ಕ್ಷಣಕ್ಕೂ ಫ್ರೇಜರ್‌ಟೌನ್ ಪೊಲೀಸ್ ಠಾಣೆಗೆ ಬಂದು ನೋಡಲಿ. ಆರ್. ಶ್ರೀಧರ ಬಿನ್ ರಾಮಚಂದ್ರ, ವಯಸ್ಸು 35, ನಂ. 12 ರಾಮಕೃಷ್ಣ ರಸ್ತೆ, ಕಾಕ್ಸ್‌ಟೌನ್, ಬೆಂಗಳೂರು ಎಂಬ ಆಸಾಮಿಯೊಬ್ಬನ ರೌಡಿ ಷೀಟಿದೆ. ಇಲ್ಲಿಗೆ ಮೂರು ವರ್ಷದ ಹಿಂದಷ್ಟೇ ಫ್ರೇಜರ್‌ಟೌನ್ ಪೊಲೀಸರು ತೆರೆದ ಸದರಿ ರೌಡಿ ಷೀಟಿನಲ್ಲಿ ಕೇಡಿ ಶ್ರೀಧರನ ಕೈಗೆ ಸ್ಲೇಟು ಕೊಟ್ಟು ಫೋಟೋ ತೆಗೆಸಿದ್ದಾರೆ. ಅಕಸ್ಮಾತ್ ಸದಾನಂದಗೌಡರ ಕಣ್ಣಿಗೇನಾದರೂ ರೋಗಬಡಿದಿದ್ದರೆ ಜೊತೆಗೆ ಯಡ್ಡಿಯನ್ನೋ ಚೆಡ್ಡಿ ಲಿಂಬಾವಳಿಯನ್ನೋ ಕರೆದೊಯ್ಯಲಿ. ದಿನಾಂಕ 22.6.2006 ರಂದು ಇದೇ ಫ್ರೇಜರ್‌ಟೌನ್ ಪೊಲೀಸ್ ಠಾಣೆಯಲ್ಲಿ 0222 ನಂಬರಿನ ಎಫ್‌ಐಆರ್ ಅಂದರೆ ಪ್ರಥಮ ವರ್ತಮಾನ ವರದಿಯನ್ನು ತೆಗೆಸಿ ನೋಡಲಿ. ಅದು 2006 ರ ಜೂನ್ 21 ರ ಬುಧವಾರದ ರಾತ್ರಿ ನಡೆದ ಬಿಎಸ್‌ಪಿ ನಾಯಕ ಸತ್ಯವೇಲು ಕೊಲೆ ಕೇಸಿನ ಎಫ್‌ಐಆರ್!

ಇದೇ ಎಫ್‌ಐಆರ್‌ನ ಕೊಲೆ ಆರೋಪಿಗಳ ಪಟ್ಟಿಯಲ್ಲಿ ಮೊದಲ ಹೆಸರೇ ಶ್ರೀಧರ ಉರ್ಫ್ ಕೇಬಲ್ ಶ್ರೀಧರ!

ಎರಡನೇ ಆರೋಪಿಯಾಗಿ ಸುಪಾರಿ ಕಿಲ್ಲರ್ ಮ್ಯಾಥ್ಯೂ ಎಂಬಾತನ ಹೆಸರಿದೆ. ಮೂರನೇ ಹೆಸರೇ ಆಂಜನಪ್ಪ ಗಾರ್ಡನ್ನಿನ ಕುಖ್ಯಾತ ರೌಡಿ ಕುಟ್ಟಿ ಅಲಿಯಾಸ್ ತಿರುಕುಮಾರ್. ನಾಲ್ಕನೆಯವನು ಟ್ಯಾನರಿ ರಸ್ತೆಯ ಹಳೇ ರೌಡಿ ಸೆಲ್ವಾ ಮತ್ತು ಐದನೆಯ ಆರೋಪಿಯೇ ಸದ್ಯ ಬೆಂಗಳೂರಿನ ಮೋಸ್ಟ್ ವಾಂಟೆಡ್ ಕ್ರಿಮಿನಲ್ ರಾಜಾ ಉರ್ಫ್ ತಿರುಕುಮಾರನ್. ಈತ ಕುಟ್ಟಿಯ ತಮ್ಮ.


ಇಂಥ ಖತರ್‌ನಾಕ್ ರೌಡಿಗಳ ಜೊತೆ ಸೇರಿಕೊಂಡು 2006 ರ ಜೂನ್ 21 ರ ರಾತ್ರಿ ಹತ್ತೂ ಮುಕ್ಕಾಲರ ಹೊತ್ತಿಗೆ ಕೇಬಲ್ ಶ್ರೀಧರ ಬಿಎಸ್‌ಪಿ ನಾಯಕ ಸತ್ಯವೇಲುವನ್ನು ಮೋರ್ ರಸ್ತೆಯಲ್ಲಿ ಕತ್ತರಿಸಿ ಕೊಂದಿದ್ದಾನೆ. ಸತ್ಯವೇಲು ಅಣ್ಣ ವೇಲು ಪೊಲೀಸರಿಗೆ ನೀಡಿದ ದೂರಿನ ಸಾರಾಂಶವು ಅದೇ ಎಫ್‌ಐಆರ್‌ನಲ್ಲಿ ದಾಖಲಾಗಿದೆ. ಆಗ ಫ್ರೆಜರ್‌ಟೌನಿಗೆ ಇನ್ಸ್‌ಪೆಕ್ಟರ್ ಆಗಿದ್ದ ಶ್ರೀನಿಧಿ ಇದಕ್ಕೆ ಸಹಿ ಹಾಕಿದ್ದಾರೆ.

ಇದು ಸದ್ಯ ಸರ್ವಜ್ಞ ನಗರದ ಬಿಜೆಪಿ ಆಕಾಂಕ್ಷಿ ಕೇಬಲ್ ಶ್ರೀಧರನ ಕ್ರಿಮಿನಲ್ ವ್ಯಕ್ತಿತ್ವಕ್ಕೆ ಸಿಕ್ಕ ಒಂದು ಸರ್ಟಿಫಿಕೆಟ್ ಅಷ್ಟೇ. ಸದಾನಂದಗೌಡರು ಯಾರ ಕಿವಿಗೆ ಹೂವಿಡುತ್ತಿದ್ದಾರೋ? ಹೀಗೆ 2006 ರ ಜೂನ್ 22 ರಂದು ದಾಖಲಾದ ಎಫ್‌ಐಆರ್‌ಗೆ 2006 ರ ಸೆಪ್ಟೆಂಬರ್ 18 ರಂದು ಫ್ರೇಜರ್‌ಟೌನ್ ಪೊಲೀಸರು ಚಾರ್ಜ್ ಶೀಟ್ ಅಂದರೆ ದೋಷಾರೋಪಣ ಪತ್ರವನ್ನು ಕೋರ್ಟಿಗೆ ಸಲ್ಲಿಸಿದ್ದಾರೆ. ಐಪಿಸಿಯ ಕಲಂ 143, 147, 302, 506, 120 (ಬ)ಗಳ ಅಡಿಯಲ್ಲಿ ದಾಖಲಾದ ಚಾರ್ಜ್ ಶೀಟಿನಲ್ಲೂ ಆರ್. ಶ್ರೀಧರ ಉರ್ಫ್ ಕೇಬಲ್ ಶ್ರೀಧರನ ಹೆಸರೇ ಮೊದಲಿಗಿದೆ.

ಕೇಸಿನ್ನೂ ಮುಗಿದಿಲ್ಲ, ಇನ್ನು ಏಳೆಂಟು ತಿಂಗಳೊಳಗೆ ತೀರ್ಪು ಹೊರಬಿದ್ದು ಶ್ರೀಧರ ಜೈಲುಪಾಲಾಗುವುದು ಗ್ಯಾರಂಟಿ. ಈಗಾಗಲೇ ಜೈಲು ಮುಗಿಸಿ ಜಾಮೀನಿನ ಮೇಲಿರುವ ಶ್ರೀಧರ ಪ್ರತಿ ತಿಂಗಳೂ ಕೋರ್ಟಿಗೆ ಬರಬೇಕು. ಆಗಾಗ ಪೊಲೀಸ್ ಠಾಣೆಗೆ ಬಂದು ಸಹಿ ಹಾಕಬೇಕು. ಸಾಲದ್ದಕ್ಕೆ ಹೆಣ್ಣೂರು, ಬಾಣಸವಾಡಿ, ಡಿಜೆಹಳ್ಳಿ, ಹೆಬ್ಬಾಳ ಮತ್ತು ಭಾರತಿನಗರ ಪೊಲೀಸ್ ಠಾಣೆಗಳಲ್ಲಿ ಶ್ರೀಧರನ ವಿರುದ್ಧ ಇನ್ನೂ ಒಂದು ಡಜನ್ ಕ್ರಿಮಿನಲ್ ಕೇಸುಗಳು ದಾಖಲಾಗಿವೆ.

ಇದು ಪೊಲೀಸ್ ಠಾಣೆ ಮತ್ತು ಕೋರ್ಟುಗಳ ಮಾತಾಯಿತು. ಇಲ್ಲಿಗೆ ಎರಡು ವಾರಗಳ ಹಿಂದೆಯೇ 'ಲಂಕೇಶ್' ಇಂಥ ಪಾತಕಿಗೆ ಬಿಜೆಪಿ ಟಿಕೆಟ್ ಕೊಡುತ್ತಿರುವ ಬಗ್ಗೆ ಬರೋಬ್ಬರಿ ಒಂದು ಪುಟದ ವರದಿ ಪ್ರಕಟಿಸಿದ ನಂತರವೂ ಬಿಜೆಪಿ ಆತನಿಗೆ ಟಿಕೆಟ್ ಕೊಡಲು ಹೊರಟ್ಟಿದೆಯೆಂದರೆ ಏನರ್ಥ?

ಈಗಲೂ ಅಷ್ಟೆ, ಬಿಜೆಪಿ ಅಧ್ಯಕ್ಷ ಸದಾನಂದಗೌಡ ಎಂಥಾ ಸುಳ್ಳುಬುರುಕ ಎಂಬುದಕ್ಕೆ ಸಾಕ್ಷಿಯಾಗಿ ಫ್ರೇಜರ್‌ಟೌನ್ ಪೊಲೀಸರು ಬಿಎಸ್‌ಪಿ ನಾಯಕ ಸತ್ಯವೇಲು ಕೊಲೆ ಕೇಸಿಗೆ



ಶ್ರೀಧರನ ಚಾರ್ಜ್‌ಶೀಟ್

ಸಂಬಂಧಪಟ್ಟಂತೆ ನ್ಯಾಯಾಲಯಕ್ಕೆ ಸಲ್ಲಿಸಿರುವ ಎಫ್‌ಐಆರ್ ಪ್ರತಿಯನ್ನು ಜೊತೆಗೆ ಚಾರ್ಜ್ ಶೀಟ್‌ನ ಇನ್ನೊಂದು ಪ್ರತಿಯನ್ನೂ ಇಲ್ಲಿ ಪ್ರಕಟಿಸುತ್ತಿದ್ದೇವೆ. ಸದಾನಂದಗೌಡರು ಬೇಕಿದ್ದರೆ ಇದರ ಸತ್ಯಾಸತ್ಯತೆಯನ್ನು ಫ್ರೇಜರ್‌ಟೌನ್ ಪೊಲೀಸ್ ಠಾಣೆಗೇ ಹೋಗಿ ಪರಿಶೀಲಿಸಬಹುದು. ಸೆಷನ್ಸ್ ಕೋರ್ಟಿಗೆ ಹೋದರೂ ಅಲ್ಲಿ ಇದರ ಸರ್ಟಿಫೈಡ್ ಪ್ರತಿಗಳೇ ಸಿಗುತ್ತವೆ.


ಓರ್ವ ದಲಿತ ನಾಯಕನನ್ನು ಕೊಂದವನಿಗೆ ಬಿಜೆಪಿ ಟಿಕೆಟ್ ಕೊಟ್ಟು ಎಂಎಲ್‌ಎ ಮಾಡಲು ಹೊರಟಿದೆಯೆಂದರೆ ಅದು ಗೊತ್ತಿದ್ದೂ ಸದಾನಂದಗೌಡರು ಮಾಧ್ಯಮಗಳ ಮುಂದೆ ಸುಳ್ಳು ಹೇಳುತ್ತಿದ್ದಾರೆಂದರೆ; ಬಿಜೆಪಿ ಅದೆಷ್ಟು ಹೊಲಸು ಪಕ್ಷವಾಗಿರಬೇಕು?

ಬಹುಶಃ ಕಾಂಗ್ರೆಸ್ ಕೂಡ ಯಾವತ್ತೂ ಇಷ್ಟು ಲಜ್ಜೆಗೆಟ್ಟಿರಲಿಲ್ಲ. ಇನ್ನೂ ಕೊಲೆ ಆರೋಪದಿಂದ ಮುಕ್ತಗೊಳ್ಳದೇ ಇರುವ ಹಾಲಿ ರೌಡಿ ಷೀಟರ್ ಒಬ್ಬ ಬಿಜೆಪಿ ಅಭ್ಯರ್ಥಿಯಾಗುತ್ತಾನೆಂದರೆ ಯಾವುದೋ ಕಾಲಕ್ಕೆ ಕೊಲೆ ಆರೋಪದಿಂದ ಮುಕ್ತಗೊಂಡ ಜೇಕೆಯಂಥವರಿಗೆ ಕಾಂಗ್ರೆಸ್ ಟಿಕೆಟ್ ಕೊಡುವುದು ಯಾವ ಮಹಾ?

■ ರಾ.ಸೋ.


ಧಾರವಾಡ ಚುನಾವಣಾ ಹಗ್ಗಜಗ್ಗಾಟ

ಧಾರವಾಡ ಜಿಲ್ಲೆಯಲ್ಲಿರುವ ಏಳು ವಿಧಾನಸಭಾ ಕ್ಷೇತ್ರಗಳ ಅಭ್ಯರ್ಥಿಗಳು ಕ್ಷೇತ್ರ ಪುನರ್ವಿಂಗಡಣೆಯ ಪರಿಣಾಮವಾಗಿ ಕ್ಷೇತ್ರ ಬದಲಾಯಿಸಿಕೊಳ್ಳುವ ಅನಿವಾರ್ಯತೆಗೆ ಒಳಗಾಗಿದ್ದಾರೆ. ಇದೇ ಹೊತ್ತಿಗೆ ಬೇರೆ ಬೇರೆ ಜಿಲ್ಲೆಗಳಿಂದ ವಲಸೆ ಬಂದವರು, ಬೇರೆ ಬೇರೆ ಪಕ್ಷಗಳಿಂದ ಹಾರಿ ಬಂದವರು ಮೂಲನಿವಾಸಿ ಅಭ್ಯರ್ಥಿಗಳಲ್ಲಿ ತಳಮಳ ಸೃಷ್ಟಿಸಿರುವುದಂತೂ ಸತ್ಯ. ಜೊತೆಗೆ ಈ ಬಾರಿಯ ಚುನಾವಣೆಯಲ್ಲಿ ಅನೇಕ ಹೊಸ ಮುಖಗಳನ್ನು ನೋಡುವ ಭಾಗ್ಯ ಜಿಲ್ಲೆಯ ಮತದಾರರಿಗೆ ದೊರೆತಿದೆ. ಇಷ್ಟು ವರ್ಷಗಳಿಂದ ಒಂದೇ ಕಡೆ ತಳವೂರಿದ್ದ ಜಬ್ಬಾರ್‌ಖಾನ್ ಹೊನ್ನಳ್ಳಿ, ಎಸ್.ಆರ್. ಮೋರೆ, ಎಸ್.ಐ.ಚಿಕ್ಕನಗೌಡ್ರು ಮುಂತಾದವರು ತಳಕಿತ್ತು ಬೇರೆಡೆ ಹೋಗಿದ್ದಾರೆ.



ಅನಿಲ್ ಪಾಟೀಲ್

ತಾನು ಕಲಘಟಗಿ ಕ್ಷೇತ್ರದಲ್ಲಿಯೇ ಉಳಿಯುವೆ ಎಂದುಕೊಂಡು ಕೆಲಸ ಮಾಡಿದ್ದ ನಾಗರಾಜ ಛಬ್ಬಿ ಶ್ರೀನಿವಾಸ ಮಾನೆ, ವಿಶ್ವಪ್ರಕಾಶ ಉಳ್ಳಾಗಡ್ಡಿಮಠರಿಗೆಲ್ಲ ಕಾಂಗ್ರೆಸ್ 'ಕೈ' ಕೊಟ್ಟು ಬಳ್ಳಾರಿಯ ಗಣಿಧಣಿ ಸಂತೋಷ ಲಾಡ್‌ಗೆ ಕೆಂಪುಹಾಸಿಗೆಯ ಸ್ವಾಗತ ಮಾಡಿದೆ. ಆದ್ದರಿಂದ ಸಂತೋಷ್ ಲಾಡ್ ವಿರುದ್ಧ ಕಾಂಗ್ರೆಸ್ಸಿಗರೇ ಬಿಎಸ್‌ಪಿಯ ಬಾಬು ಸಾಬ್ ಕಾಸೀಮ್‌ಗೆ ಸಾಥ್ ನೀಡುವ ಎಲ್ಲ ಲಕ್ಷಣಗಳೂ ಕಾಣುತ್ತಿವೆ. ಹಣ ಬಲದಿಂದಲೇ ಚುನಾವಣೆಗೆ ನಿಲ್ಲುತ್ತಿರುವ ಲಾಡ್ ಇಡೀ ಕಲಘಟಗಿ ಕ್ಷೇತ್ರದಾದ್ಯಂತ ಹಣದ ಹೊಳೆಯನ್ನು ಹರಿಸುತ್ತಿದ್ದಾನೆ. ಕ್ಷೇತ್ರದ ಅಭಿವೃದ್ಧಿಗೆಂದು ಕಲಘಟಗಿಯ ಐಶ್ವರ್ಯ ಹೋಟೆಲ್ ಎದುರು ಐದು ಜೆಸಿಬಿ ಯಂತ್ರಗಳನ್ನು, ಎರಡು ಬೋರ್‌ವೆಲ್ ಕೊರೆಯುವ ಯಂತ್ರಗಳನ್ನು ತಂದು ನಿಲ್ಲಿಸಿದ್ದಾನೆ. ಜೊತೆಗೆ ಕ್ಷೇತ್ರದ ದೇವಾಲಯಗಳಿಗೆ, ಸಂಘಸಂಸ್ಥೆಗಳಿಗೆ ಲಕ್ಷಾಂತರ ದುಡ್ಡು ಹಂಚುತ್ತಾ ಇಡೀ ಕ್ಷೇತ್ರವನ್ನು ಗರಂ ಮಾಡುತ್ತಿದ್ದಾನೆ.



ಬೆಳಗಿ

ಕಲಘಟಗಿ ಕ್ಷೇತ್ರದ ರುಚಿ ಕಂಡಿದ್ದ ಎಸ್.ಐ.ಚಿಕ್ಕನಗೌಡ್ರು ಮತ್ತು ಪಿ.ಸಿ.ಸಿದ್ಧನಗೌಡ್ರು ಈಗ ಜಾಗ ಖಾಲಿ ಮಾಡಿ ಪಕ್ಕದ ಕುಂದಗೋಳ ಕ್ಷೇತ್ರಕ್ಕೆ ವಲಸೆಹೋಗಿದ್ದಾರೆ. ಈ ಮಾವ-ಅಳಿಯಂದಿರಿಬ್ಬರ ತಿಕ್ಕಾಟ ವಾಸ್ತವದಲ್ಲಿ ಕಾಂಗ್ರೆಸ್‌ನ ಸಿ.ಎಸ್.ಶಿವಳ್ಳಿಯ ದಾರಿಯನ್ನು ಸುಗಮಗೊಳಿಸಿದೆ.

ಇನ್ನು ಧಾರವಾಡದಲ್ಲಿ ಕಾಯಂ ಆಗಿ ತಳವೂರಿದ್ದ ಮರಾಠಿಗ ಎಸ್.ಆರ್.ಮೋರೆ ಇದೇ ಕ್ಷೇತ್ರದಲ್ಲಿ ಉಳಿದರೆ ಸೋಲುವುದು ಗ್ಯಾರಂಟಿ ಎಂದುಕೊಂಡು ಪಕ್ಕದ ಧಾರವಾಡ ಗ್ರಾಮೀಣ ಕ್ಷೇತ್ರಕ್ಕೆ ಹಾರುವ ತಯಾರಿಯಲ್ಲಿದ್ದಾನೆ. ಆ ಕ್ಷೇತ್ರದಿಂದಲೇ ಆರಿಸಿಬಂದಿದ್ದ ವಿನಯ್ ಕುಲಕರ್ಣಿ ತನ್ನ ಹಿತಶತ್ರು ಮೋರೆಗೆ ಅಡ್ಡಬೇಲಿ ಕಟ್ಟುತ್ತಿದ್ದಾನೆ. ಇಲ್ಲಿ ಮೋರೆಗೆ ಟಿಕೆಟ್ ಸಿಕ್ಕಿದ್ದೇ ಆದರೆ ವಿನಯ್ ಕುಲಕರ್ಣಿ ಬಂಡಾಯವೇಳುವುದು ಖಚಿತ.

ಒಮ್ಮೆಯೂ ಧಾರವಾಡಕ್ಕೆ ಕಾಲಿಡದಿದ್ದ ಕಾಂಗ್ರೆಸ್‌ನ ಜಬ್ಬಾರ್‌ಖಾನ್ ಹೊನ್ನಳ್ಳಿ ಹುಬ್ಬಳ್ಳಿ ಮೀಸಲು ಕ್ಷೇತ್ರ ಆಗಿದ್ದೇ ತಡ ಓಡೋಡಿ ಬಂದು ಮುಸ್ಲಿಮ್ ಲೀಡರುಗಳ ಓಲೈಕೆಯಲ್ಲಿ ನಿರತನಾಗಿದ್ದಾನೆ. ಆ ಲೀಡರುಗಳೆಲ್ಲಾ ಇವನ ಮುಖಕ್ಕೆ ಉಗಿದು ಕಳಿಸಿದ್ದಾರೆಂಬುದು ಬೇರೆ ಮಾತು. ಹೊನ್ನಳ್ಳಿ ಇಲ್ಲಿ ಸ್ಪರ್ಧಿಸುತ್ತಿರುವುದು, ಮುಸ್ಲಿಮ್ ಸಮುದಾಯ ಜೆಡಿಎಸ್‌ನ ಇಸ್ಮಾಯಿಲ್‌ನನ್ನು ಬೆಂಬಲಿಸುತ್ತಿರುವುದು ವಾಸ್ತವದಲ್ಲಿ ಬಿಜೆಪಿಯ ಚಂದ್ರಕಾಂತ ಬೆಲ್ಲದ್‌ಗೆ ಅನುಕೂಲ ಮಾಡಿಕೊಟ್ಟಿದೆ.

ನವಲಗುಂದ ಕ್ಷೇತ್ರದ ಮಾಜಿ ಶಾಸಕ ಡಾ.ಶಿರಿಯಣ್ಣನವರ್‌ಗೆ ಖೊಕ್ ಕೊಟ್ಟು ಬಸವರಾಜ ಬೊಮ್ಮಾಯಿಯ ಶಿಷ್ಯ ಶಂಕರ ಪಾಟೀಲ್ ಮುನೇಕೊಪ್ಪನಿಗೆ ಬಿಜೆಪಿಯ ಟಿಕೆಟ್ ನೀಡಲಾಗಿದೆ. ಕುಂದಗೋಳದ ಮಾಜಿ ಶಾಸಕ ಎಂ.ಎಸ್. ಅಕ್ಕಿಗೆ ಎಂಎಲ್‌ಸಿ ಸೀಟ್ ತೋರಿಸಿಯೇ ಎಸ್.ಐ.ಚಿಕ್ಕನಗೌಡ್ರಿಗೆ ಬಿಜೆಪಿಯ ಟಿಕೆಟ್ ನೀಡಲಾಗಿದೆ. ಇದರ ಹಿಂದೆ ಜಗದೀಶ್ ಶೆಟ್ಟರ್ ಮತ್ತು ಬಸವರಾಜ ಬೊಮ್ಮಾಯಿ ಕೈಯಾಡಿಸಿರುವುದು ಎಲ್ಲರಿಗೂ ಗೊತ್ತಿರುವ ರಹಸ್ಯ.

ಹುಬ್ಬಳ್ಳಿ ಶಹರ ಮೀಸಲು ಕ್ಷೇತ್ರವಾದ ನಂತರ ಕಾಂಗ್ರೆಸ್‌ನಲ್ಲಿ ಎಚ್ಕೆ ಪರ ಮತ್ತು ವಿರೋಧಿ



ಸಂತೋಷ್ ಲಾಡ್

ಗುಂಪುಗಳಿಂದ ಎಫ್.ಎಚ್. ಜಕ್ಕಪ್ಪನವರ್, ಪ್ರಸಾದ ಅಬ್ಬಯ್ಯ, ಶಂಕ್ರಣ್ಣಾ ಬಿಜವಾಡ, ಪ್ರಕಾಶ ಕ್ಯಾರಕಟ್ಟಿ ರೇಸ್‌ನಲ್ಲಿದ್ದಾರೆ. ಬಿಜೆಪಿಯಲ್ಲಿ ಅನಂತು ಮತ್ತು ಯಡ್ಡಿ ಬಣಗಳಿಂದ ವೀರಭದ್ರಪ್ಪ ಹಾಲರವಿ, ವೆಂಕಟೇಶ್ ಮೇಸ್ತ್ರಿ ಲಕ್ಷ್ಮಣ ಬಳಗಿಯನ್ನೊಳಗೊಂಡ ದೊಡ್ಡ ದಂಡೇ ರೆಡಿಯಾಗಿದೆ. ಜೆಡಿಎಸ್‌ನಿಂದ ಶಿವು ಹಿರೇಕೆರೂರ, ಸಮಾಜವಾದಿ ಪಕ್ಷದಿಂದ ಗೋವಿಂದ ಹರಿವಾಣ, ಬಿಎಸ್‌ಪಿಯಿಂದ ಶೋಭ ಬಳ್ಳಾರಿ ಸ್ಪರ್ಧಿಸಲಿದ್ದಾರಾದರೂ ಇವರೆಲ್ಲ ಆಟಕ್ಕುಂಟು ಲೆಕ್ಕಕ್ಕಿಲ್ಲ.

ಹುಬ್ಬಳ್ಳಿ ಗ್ರಾಮೀಣ (ಸೆಂಟ್ರಲ್) ಕ್ಷೇತ್ರದಿಂದ ಬಿಜೆಪಿಯ ಜಗದೀಶ್ ಶೆಟ್ಟರ್, ಕಾಂಗ್ರೆಸ್‌ನಿಂದ ಶಂಕ್ರಣ್ಣ ಮನವಳ್ಳಿ, ರಾಜಾ ದೇಸಾಯಿ, ಅನಿಲ್ ಪಾಟೀಲ್ ಸ್ಪರ್ಧೆಯಲ್ಲಿದ್ದಾರೆ. ಜೆಡಿಎಸ್‌ನಿಂದ ರಾಜಣ್ಣ ಕಓರವಿ, ಫಿರೋಜ್ ಕೊಣ್ಣೂರ್ (ಕಾಂಗ್ರೆಸ್ ತೊರೆದ ಮಾಜಿ ಮಹಾಪೌರ) ಸ್ಪರ್ಧಿಸಲಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ಹಲವು ಘಟಾನುಘಟಿಗಳ ಪಾಲಿಗೆ ಈ ಚುನಾವಣೆ ಒಂದು ಅಗ್ನಿ ಪರೀಕ್ಷೆಯಾಗಿರುವುದಂತೂ ಸತ್ಯ.


■ ವರದಿಗಾರ


ಚಿತ್ರದುರ್ಗ ಪಕ್ಷಾಂತರಿಗಳ ದೊಂಬರಾಟ

ಚಿತ್ರದುರ್ಗ ಜಿಲ್ಲೆಯಲ್ಲಿ ಈ ಬಾರಿ ಚುನಾವಣಾ ಲೆಕ್ಕಾಚಾರಗಳೇ ಅಯೋಮಯವಾಗಿವೆ. ಎಲ್ಲಾ ಪಕ್ಷಗಳಲ್ಲೂ ಗೆಲ್ಲುವ ಅಭ್ಯರ್ಥಿಗಳಿಗಾಗಿ ಹುಡುಕಾಟ ಪ್ರಾರಂಭವಾಗಿದೆ. ಬಿಜೆಪಿಯಲ್ಲಿ ಪಕ್ಷಾಂತರಿಗಳದ್ದೇ ಪಾರುಪತ್ಯವಾದರೆ, ಬಿಜೆಪಿ-ಕಾಂಗ್ರೆಸ್‌ಗೆ ಈಗಾಗಲೇ ಬಂಡಾಯದ ಬಿಸಿ ತಟ್ಟಲು ಪ್ರಾರಂಭವಾಗಿದೆ. ಜೆಡಿಎಸ್‌ಗೆ ಇಂತಹ ಸಮಸ್ಯೆಗಳೇನೂ ಇಲ್ಲ. ಅದು ಟಿಕೆಟ್ ಹಂಚಿಕೆಗೂ ಕೊನೇಗಳಿಗೆಯ ಲೆಕ್ಕಾಚಾರಗಳನ್ನು ತನ್ನ ಕಡೆ ತಿರುಗಿಸಿಕೊಳ್ಳುವ ಪ್ರಯತ್ನದಲ್ಲಿದೆ.


ಆಂಜನೇಯ


ಬಸವರಾಜನ್


ಭಾಸ್ಕರ್


ತಿಪ್ಪೇಸ್ವಾಮಿ

ಚಿತ್ರದುರ್ಗ ಜಿಲ್ಲೆಯಲ್ಲಿ ಈ ಬಾರಿ ಚುನಾವಣಾ ಲೆಕ್ಕಾಚಾರಗಳೇ ಅಯೋಮಯವಾಗಿವೆ. ಎಲ್ಲಾ ಪಕ್ಷಗಳಲ್ಲೂ ಗೆಲ್ಲುವ ಅಭ್ಯರ್ಥಿಗಳಿಗಾಗಿ ಹುಡುಕಾಟ ಪ್ರಾರಂಭವಾಗಿದೆ. ಬಿಜೆಪಿಯಲ್ಲಿ ಪಕ್ಷಾಂತರಿಗಳದ್ದೇ ಪಾರುಪತ್ಯವಾದರೆ, ಕಾಂಗ್ರೆಸ್‌ನಲ್ಲಿ ಹಾಲಿ ಶಾಸಕರುಗಳಾಗಿದ್ದ ಐದು ಜನರಲ್ಲಿ ಇಬ್ಬರಿಗೆ ಕ್ಷೇತ್ರ ಬದಲಾವಣೆಯಾಗಿರುವುದು ಹಾಗೂ ಹಿರಿಯೂರು-ಚಿತ್ರದುರ್ಗದಲ್ಲಿ ಉದ್ದನೆಯ ಆಕಾಂಕ್ಷಿಗಳ ಪಟ್ಟಿ, ರಾಜಕೀಯ ಪ್ರಾತಿನಿಧ್ಯದ ಸಮತೋಲನ ಕಾಯ್ದುಕೊಳ್ಳಬೇಕೆಂಬ ಅಂಶಗಳು ತಲೆನೋವಾಗಿ ಪರಿಣಮಿಸಿವೆ. ಹಾಗಾಗಿ ಬಿಜೆಪಿ-ಕಾಂಗ್ರೆಸ್‌ಗೆ ಈಗಾಗಲೇ ಬಂಡಾಯದ ಬಿಸಿ ತಟ್ಟಲು ಪ್ರಾರಂಭವಾಗಿದೆ. ಜೆಡಿಎಸ್‌ಗೆ ಇಂತಹ ಸಮಸ್ಯೆಗಳೇನೂ ಇಲ್ಲ. ಅದು ಟಿಕೆಟ್ ಹಂಚಿಕೆಗೂ ಕೊನೇಗಳಿಗೆಯ ಲೆಕ್ಕಾಚಾರಗಳನ್ನು ತನ್ನ ಕಡೆ ತಿರುಗಿಸಿಕೊಳ್ಳುವ ಪ್ರಯತ್ನದಲ್ಲಿದೆ.

ಬಿಜೆಪಿಯಲ್ಲಿ ಪಕ್ಷಾಂತರಿಗಳ ಪಾರುಪತ್ಯದಲ್ಲಿ ನಿಷ್ಠಾವಂತ ಕಾರ್ಯಕರ್ತರು, ಪಕ್ಷಕ್ಕಾಗಿ ದುಡಿದ ಮುಖಂಡರುಗಳನ್ನೆಲ್ಲಾ ಸಾರಾಸಗಟಾಗಿ ಪಕ್ಕಕ್ಕಿರಿಸಲಾಗಿದೆ. ಚಳ್ಳಕೆರೆಯಿಂದ ಸ್ಪರ್ಧಿಸುತ್ತಿರುವ ಮಾಜಿ ಸಚಿವ ತಿಪ್ಪೇಸ್ವಾಮಿ, ಚಿತ್ರದುರ್ಗದಿಂದ ಸ್ಪರ್ಧಿಸುತ್ತಿರುವ ಜಿ.ಎಸ್. ಮಂಜುನಾಥ್, ಹಿರಿಯೂರಿನಿಂದ ಸ್ಪರ್ಧಿಸುತ್ತಿರುವ ಲಕ್ಷ್ಮಿಕಾಂತ್ ಎಲ್ಲರೂ ಪಕ್ಷಾಂತರಿಗಳೇ. ಕಾಂಗ್ರೆಸ್‌ನಲ್ಲಿ ಎಚ್. ಆಂಜನೇಯ ಮಾತ್ರ ಜೆಡಿಎಸ್‌ನಿಂದ ಎಂಟ್ರಿಯಾಗಿದ್ದಾರೆ.

ಚಳ್ಳಕೆರೆ

ಎಸ್.ಟಿ. ಮೀಸಲು ಕ್ಷೇತ್ರವಾಗಿರುವ ಚಳ್ಳಕೆರೆಯಲ್ಲಿ ಜೆಡಿಎಸ್‌ನಿಂದ ವಲಸೆ ಬಂದಿರುವ ಮಾಜಿ ಸಚಿವ ತಿಪ್ಪೇಸ್ವಾಮಿಗೆ ಟಿಕೆಟ್ ನೀಡಲಾಗಿದೆ. ಚಲನಚಿತ್ರ ನಟ, ಮಾಜಿ ಸಂಸದ ಶಶಿಕುಮಾರ್ ಅಥವಾ ಭಕ್ತರಾಮೇಗೌಡ ಇಬ್ಬರಲ್ಲೊಬ್ಬರು ಕಾಂಗ್ರೆಸ್‌ನ ಅಭ್ಯರ್ಥಿಗಳಾಗುವ ಸಾಧ್ಯತೆ ಇದೆ. ಜೆಡಿಎಸ್‌ನಿಂದ ಸಿದ್ದರಾಮಯ್ಯನವರ ಜೊತೆ ಬಂದ ಪ್ರಮುಖ ನಾಯಕರಲ್ಲಿ ಭಕ್ತರಾಮೇಗೌಡರೂ ಒಬ್ಬರಾಗಿರುವುದರಿಂದ ಸಿದ್ದರಾಮಯ್ಯನವರ ಬೆಂಬಲಿಗರ ಕೋಟಾದಲ್ಲಿ ಟಿಕೆಟ್ ಖಾಯಂ ಎಂದೇ ಹೇಳಲಾಗುತ್ತಿದೆ.

ಉಳಿದಂತೆ ಕಾಂಗ್ರೆಸ್‌ನಿಂದ ಸ್ಥಳೀಯರಾದ ಪೊಲೀಸ್ ಈರಣ್ಣ ಕಾಲುವೆಹಳ್ಳಿ ಶ್ರೀನಿವಾಸ್, ರಘುಮೂರ್ತಿ, ಜಗಳೂರಯ್ಯ ಆಕಾಂಕ್ಷಿಗಳಾಗಿದ್ದಾರೆ. ಜೆಡಿಎಸ್‌ನಿಂದ ನಟ ಸುದೀಪ್ ಸ್ಪರ್ಧಿಸಲಿದ್ದಾರೆಂಬ ಮಾತುಗಳು ಕೇಳಿಬರುತ್ತಿವೆ. ಸ್ಥಳೀಯವಾಗಿ ಪುರಸಭಾ ಸದಸ್ಯ ಸಿ. ತಿಪ್ಪೇಸ್ವಾಮಿ, ಓ. ನರಸಿಂಹಮೂರ್ತಿ, ಬೋರನಾಯ್ಕ, ಒನ್ ಟೂ ತ್ರಿ ಪಾಪಣ್ಣ ಆಕಾಂಕ್ಷಿಗಳ ಪಟ್ಟಿಯಲ್ಲಿದ್ದಾರೆ. ಇವರಲ್ಲಿ ಸಿ. ತಿಪ್ಪೇಸ್ವಾಮಿಗೆ ಟಿಕೆಟ್ ಸಿಗುವ ಸಾಧ್ಯತೆಗಳು ಹೆಚ್ಚಾಗಿವೆ.

ಮೊಳಕಾಲ್ಮೂರು

ಮೊಳಕಾಲ್ಮೂರು ಈವರೆಗೂ ಸಾಮಾನ್ಯ ಕ್ಷೇತ್ರವಾಗಿದ್ದರೂ ಬರೀ ನಾಯಕ ಜನಾಂಗದ ಮುಖಂಡರೇ ಚುನಾಯಿತರಾಗುತ್ತಿದ್ದುದರಿಂದ ಅಘೋಷಿತವಾಗಿ ಎಸ್ಟಿ ಮೀಸಲು ಕ್ಷೇತ್ರದಂತೆಯೇ ಇತ್ತು. ಈಗದು ಅಧಿಕೃತ ಎಸ್ಟಿ ಮೀಸಲು ಕ್ಷೇತ್ರವಾಗಿದೆ. ಮೂರು ಬಾರಿ ಶಾಸಕರಾಗಿದ್ದ ಎನ್.ವೈ. ಗೋಪಾಲಕೃಷ್ಣ ಅವರಿಗೆ ಕಾಂಗ್ರೆಸ್ ಟಿಕೆಟ್ ಖಚಿತವಾಗಿದೆ. ಜೆಡಿಎಸ್‌ನಿಂದ ಎತ್ನಟ್ಟಗೌಡ ಸ್ಪರ್ಧಿಸುವುದೂ ಬಹುತೇಕ ತೀರ್ಮಾನವಾಗಿದೆ. ಇಲ್ಲಿ ಪೈಪೋಟಿ ಅಂತ ಇರುವುದು ಬಿಜೆಪಿಯಲ್ಲಿ ಶ್ರೀರಾಮುಲು ಪ್ರಭಾವ ಗಾಢವಾಗಿ ಬಿಜೆಪಿಯಿಂದ ಸ್ಪರ್ಧಿಸುವವರ ಗೆಲುವು ನಿಶ್ಚಿತ ಎಂಬ ಅಭಿಪ್ರಾಯವಿರುವುದರಿಂದ ಆಕಾಂಕ್ಷಿಗಳ ಪಟ್ಟಿ ದೊಡ್ಡದಾಗಿದೆ. ಮಾಜಿ ಶಾಸಕ ಪೂರ್ಣಮುತ್ತಯ್ಯನವರ ಪುತ್ರ ಪೂರ್ಣ ಓಬಯ್ಯ ಚಳ್ಳಕೆರೆ ತಾಲ್ಲೂಕು ಪಂಚಾಯ್ತಿ ಮಾಜಿ ಅಧ್ಯಕ್ಷ ನೇರಗುಂಟೆ ತಿಪ್ಪೇಸ್ವಾಮಿ, ಎಸ್ಟಿ ಮೋರ್ಛಾದ ಜಿಲ್ಲಾ ಅಧ್ಯಕ್ಷ ದಾಸರಿ ಕೀರ್ತಿಕುಮಾರ್, ಭೋಗನಹಳ್ಳಿ ರಾಜಣ್ಣ ಎಪಿಎಂಸಿ ಉಪಾಧ್ಯಕ್ಷ ಕೆಳಗಳ ಹಟ್ಟಿ ತಿಪ್ಪೇಸ್ವಾಮಿಯವರ ಹೆಸರುಗಳು ಕೇಳಿಬರುತ್ತಿವೆ. ದಾಸರಿಕೀರ್ತಿ ಕುಮಾರ್, ಪೂರ್ಣ ಓಬಯ್ಯ ಇಬ್ಬರಲ್ಲೊಬ್ಬರಿಗೆ ಟಿಕೆಟ್ ಸಿಗುವ ಸಾಧ್ಯತೆ ಇದೆ.

ಹಿರಿಯೂರು


ಮೀಸಲು ಕ್ಷೇತ್ರವಾಗಿದ್ದ ಹಿರಿಯೂರು ಈಗ ಸಾಮಾನ್ಯ ಕ್ಷೇತ್ರವಾಗಿರುವುದರಿಂದ ಬಹಳ ಚರ್ಚೆಗೆ ಗ್ರಾಸವಾಗಿರುವ ಕ್ಷೇತ್ರವಾಗಿದೆ. ಇಲ್ಲಿ ಕಾಂಗ್ರೆಸ್‌ನ ಆಕಾಂಕ್ಷಿಗಳ ಪಟ್ಟಿ ಹನುಮಂತನ ಬಾಲದಂತಿದೆ. ಕ್ಷೇತ್ರ ಕಳೆದುಕೊಂಡಿರುವ ಚಳ್ಳಕೆರೆ ಮಾಜಿ ಶಾಸಕ ಡಿ. ಸುಧಾಕರ್, ಹೊಳಲ್ಕೆರೆಯ ಮಾಜಿ ಶಾಸಕ ಎ.ವಿ. ಉಮಾಪತಿ, ಸಿದ್ದರಾಮಯ್ಯನ ಬೆಂಬಲಿಗರ ಕೋಟಾದಲ್ಲಿರುವ ಮಾಜಿ ಸಂಸದ ಪಿ. ಕೋದಂಡರಾಮಯ್ಯ, ಸ್ಥಳೀಯರು ಹಾಗೂ ಪಕ್ಷಕ್ಕೆ ದುಡಿದವರೆಂಬ ಕಾರಣಕ್ಕೆ ಕಾಂಗ್ರೆಸ್ನ ಜಿಲ್ಲಾಧ್ಯಕ್ಷ ಆರ್. ಮಂಜುನಾಥ್ ಕಳೆದ ಬಾರಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಪರಾಭವಗೊಂಡ ಪೌರಸೇವಾ ನೌಕರರ ಸಂಘದ ರಾಜ್ಯಾಧ್ಯಕ್ಷ ಜಿ.ಎಸ್. ಮಂಜುನಾಥ್, ಹಾಲಿ ಜಿಲ್ಲಾ ಪಂಚಾಯ್ತಿ ಅಧ್ಯಕ್ಷೆ ಗೀತಾನಂದಿನಿ ಗೌಡ, ಸಾರಂಗಯ್ಯ ಇವರ ಹೆಸರುಗಳು ಚಾಲ್ತಿಯಲ್ಲಿವೆ. ಇವರಲ್ಲಿ ಯಾರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಬೇಕು? ಈಗಾಗಲೇ ಬಿಜೆಪಿಯ ಅಭ್ಯರ್ಥಿಯಾಗಿ ಎನ್.ಆರ್. ಲಕ್ಷ್ಮಿಕಾಂತ್ ಹೆಸರು ಅಂತಿಮವಾಗಿ ಚುನಾವಣಾ ಪ್ರಚಾರದಲ್ಲಿರುವುದರಿಂದ ಅದೇ ಸಮುದಾಯಕ್ಕೆ ಸೇರಿದ ಮಾಜಿ ಶಾಸಕ ಎ.ವಿ. ಉಮಾಪತಿ, ಮಾಜಿ ಸಂಸದ ಕೋದಂಡರಾಮಯ್ಯ, ಸಾರಂಗಯ್ಯ, ಗೀತಾನಂದಿನಿಗೌಡ ಈ ನಾಲ್ವರಲ್ಲಿ ಯಾರಿಗೇ ಟಿಕೆಟ್ ನೀಡಿದರೂ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿನ ಲೆಕ್ಕಾಚಾರಗಳು ದುರ್ಬಲವಾಗಲಿವೆ. ಹಾಗೆಂದು ಟಿಕೆಟ್ ತಪ್ಪಿಸಿದರೆ ಕ್ಷೇತ್ರದಲ್ಲಿ ನಿರ್ಣಾಯಕವಾಗಿರುವ ಯಾದವ ಜನಾಂಗದ ಓಟುಗಳನ್ನು ಕಾಂಗ್ರೆಸ್ ಕಳೆದುಕೊಳ್ಳಬೇಕಾಗುತ್ತದೆ. ಎ.ವಿ. ಉಮಾಪತಿಯ ಪರವಾಗಿ ಮಾಜಿ ಸಚಿವ ಕೃಷ್ಣಪ್ಪ, ಕೋದಂಡರಾಮಯ್ಯನವರ ಪರವಾಗಿ ಸಿದ್ದರಾಮಯ್ಯ ಜಂಗಿಕುಸ್ತಿ ಮಾಡುತ್ತಿದ್ದಾರೆ. ಇನ್ನೂ ಒಕ್ಕಲಿಗ ಜನಾಂಗದ ಓಟುಗಳೂ ನಿರ್ಣಾಯಕವಾಗಿರುವುದರಿಂದ ಟಿಕೆಟ್ ತಮಗೆ ನೀಡಬೇಕೆಂಬುದು ಆರ್. ಮಂಜುನಾಥ್ ಬೇಡಿಕೆ. ಆರ್. ಮಂಜುನಾಥ್ ಲಾಗಾಯ್ತಿನಿಂದ ಕಾಂಗ್ರೆಸ್ಸಿಗನಾಗಿ ದುಡಿದವರು ಮತ್ತು ಸ್ಥಳೀಯರು ಎಂಬುದು ಮಹತ್ವ ಪಡೆದುಕೊಂಡಿದೆ. ಸಾಮಾನ್ಯ ಕ್ಷೇತ್ರವಾಗಿದ್ದರೂ ಎಡಗೈ ಸಮುದಾಯಕ್ಕೆ ಸೇರಿದ, ಪೌರಸೇವಾ ನೌಕರರ ಸಂಘದ ರಾಜ್ಯಾಧ್ಯಕ್ಷ ಜಿ.ಎಸ್. ಮಂಜುನಾಥ್ ಆಕಾಂಕ್ಷಿಯಾಗಿ ಅರ್ಜಿಯನ್ನು ಗುಜರಾಯಿಸಿದ್ದಾರೆ.

ಚಳ್ಳಕೆರೆಯ ಮಾಜಿ ಶಾಸಕ ಡಿ. ಸುಧಾಕರ್ ಚುನಾವಣೆ ಘೋಷಣೆಯಾದ ತಕ್ಷಣವೇ ಟಿಕೆಟ್ ಸಿಗುತ್ತೋ ಬಿಡುತ್ತೋ ಎಂಬಂತಹ ಅನುಮಾನಿತ ಲೆಕ್ಕಾಚಾರಗಳನ್ನು ಬದಿಗಿರಿಸಿ ಹಿರಿಯೂರು ಕ್ಷೇತ್ರದಾದ್ಯಂತ ಪ್ರಚಾರ ಶುರುವಿಟ್ಟುಕೊಂಡಿದ್ದಾರೆ. ಅಲ್ಲಲ್ಲಿ ಸಭೆ ಸಮಾರಂಭಗಳು, ಸ್ತ್ರೀಶಕ್ತಿ-ಸ್ವಸಹಾಯ ಗುಂಪುಗಳ ಸಮಾವೇಶ ನಡೆಸಿ ತಾವೇ ಕಾಂಗ್ರೆಸ್ ಅಭ್ಯರ್ಥಿ ಎಂದು ಮುನ್ನುಗ್ಗುತ್ತಿದ್ದಾರೆ. ಇಲ್ಲಿ ಒಕ್ಕಲಿಗ ಮತ್ತು ಯಾದವ ಸಮುದಾಯಗಳ ಪ್ರಬಲ ಪೈಪೋಟಿಯ ನಡುವೆ ಉಳಿದ ಜನಾಂಗಗಳ ಬೆಂಬಲದಿಂದ ಗೆಲ್ಲಬಹುದೆಂಬ ಲೆಕ್ಕಾಚಾರ ಹಾಗೂ ಪಕ್ಷ ಟಿಕೆಟ್ ನೀಡದಿದ್ದರೂ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವ ನಿರ್ಣಯ ಮಾಡಿಕೊಂಡೇ ಸುಧಾಕರ್ ಫೀಲ್ಡಿಗಿಳಿದಿದ್ದಾರೆ. ಈ ನಡುವೆ ಬೆಂಗಳೂರಿನಲ್ಲಿ ಕೆ.ಎಚ್. ರಂಗನಾಥ್‌ರವರು ತಮ್ಮ ಮನೆಯಂಗಳದಲ್ಲಿ ಸುಧಾಕರ್‌ರ ಕೈಹಿಡಿದು ವಾಕ್ ಮಾಡುತ್ತಿರುವುದನ್ನು ನೋಡಿದವರು ದಂಗಾಗಿ ಕುಳಿತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಹಿರಿಯೂರು ಕಾಂಗ್ರೆಸ್ ಮಟ್ಟಿಗೆ ಪಕ್ಷದ ಟಿಕೆಟ್ ಪಡೆದುಕೊಂಡವನೇ 'ಮಹಾಶೂರ' ಎಂಬಂತಾಗಿದೆ. ಬಿಎಸ್‌ಪಿಯಿಂದ ಸಜ್ಜನಿಕೆಯ ವಡ್ಡಿಕೆರೆ ಕಾಂತರಾಜ್ ಸ್ಪರ್ಧಿಸಲಿದ್ದಾರೆ.


ಗೀತಾ ನಂದಿನಿ


ಹೆಬ್ಬಳ್ಳಿ


ಲಕ್ಷ್ಮೀಕಾಂತ್


ಉಮಾಪತಿ

ಚಿತ್ರದುರ್ಗ

ಚಿತ್ರದುರ್ಗದಲ್ಲಿ ಜೆಡಿಎಸ್‌ನಿಂದ ಎಸ್.ಕೆ. ಬಸವರಾಜನ್, ಬಿಜೆಪಿಯಿಂದ ಭೀಮಸಮುದ್ರದ ಅಡಿಕೆ ಸಾಹುಕಾರ ಜಿ.ಎಸ್. ಮಂಜುನಾಥ್‌ಗೆ ಟಿಕೆಟ್ ನೀಡಲಾಗಿದ್ದು ಈಗಾಗಲೇ ಪ್ರಚಾರ ಆರಂಭಿಸಿದ್ದಾರೆ. ಸಮಸ್ಯೆ ಇರುವುದು ಕಾಂಗ್ರೆಸ್‌ನಲ್ಲಿ, ಹ್ಯಾಟ್ರಿಕ್ ಶಾಸಕ ಜಿ.ಎಚ್. ತಿಪ್ಪಾರೆಡ್ಡಿಗೆ ಇನ್ನೂ ಟಿಕೆಟ್ ಗ್ಯಾರಂಟಿಯಾಗಿಲ್ಲ. ಲಾಗಾಯ್ತಿನಿಂದಲೂ ಕಾಂಗ್ರೆಸ್‌ಗೆ ನಿಷ್ಠರಾಗಿರುವ ಎಂ.ಕೆ. ತಾಜ್‌ಪೀರ್ ಈ ಬಾರಿ ಆಕಾಂಕ್ಷಿಯಾಗಿರುವುದು ಕಾಂಗ್ರೆಸ್ ನಾಯಕರಿಗೆ ತಲೆನೋವಾಗಿದೆ. ಜಿಲ್ಲೆಯಲ್ಲಿ ಅಲ್ಪಸಂಖ್ಯಾತರೊಬ್ಬರು ರಾಜಕೀಯ ಲೆಕ್ಕಾಚಾರದ ಮಾನದಂಡಗಳನ್ನಾಧರಿಸಿ ಸ್ಪರ್ಧಿಸಬಹುದಾದ ಏಕೈಕ ಕ್ಷೇತ್ರ ಚಿತ್ರದುರ್ಗವಾಗಿದ್ದು ಟಿಕೆಟ್ ತಮಗೆ ನೀಡಬೇಕೆಂಬುದು ತಾಜ್‌ಪೀರ್‌ರವರ ಅಹವಾಲು. ಈ ಬಾರಿ ಚುನಾವಣೆಯಲ್ಲಿ ಮುಂಚೂಣಿ ಕಾಂಗ್ರೆಸ್ ನಾಯಕರಲ್ಲಿ ಹಿರಿಯ ನಾಯಕ ಜಾಫರ್ ಷರೀಫ್ ಒಬ್ಬರಾಗಿರುವುದು ತಾಜ್‌ಪೀರ್ ಭರವಸೆಗೆ ಕಾರಣವಾಗಿದೆ. ಜಿ.ಎಸ್. ತಿಪ್ಪಾರೆಡ್ಡಿ ಟಿಕೆಟ್ ಖಚಿತವಾಗಿ ಪಡೆಯುತ್ತಾರೆಂಬುದು ಅವರ ಬೆಂಬಲಿಗರ ಅಭಿಪ್ರಾಯ.

ಹೊಸದುರ್ಗ

ಇಲ್ಲಿ ಕಾಂಗ್ರೆಸ್‌ನಿಂದ ಬಿ.ಜಿ. ಗೋವಿಂದಪ್ಪ ಸ್ಪರ್ಧಿಸುವುದು ಬಹುತೇಕ ಖಚಿತವಾಗಿದೆ. ಕಳೆದ ಒಂದೂವರೆ ವರ್ಷದಿಂದ ಹಣವನ್ನು ನೀರಿನಂತೆ ಖರ್ಚು ಮಾಡುತ್ತಾ ಜೆಡಿಎಸ್‌ನಿಂದ ಸ್ಪರ್ಧಿಸುವುದಾಗಿ ಹೇಳುತ್ತಿದ್ದ ಗೂಳಿಹಟ್ಟಿ ಡಿ. ಶೇಖರ್ ಈಗ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾರೆ. ಜೆಡಿಎಸ್‌ನಿಂದ ಹೆಬ್ಬಳ್ಳಿ ಮಲ್ಲಿಕಾರ್ಜುನ, ಇ. ನಂದೀಶ್ ಆಕಾಂಕ್ಷಿಗಳಾಗಿದ್ದಾರೆ. ಬಿಜೆಪಿಯಿಂದ ಜೆಡಿಎಸ್‌ನಿಂದ ವಲಸೆ ಬಂದಿರುವ ಲಿಂಗಮೂರ್ತಿ ಅಥವಾ ಮಾವಿನಕಟ್ಟೆ ಗುರುಸ್ವಾಮಿ ಅಭ್ಯರ್ಥಿಯಾಗಲಿದ್ದಾರೆ.

ಹೊಳಲ್ಕೆರೆ

ಸಾಮಾನ್ಯ ಕ್ಷೇತ್ರವಾಗಿದ್ದ ಹೊಳಲ್ಕೆರೆ ಈಗ ಮೀಸಲು ಕ್ಷೇತ್ರ ಮೀಸಲು ಕ್ಷೇತ್ರವಾಗಿ ಭರಮಸಾಗರ ಕ್ಷೇತ್ರ ರದ್ದಾಗಿ ಈಗ ಹೊಳಲ್ಕೆರೆ-ಚಿತ್ರದುರ್ಗ ಕ್ಷೇತ್ರಗಳಲ್ಲಿ ವಿಲೀನಗೊಂಡಿದೆ. ಹಾಗಾಗಿ ಭರಮಸಾಗರದ ಮಾಜಿ ಶಾಸಕ ಜಿ. ಚಂದ್ರಪ್ಪ ಈಗ ಇಲ್ಲಿ ಬಿಜೆಪಿ ಅಭ್ಯರ್ಥಿ. ಚಂದ್ರಪ್ಪನಿಗೆ ಆರಂಭದಲ್ಲೇ ವಿಘ್ನ ಎದುರಾಗಿದೆ. ಸ್ಥಳೀಯರಾದ ದೇವೇಂದ್ರ ನಾಯ್ಕ್ ಬಿಜೆಪಿಯಲ್ಲಿ ಕಳೆದ 20 ವರ್ಷಗಳಿಂದ ಬಿಜೆಪಿಯಲ್ಲಿ ಸಕ್ರಿಯವಾಗಿ ದುಡಿದು, ಒಳ್ಳೆಯ ಹೆಸರನ್ನು ಪಡೆದಿದ್ದಾರೆ. ಕಾಂಗ್ರೆಸ್‌ನಿಂದ ವಲಸೆ ಬಂದ ಚಂದ್ರಪ್ಪನಿಗೆ ಟಿಕೆಟ್ ನೀಡಿ, ದೇವೇಂದ್ರ ನಾಯ್ಕ್‌ಗೆ ನಿರಾಕರಿಸಿರುವುದು ಸಹಜವಾಗಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ.

ದೇವೇಂದ್ರ ನಾಯ್ಕ್ ಈಗ ಜೆಡಿಎಸ್ ಇಲ್ಲವೇ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಉಮೇದಿನಲ್ಲಿದ್ದಾರೆ. ಆದರೆ ಜೆಡಿಎಸ್‌ನಲ್ಲಿ ಈಶ್ವರ್ ನಾಯ್ಕ್ ಮತ್ತು DDPI ರಂಗಪ್ಪ, ಡಿ. ಮಂಜುನಾಥರ ಪುತ್ರ ಜಗದೀಶ್ ಆಕಾಂಕ್ಷಿಗಳಾಗಿರುವುದರಿಂದ ಟಿಕೆಟ್ ಗಿಟ್ಟಿಸುವುದು ಸುಲಭದ ಮಾತಲ್ಲ.

ಕಾಂಗ್ರೆಸ್‌ನಿಂದ ಭರಮಸಾಗರ ಮಾಜಿ ಶಾಸಕ ಎಚ್. ಆಂಜನೇಯ, ಪೌರಸೇವಾ ನೌಕರರ ಸಂಘದ ರಾಜ್ಯಾಧ್ಯಕ್ಷ ಜಿ.ಎಸ್. ಮಂಜುನಾಥ್, ಹಿರಿಯ ನಾಯಕ ಕೆ.ಎಚ್. ರಂಗನಾಥ್‌ರ ಪುತ್ರ ಭಾಸ್ಕರ್ ಜಿಲ್ಲಾ ಯುವ ಕಾಂಗ್ರೆ ಅಧ್ಯಕ್ಷ ಡಾ. ತಿಪ್ಪೇಸ್ವಾಮಿ ಇವರ ಹೆಸರುಗಳು ಪಟ್ಟಿಯಲ್ಲಿವೆ. ಎಂ.ಪಿ. ಪ್ರಕಾಶ್‌ರ ಜೊತೆಯಲ್ಲಿ ಬಂದ ಎಚ್. ಆಂಜನೇಯ ಟಿಕೆಟ್ ಖಚಿತ ಪಡಿಸಿಕೊಂಡೇ ಕಾಂಗ್ರೆಸ್‌ಗೆ ರಿ-ಎಂಟ್ರಿಯಾಗಿದ್ದಾರೆನ್ನಲಾಗಿದೆ. ಹಳೇ ಕಾಂಗ್ರೆಸ್ಸಿಗರಾಗಿರುವುದರಿಂದ ಆಂಜನೇಯ ಟಿಕೆಟ್ ಪಡೆಯುವುದು ಬಹುತೇಕ ಖಚಿತ ಎಂದೇ ಹೇಳಲಾಗುತ್ತಿದೆ.

■ ವರದಿಗಾರ

ಕ್ಕಬಳ್ಳಾಪುರ:

ೌಡಿ ಶೀಟರ್ ಂಜಿನಪ್ಪನಿಗೆ ಾಂಗ್ರೆಸ್ ಿಕೆಟ್ ಬೇಕಂತೆ?




ಕ್ರಿಮಿನಲ್ ಹಿನ್ನೆಲೆಯವರಿಗೆ ಕಾಂಗ್ರೆಸ್ ಟಿಕೆಟ್ ಕೊಡಲ್ಲ' ು ಕೆಪಿಸಿಸಿ ಅಧ್ಯಕ್ಷ ಖರ್ಗೆ ಹಾಗೂ ಕಾಂಗ್ರೆ ನಾಯಕ ಾರಿ ಹೇಳಿಕೆ ನೀಡಿದ್ದು ನಿಮಗೂ ನೆನಪಿರಬಹುದು.

ಆದರೆ ಈ ಹೇಳಿಕೆ ನೀಡಿದ್ದ ಕಾಂಗ್ರೆ ನಾಯಕರಿಗೇ ತಾವು ್ದ ಮಾತು ಮರೆತುಹೋಗಿದೆಯೆಂದು ಕಾಣುತ್ತಿದೆ.

ಏಕೆಂದರೆ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲೀಗ ಕಾಂಗ್ರೆ ಟಿಕೆಟ್ ುವ ವ್ಯಕ್ತಿ ಎಂ. ಆಂಜಿನಪ್ಪ. ಇವನೊಬ್ಬ ರೌಡಿ ಶೀಟರ್!

ಬೆಂಗಳೂರಿನ ಒಕ್ಕಲಿಗರ ಸಂಘದ ಉಪಾಧ್ಯಕ್ಷನಾಗಿದ್ದ ನಪ್ಪ ಸಂಘದ ಪ್ರತೀ ಚುನಾವಣೆಯಲ್ಲೂ ಗೂಂಡಾಗಿರಿ ಸಂಘದ ಕೋಟ್ಯಂತರ ರೂಪಾಯಿ ಆದಾಯವನ್ನು ಸ್ವಂತಕ್ಕೆ ಸಿದಾತ. ಅಸಲಿಗೆ ಈತನಿಗೂ ಚಿಕ್ಕಬಳ್ಳಾಪುರ ಕ್ಷೇತ್ರಕ್ಕೂ ಧವೇ ಇಲ್ಲ. ಆಂಜಿನಪ್ಪ ಮೂಲತಃ ದೇವನಹಳ್ಳಿ ತಾಲ್ಲೂಕಿನ ಪ್ಪನ ಹಳ್ಳಿಯವನು. ಈತನ ರೌಡಿ ಶೀಟ್ ದಾಖಲೆಗಳಿರು ದೇವನಹಳ್ಳಿ ಪೊಲೀಸ್ ಸ್ಟೇಷನ್‌ನಲ್ಲೆ!

ಚಿಕ್ಕಬಳ್ಳಾಪುರ ವಿಧಾನಸಭಾ ಕ್ಷೇತ್ರ ಮೊದಲು ಮೀಸಲು ವಾಗಿದ್ದಾಗಿನಿಂದಲೂ ಕಾಂಗ್ರೆಸ್‌ನ ಭದ್ರಕೋಟೆಯಂತಿದೆ. ದ ಕೇವಲ ಎರಡು ಬಾರಿ ಮಾತ್ರ ದಳದ ಶಿವಾನಂದ್ ೂ ಮುನಿಯಪ್ಪ ಗೆದ್ದು ಬಂದಿದ್ದರು. ಕ್ಷೇತ್ರ ುವಿಂಗಡಣೆಯಾದ ನಂತರ ಈ ಕ್ಷೇತ್ರ ಈಗ ಜನರಲ್ .



ಜೆ.ಎಚ್. ನಾಗರಾಜ್ ಎನ್. ರಮೇಶ್

ಳದಿಂದ ಈ ಬಾರಿ ಎಚ್.ಡಿ. ರೇವಣ್ಣನ ಶಿಷ್ಯ ಕೆ.ವಿ. ರಾಜ್ (ಕೋಮಲ್ ಮಾಜಿ ಅಧ್ಯಕ್ಷ), ಮಾಜಿ ಎಂಎಲ್‌ಸಿ ಪ್ಪನವರ ಮಗ ಬಚ್ಚೇಗೌಡ ಟಿಕೆಟ್ ಆಕಾಂಕ್ಷಿಗಳಾಗಿದ್ದಾರೆ.

ಬಿಜೆಪಿಯಿಂದ ಕಣಗೇನಹಳ್ಳಿ ನಾಗರಾಜ್ ಅಥವಾ ಭೈರೇಗೌಡ ಹುದು. ಆದರೆ ಚಿಕ್ಕಬಳ್ಳಾಪುರದಲ್ಲಿ ಬಿಜೆಪಿ ಅಭ್ಯರ್ಥಿಗಳು ್ಯಂಟು ಲೆಕ್ಕಕ್ಕಿಲ್ಲ ಎಂಬ ಲೆವೆಲ್‌ನವರು ಅಷ್ಟೆ.

ಇಲ್ಲೇನಿದ್ದರೂ ಜಿದ್ದಾಜಿದ್ದಿ ಹೋರಾಟ ಕಾಂಗ್ರೆಸ್-ಜೆಡಿಎಸ್ ನೆ ಮಾತ್ರ.

ಹಾಲಿ ಸಂಸದ ಆರ್.ಎಲ್. ಜಾಲಪ್ಪನವರೂ ಕೂಡಾ ್ರೆಸ್‌ನವರೇ ಆಗಿದ್ದಾರೆ.


ಈ ಕ್ಷೇತ್ರದಲ್ಲಿ ದಳದ ಅಭ್ಯರ್ಥಿಯನ್ನು ಎದುರಿಸಿ ಕಾಂಗ್ರೆಸ್ ಗೆಲಸಬಲ್ಲ ಮೂರ್ನಾಲ್ಕು ಸಮರ್ಥ ಅಭ್ಯರ್ಥಿಗಳಿದ್ದಾರೆ. ಳ್ಳಾಪುರ ಜಿಲ್ಲಾ ರಚನೆಗಾಗಿ ಅವಿರತವಾಗಿ ಹೋರಾಡಿದ ಳ್ಳಿ ರಮೇಶ್ ಅಂಥವರಲ್ಲಿ ಒಬ್ಬರು. ಈ ಮೊದಲು ಮೆಂಟಿಗೆ ಬಾಣದ ಗುರುತಿನಡಿ ಸ್ಪರ್ಧಿಸಿದ್ದ ರಮೇಶ್ ್ಪ ವಿರುದ್ಧವೇ ಗಣನೀಯ ಸಂಖ್ಯೆಯ ಓಟ್ ಪಡೆದಿದ್ದರು. ದಳ ತ್ಯಜಿಸಿ ಕಾಂಗ್ರೆಸ್ ಸೇರಿಕೊಂಡಿದ್ದರು. ಇವರಲ್ಲದೆ ರಾಜ್ ಅರಸ್ ಮೆಡಿಕಲ್ ಕಾಲೇಜ್ ಸೆಕ್ರೆಟರಿಯಾಗಿರುವ ್. ನಾಗರಾಜ್ ಕೂಡಾ ಕಾಂಗ್ರೆಸ್ ಟಿಕೆಟ್‌ಗಾಗಿ ್ನಿಸುತ್ತಿದ್ದಾರೆ. ಕಳೆದ 20 ವರ್ಷಗಳಿಂದ ರಾಜಕೀಯದಲ್ಲಿರುವ ರಾಜ್ ಹಲವಾರು ಸಾಮಾಜಿಕ ಚಟುವಟಿಕೆಗಳ ಮೂಲಕ ುರಾಗಿ ಎನಿಸಿಕೊಂಡಿದ್ದಾರೆ. ಇವರಲ್ಲದೆ ಮುಂಡಿಕಲ್ ಯಣಸ್ವಾಮಿ ಸಹ ಕಾಂಗ್ರೆಸ್ ಟಿಕೆಟ್‌ಗಾಗಿ ಯತ್ನ ನಡೆಸಿದ್ದಾರೆ.

ಇವರೆಲ್ಲರೂ ಒಂದಲ್ಲಾ ಒಂದು ರೀತಿ ಕಾಂಗ್ರೆಸ್‌ನ ಮಾನ ಬಲ್ಲವರು ಹಾಗೂ ಗೆದ್ದು ಬರಬಲ್ಲ ತಾಕತ್ತಿರುವ ್ಗಳೆ. ಆದರೆ ರಾಜ್ಯ ಕಾಂಗ್ರೆಸ್ ನಾಯಕರು ಮಾತ್ರ ಏರಿಗೆಳೆದರೆ ಕೋಣ ನೀರಿಗೆಳೆಯಿತು' ಎಂಬಂತೆ

ಇವರನ್ನೆಲ್ಲಾ ಬಿಟ್ಟು ರೌಡಿ ಶೀಟರ್ ಆಂಜಿನಪ್ಪನ ಹೆಸರನ್ನು ಹೈಕಮಾಂಡಿಗೆ ಕಳಿಸಲು ರೆಡಿಯಾಗಿದ್ದಾರೆ. ಈ ಸುದ್ದಿ ಕ್ಷೇತ್ರದ ಜನರಿಗೆ ಸಿಡಿಲಿನಂತೆ ಮೇಲೆರಗಿದೆ.

ದೇವನಹಳ್ಳಿ ತಾಲ್ಲೂಕು ಮಂಜಪ್ಪನಹಳ್ಳಿ ಗ್ರಾಮದ ಎಂ. ಆಂಜಿನಪ್ಪನ ವಿರುದ್ಧ ದೇವನಹಳ್ಳಿ ಪೊಲೀಸರ ಹತ್ತಿರ ರಾಶಿರಾಶಿ ಕ್ರಿಮಿನಲ್ ದಾಖಲೆಗಳಿವೆ. 1995 ರಲ್ಲೇ ಆಂಜಿನಪ್ಪನ ವಿರುದ್ಧ ಇಲ್ಲಿ ರೌಡಿ ಶೀಟ್ ತೆರೆಯಲಾಗಿದೆ. ಪುಂಡರ ಗುಂಪು ಕಟ್ಟಿಕೊಂಡು ಹುಡುಗಿಯರನ್ನು ಚುಡಾಯಿಸುವುದು, ಕಳ್ಳಭಟ್ಟಿ ದಂಧೆ, ಕಳ್ಳಕಾಕರನ್ನು ರಕ್ಷಿಸಿ ಅಮಾಯಕ ಜನರಿಂದ ಬೆದರಿಸಿ ಹಣ ವಸೂಲಿ, ಇಂತದ್ದೇ ಡಜನ್‌ಗಟ್ಟಲೆ ಆರೋಪಗಳು ಆಂಜಿನಪ್ಪನ ವಿರುದ್ಧ ಇದೆ. ಇವೆಲ್ಲಾ ಐಪಿಸಿ ಸೆಕ್ಷನ್ 506, 341, 327, 143, 147, 148, 448 ರಡಿ ದಾಖಲಾಗಿರುವ ಕ್ರಿಮಿನಲ್ ಪ್ರಕರಣಗಳು.

ನಿತ್ಯ ಹಗಲು ಹೊತ್ತೇ ಕುಡಿದು ಜನರೊಂದಿಗೆ ಜಗಳಕ್ಕೆ ನಿಲ್ಲುವ ಕೆಟ್ಟ ಪ್ರವೃತ್ತಿಯೂ ಈತನಿಗಿತ್ತು. ಇಂಥ ಕಲ್ಯಾಣಗುಣಗಳಿದ್ದ ವ್ಯಕ್ತಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕರೆ ಜನ ಓಟ್ ಹಾಕುತ್ತಾರಾ ಹೇಳಿ?



ಇಷ್ಟಲ್ಲದೆ ಈ ಆಂಜಿನಪ್ಪ ಒಕ್ಕಲಿಗರ ಸಂಘದ ಉಪಾಧ್ಯಕ್ಷನಾಗಿದ್ದಾಗ ಅಸಂಖ್ಯ ಮೆಡಿಕಲ್ ಸೀಟ್‌ಗಳನ್ನು ಕಾಸು ಕೊಟ್ಟವರಿಗೆಲ್ಲಾ ಮಾರಿಕೊಂಡು ಸಂಘಕ್ಕೆ ಸೇರಬೇಕಿದ್ದ ಹಣವನ್ನೆಲ್ಲಾ ತಿಂದು ಹಾಕಿದ್ದ ಬಗ್ಗೆ ಬೇಕಾದಷ್ಟು ಗಲಾಟೆಗಳೂ ಆಗಿವೆ. ಬೆಂಗಳೂರಿನ ಸೆಂಟ್ರಲ್ ಪೊಲೀಸ್ ಠಾಣೆಯಲ್ಲೂ ಆಂಜಿನಪ್ಪನ ವಿರುದ್ಧ ಕ್ರೈಂ ನಂಬರ್ 353/03, 107/99 ಕೇಸುಗಳಿವೆ. ಜೊತೆಗೆ ಕ್ಷೇತ್ರದ ಕಾಂಗ್ರೆಸ್ ನಾಯಕ ಸಂಸದ ಆರ್.ಎಲ್. ಜಾಲಪ್ಪನವರ ಮೇಲೂ ಹಲ್ಲೆಗೆ ಯತ್ನಿಸಿದ್ದ ಕೇಸೂ ಇವನ ಮೇಲಿದೆ.

ಖರ್ಗೆ ಸಾಹೇಬರು ಬರೀ ಬಾಯಿಮಾತಿನಲ್ಲಿ ಮಾತ್ರ 'ಕ್ರಿಮಿನಲ್‌ಗಳಿಗೆ ಟಿಕೆಟ್ ಕೊಡಲ್ಲ' ಎಂದು ಹೇಳಿದರೆ ಸಾಕೆ?

ಈ ಆಂಜಿನಪ್ಪ ಯಾವ ಮಾನದಂಡಗಳ ಆಧಾರದಲ್ಲಿ ಚಿಕ್ಕಬಳ್ಳಾಪುರ ಕಾಂಗ್ರೆಸ್ ಅಭ್ಯರ್ಥಿಯಾಗಲು ಯೋಗ್ಯ ಅನ್ನುವುದನ್ನು ಸ್ಪಷ್ಟಪಡಿಸಲಿ ಎಂದು ಕ್ಷೇತ್ರದ ಜನತೆ ಕೇಳುತ್ತಿದ್ದಾರೆ.

ಉತ್ತರಿಸುವಿರಾ ಖರ್ಗೆಯವರೆ? ■




ಮಹೇಂದರ್

ಕೊಳ್ಳೇಗಾಲದಲ್ಲಿ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ಗಳ ಜೊತೆಗೆ ಬಿಎಸ್‌ಪಿಯೂ ಪ್ರಮುಖ ಪೈಪೋಟಿ ನೀಡುವ ಸ್ಪಷ್ಟ ಸೂಚನೆಗಳಿರುವುದರಿಂದ ಈ ನಾಲ್ಕೂ ಪಕ್ಷಗಳ ನಡುವೆ ಜಿದ್ದಾಜಿದ್ದಿನ ಪೈಪೋಟಿ ನಡೆಯಲಿದೆ.

ಬಿಜೆಪಿಗೆ ಇಲ್ಲಿ ಸರಿಯಾದ ಕ್ಯಾಂಡಿಡೇಟೇ ಸಿಗದಿರುವುದರಿಂದ ಕೊನೆಗೆ ಚಿತ್ರ ನಿರ್ದೇಶಕ ಎಸ್. ಮಹೇಂದರ್ ಅವರನ್ನು ಅಧಿಕೃತ ಅಭ್ಯರ್ಥಿ ಎಂದು ಘೋಷಿಸಿದೆ. ತನ್ನ ಮತ್ತು ತನ್ನ ಪತ್ನಿ ಚಿತ್ರನಟಿ ಶೃತಿಯ ಗ್ಲಾಮರ್ ಬಳಸಿಕೊಂಡು ಕಣಕ್ಕಿಳಿದಿರುವ ಮಹೇಂದರ್ ಚುನಾವಣೆಯಲ್ಲಿ ಮಣ್ಣು ಮುಕ್ಕುವುದು ಹೆಚ್ಚೂ ಕಮ್ಮಿ ಖಾತ್ರಿಯಾಗಿರುವ ವಿಚಾರ. ಏಕೆಂದರೆ, ಮಹೇಂದರ್ ಆಗಲಿ ಅಥವಾ ಶೃತಿಯಾಗಲೀ ಕ್ಷೇತ್ರಕ್ಕೆ ಕಡಿದು ಗುಡ್ಡೆ ಹಾಕಿರುವುದು ಅಷ್ಟರಲ್ಲೇ ಇದೆ. ಶೃತಿ ಕೊಳ್ಳೇಗಾಲದ ಸೊಸೆ ಎಂಬ ಸೆಂಟಿಮೆಂಟನ್ನು ಬಳಸಿದ ಮಾತ್ರಕ್ಕೆ ತಮ್ಮ ಅಮೂಲ್ಯವಾದ ಮತವನ್ನು ಮಹೇಂದರ್‌ಗೆ ಹಾಕುವಷ್ಟು ದಡ್ಡರಲ್ಲ ಕೊಳ್ಳೇಗಾಲದ ಜನ. ಅದೂಅಲ್ಲದೇ, ಬಿಜೆಪಿ 1994ರಿಂದಲೂ ಈ ಕ್ಷೇತ್ರದಲ್ಲಿ ಜನಪರ ಕಾಳಜಿಯಿರುವ ಒಬ್ಬ ವ್ಯಕ್ತಿಯನ್ನೂ ಬೆಳೆಸಿಲ್ಲ. ಮಹೇಂದರ್‌ನನ್ನು ನಿಲ್ಲಿಸಿರುವುದು ಅದರ ಮುಂದುವರಿಕೆಯಷ್ಟೆ.

ಕೊಳ್ಳೇಗಾಲ: ಜಿದ್ದಾಜಿದ್ದಿಯಲ್ಲಿ ಗೆಲ್ಲೋರ್‍ಯಾರು?

ಇನ್ನೊಂದೆಡೆ ಜೆಡಿಎಸ್‌ನಿಂದ ಎ.ಆರ್.ಕೃಷ್ಣಮೂರ್ತಿ ಸ್ಪರ್ಧಿಸುವುದು ಖಚಿತವಾಗಿದೆ. ಕಳೆದ ಚುನಾವಣೆಯಲ್ಲಿ ಇವರು ಸಂತೆಮರಳ್ಳಿ ಕ್ಷೇತ್ರದಿಂದ ಸ್ಪರ್ಧಿಸಿ ಕೇವಲ ಒಂದೇ ಒಂದು ಓಟಿನಿಂದ ಸೋತಿದ್ದರು. ಕ್ಷೇತ್ರ ಪುನರ್ವಿಂಗಡಣೆಯಿಂದಾಗಿ ಸಂತೆಮರಳ್ಳಿ ಹರಿದು ಹಂಚಿಹೋಗಿರುವುದರಿಂದ ಈ ಬಾರಿ ಕೊಳ್ಳೇಗಾಲಕ್ಕೆ ಲಗ್ಗೆ ಇಟ್ಟಿದ್ದಾರೆ. ಆದರೆ ಇವರಿಗೆ ಕೆಲವು ನೆಗೆಟಿವ್ ಪಾಯಿಂಟುಗಳಿವೆ. ಮೊದಲನೆಯದಾಗಿ ಈ ಹಿಂದೆ ಇವರ ಬೆಂಬಲಕ್ಕಿದ್ದ ಎಚ್.ಎಸ್. ಮಹದೇವ ಪ್ರಸಾದರಾಗಲೀ ಅಥವಾ ಕಾರ್ಯಕರ್ತರಾಗಲೀ ಈಗಿಲ್ಲ. ಅಲ್ಲದೆ ಈ ಬಾರಿ ಲಿಂಗಾಯತರೂ ಕೂಡ ಇವರ ವಿರುದ್ಧ ಸೆಟೆದುಕೊಂಡಿದ್ದಾರೆ. ಇವೆಲ್ಲವೂ ಕೃಷ್ಣಮೂರ್ತಿಯವರ ನಿದ್ದೆಗೆಡಿಸಿರುವುದಂತೂ ಸತ್ಯ.



ಎನ್. ಮಹೇಶ್

ಉಳಿದಂತೆ ಕಾಂಗ್ರೆಸ್‌ನಲ್ಲಿ ಭಿನ್ನಮತ ಶಮನವಾಗುವುದು ತುಸು ಕಷ್ಟವೇ. ಟಿಕೆಟ್ ಪಡೆಯಲು ಸಿದ್ದರಾಮಯ್ಯನ ಶಿಷ್ಯ ಎಸ್.ಜಯಣ್ಣ, ಖರ್ಗೆಯ ಶಿಷ್ಯ ಜಿ.ಎನ್. ನಂಜುಂಡಸ್ವಾಮಿ, ಶ್ರೀನಿವಾಸನ ಬಲಗೈ ಭಂಟ ಧ್ರುವನಾರಾಯಣ್ ಟಿಕೆಟ್ ಲಾಬಿಯಲ್ಲಿ ಮಗ್ನರಾಗಿದ್ದಾರೆ. ಈ ಮೂವರಲ್ಲಿ ಯಾರಿಗೇ ಟಿಕೆಟ್ ಸಿಕ್ಕರೂ ಉಳಿದವರು ತಟಸ್ಥರಾಗಿಬಿಡುತ್ತಾರೆ. ಬೆಂಕಿ ಮಹಾದೇವನಂತಹ ಕಾಂಗ್ರೆಸ್ ಕುಳ ಕಮಲವನ್ನಪ್ಪಿಕೊಂಡಿದ್ದರಿಂದ ಕಾಂಗ್ರೆಸ್ ಗೆಲ್ಲುವುದಕ್ಕೆ ಹರಸಾಹಸ ಮಾಡಬೇಕಾಗಿದೆ.

ಕೊಳ್ಳೇಗಾಲದಲ್ಲಿ ಈ ಬಾರಿ ಗಮನ ಸೆಳೆಯುತ್ತಿರುವುದು ಬಿಎಸ್‌ಪಿಯ ಎನ್.ಮಹೇಶ್. ಇಡೀ ಕ್ಷೇತ್ರದಾದ್ಯಂತ ಸಜ್ಜನ, ಪ್ರಾಮಾಣಿಕ ಎಂದು ಹೆಸರು ಮಾಡಿರುವ ಮಹೇಶ್ ತನ್ನದೇ ಆದ ಓಟ್ ಬ್ಯಾಂಕ್‌ನ್ನು ಸೃಷ್ಟಿಸಿಕೊಂಡಿದ್ದಾರೆ. ಕೊಳ್ಳೇಗಾಲ ಹಾಗೂ ಯಳಂದೂರಿನಲ್ಲಿ ಈತನಿಗೆ ಭರ್ಜರಿ ಬೆಂಬಲವೂ ಇದೆ. ಅಷ್ಟಕ್ಕೆ ಅಲ್ಪತೃಪ್ತಿಪಟ್ಟುಕೊಂಡರೆ ಸಾಕಾಗುವುದಿಲ್ಲ. ಕ್ಷೇತ್ರಕ್ಕೆ ಹೊಸದಾಗಿ ಸೇರಿಕೊಂಡಿರುವ ಸಂತೆಮರಳ್ಳಿಯಲ್ಲಿ ಎ.ಆರ್.ಕೃಷ್ಣಮೂರ್ತಿಗೂ ಅಷ್ಟೇ ಭರ್ಜರಿಯಾದ ಜನಬೆಂಬಲವಿದೆ. ಎನ್.ಮಹೇಶ್ ಇಲ್ಲಿ ಎಷ್ಟು ಮತಗಳನ್ನು ಗಳಿಸುತ್ತಾರೆಂಬುದರ ಮೇಲೆ ಅವರ ಭವಿಷ್ಯ ನಿರ್ಧಾರವಾಗಲಿದೆ. ಏನೇ ಆದರೂ ಘಟಾನುಘಟಿ ಪಕ್ಷಗಳ ಎದುರು ಬಿಎಸ್‌ಪಿಯ ಮಹೇಶ್ ಸೆಣಸಿ ಗಣನೀಯ ಪ್ರಮಾಣದಲ್ಲಿ ಮತಗಳಿಸುವುದಂತೂ ಗ್ಯಾರಂಟಿ.

■ಕೊಳ್ಳೇಗಾಲ ಮಾಳಿಗೆ


ಮಿಮಿಕ್ರಿ ಬಾಲರಾಜು

ಕೊಳ್ಳೇಗಾಲ ಕ್ಷೇತ್ರದ ಅಭಿವೃದ್ಧಿಗಾಗಿ ಸಾಕಷ್ಟು ಶ್ರಮಿಸಿದ ಮಾಜಿ ಶಾಸಕರಾದ ಎಸ್.ಜಯಣ್ಣ ಹಾಗೂ ಜಿ.ಎನ್. ನಂಜುಂಡಸ್ವಾಮಿ ಅವರುಗಳನ್ನು ಕೈಬಿಟ್ಟ ಮತದಾರರು 2004ರ ಚುನಾವಣೆಯಲ್ಲಿ ಬಾಲರಾಜನನ್ನು ಗೆಲ್ಲಿಸಿದ್ದರು. ಬಿಜೆಪಿಯಿಂದ ವಂಚಿತನಾಗಿದ್ದಾನೆ ಎಂಬ ಅನುಕಂಪವೇ ವಾಸ್ತವದಲ್ಲಿ ಆತನ ಗೆಲುವನ್ನು ಸುಗಮಗೊಳಿಸಿತ್ತು. ಆದರೆ, ಕ್ಷೇತ್ರದ ಮತದಾರರು ಇಟ್ಟಿದ್ದ ನಿರೀಕ್ಷೆಯನ್ನು ಸಂಪೂರ್ಣವಾಗಿ ಹುಸಿಯಾಗಿಸಿದ ಈತ ಕ್ಷೇತ್ರದ ಅಭಿವೃದ್ಧಿಗೆ ಒಂದಿಷ್ಟೂ ದುಡಿಯಲಿಲ್ಲ. ಬರೀ ಮಿಮಿಕ್ರಿ ಮಾಡುವುದರಲ್ಲೇ ಕಾಲ ಕಳೆದುಬಿಟ್ಟ.


ಈತ ವಿಧಾನಸೌಧದಲ್ಲಿ ಕುಳಿತು ಕ್ಷೇತ್ರದ ಅಭಿವೃದ್ಧಿ ಕುರಿತು ಚರ್ಚಿಸುವುದನ್ನಾಗಲಿ ಅಥವಾ ಕ್ಷೇತ್ರದಾದ್ಯಂತ ಓಡಾಡಿ ಜನರ ಸಮಸ್ಯೆಗಳನ್ನು ಅರಿಯುವುದನ್ನಾಗಲಿ ಮಾಡಿದ ಉದಾಹರಣೆಯೇ ಇಲ್ಲ. ಎಲ್ಲೆಲ್ಲಿ ಆರ್ಕೆಸ್ಟ್ರಾ ಮಿಮಿಕ್ರಿ ಮಾಡುವುದು, ಸ್ಟೇಜ್ ಶೋ ಮಾಡುವುದು, ಚಲನಚಿತ್ರ ಶೂಟಿಂಗ್ ಮಾಡುವುದು ಹಾಗೂ ಆಗಾಗ ಎಚ್.ಡಿ.ಕುಮಾರ ಸ್ವಾಮಿಯ ಹಿಂದೆ ನಿಂತು ಮಾಧ್ಯಮದವರಿಗೆ ಪೋಜು ನೀಡುವುದು – ಇವೇ ಈತ ಐದು ವರ್ಷದಲ್ಲಿ ಮಾಡಿದ ಘನಂದಾರಿ ಕೆಲಸಗಳು. ಜೊತೆಗೆ ಸಾರ್ವಜನಿಕ ಹಣವನ್ನು ಕೊಳ್ಳೆಹೊಡೆದು ಗುಂಡಗಾಗಿದ್ದನ್ನು ಪ್ರತ್ಯೇಕವಾಗಿ ವಿವರಿಸುವ ಅಗತ್ಯವಿಲ್ಲ. ಎಂ.ಪಿ.ಪ್ರಕಾಶ್ ಜೊತೆ ಜೆಡಿಎಸ್‌ನಿಂದ ಹೊರಬಂದು ಕಾಂಗ್ರೆಸ್ ಸೇರಿದ. ಅಲ್ಲಿ ಟಿಕೆಟ್ ಸಿಗುವುದಿಲ್ಲ ಎಂದು ಖಾತ್ರಿಯಾದ ಮೇಲೆ ಬಿಜೆಪಿ ಕದ ತಟ್ಟಿದ. ಅಲ್ಲಿಯೂ ಕದ ತೆರೆಯಲಿಲ್ಲ. ಈಗ ಎಲ್ಲಿಯೂ ಸಲ್ಲದವನಾಗಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಯೋಚನೆಯಲ್ಲಿದ್ದಾನೆ. ಠೇವಣಿಯಾದರೂ ವಾಪಸ್ಸು ಬರುತ್ತೋ ಹೇಗೋ ಕಾದು ನೋಡಬೇಕು.

ಶಿವಮೊಗ್ಗ ಚುನಾವಣಾ ಸ್ಯಾಂಪಲ್ಸ್!

ಮೊದಲಿನಿಂದಲೂ ಚೆಡ್ಡಿಗಳ ಕೇಂದ್ರಸ್ಥಾನವಾಗಿ ಕಾರ್ಯನಿರ್ವಹಿಸುತ್ತಿದ್ದ ಶಿವಮೊಗ್ಗದಲ್ಲಿ ಈಗ ಬಿಜೆಪಿಯ ತಳ ಅಲುಗಾಡತೊಡಗಿದೆ. ಕೋಮುಗಲಭೆಯನ್ನೇ ಕಾರಣ ಮಾಡಿಕೊಂಡು ಸಾಗರದಿಂದ ಕಳೆದ ಬಾರಿ ಗೆದ್ದು ಬಂದಿದ್ದ ಬೇಳೂರು ಗೋಪಾಲಕೃಷ್ಣ ಈಗ ಬಂಗಾರಪ್ಪನಿಗೂ ಬೇಡವಾದ, ಬಿಜೆಪಿಗೂ ಬೇಡವಾದ ಅನಾಥನಾಗಿದ್ದಾನೆ. ಕಾಗೋಡು ತಿಮ್ಮಪ್ಪನ ಎದುರು ರಾಜಕೀಯ ಮಾಡುವಂತಹ ಯಾವ ಯೋಗ್ಯತೆಯನ್ನು ಈತ ಪಡೆದಿರಲಿಲ್ಲ. ಆದ್ದರಿಂದ ಮೊದಲು ದಳದ ಹಿಂದೆ ಹೋದ ಈತ ಆನಂತರ ಬಿಜೆಪಿ ಬಾಗಿಲ ಕಡೆ ನೋಡಿದ. ಬಿಜೆಪಿಯ ಅಭ್ಯರ್ಥಿಯಾಗಿ ವಕೀಲ ದಿವಾಕರ್ ಹೆಸರು ಕೇಳಿಬಂದಿದ್ದರಿಂದ ಬೇಳೂರಿಗೆ ಬೆರಳು ಚೀಪುತ್ತ ಕಂಡಕಂಡ ಪಾರ್ಟಿ ಬಾಗಿಲನ್ನು ನೋಡುವಂತಾಗಿದೆ. ಬಂಗಾರಪ್ಪನ ದೆಸೆಯಿಂದ ಸಾಗರವನ್ನು ಗೆದ್ದಿದ್ದ ಬಿಜೆಪಿಗೆ ಆ ಕ್ಷೇತ್ರವನ್ನು ಉಳಿಸಿಕೊಳ್ಳುವುದು ಕಷ್ಟವಾಗಿದೆ.



ಇನ್ನು ಹೊಸನಗರ ಕ್ಷೇತ್ರದಿಂದ ಆರಿಸಿಬಂದಿದ್ದ ಹರತಾಳು ಹಾಲಪ್ಪ ಹರತಾಳ ಹಾಕುವುದೊಂದೇ ಬಾಕಿ. ಹೊಸನಗರ ಹರಿದು ಹಂಚಿ ಹೋಗಿ ಈಗ ಕ್ಷೇತ್ರವೇ ಇಲ್ಲದಂತಾಗಿದೆ. ಮೊದಲಿಂದಲೂ ವಿಚಿತ್ರ ಭೂಪ್ರದೇಶ ಹೊಂದಿದ್ದ ಹೊಸನಗರ, ತನ್ನ ಸುತ್ತಲಿದ್ದ ಮೂರು ತಾಲೂಕಿಗೆ ಸೇರಿ ಹೋಗಿ ಹರತಾಳು ಹಾಲಪ್ಪನು ಮುಂದೆ ಯಾರಿಗೂ ಕಾಣಿಸದ ಜಾಗದಲ್ಲಿ ಕಾಲ ಹಾಕುವಂತಾಗಿದೆ. ಸದ್ಯಕ್ಕೆ ಹಾಲಪ್ಪ ಅತ್ತ ಬಿಜೆಪಿಯಲ್ಲೂ ಇಲ್ಲ, ಇತ್ತ ಬಂಗಾರಪ್ಪನ ಕೃಪೆಯೂ ಇಲ್ಲದಂತಾಗಿದೆ. ಅಂತೂ ಹೊಸನಗರ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಹರತಾಳು ಎರಡೂ ಇಲ್ಲದಂತಾಗಿದೆ.





ಶಿವಮೊಗ್ಗದ ಗ್ರಾಮಾಂತರ ಕ್ಷೇತ್ರ ಈಗ ಸೃಷ್ಟಿಯಾಗಿ ಅಲ್ಲೂ ಕೂಡ ಪರಿಸ್ಥಿತಿ ಬಿಜೆಪಿಗೆ ಆಶಾ ದಾಯಕವಾಗಿಲ್ಲ. ಜೆಡಿಎಸ್‌ನ ಶಾರದಾ ಪೂರ್ಯಾ ನಾಯ್ಕ ಆ ಕ್ಷೇತ್ರದಲ್ಲಿ ಕಾಂಗ್ರೆಸ್ಸಿಗೆ ಸವಾಲು ಹಾಕುವಂತಹ ಪ್ರಬಲ ಅಭ್ಯರ್ಥಿ ಯಾಗಿ ಕಂಡುಬರುತ್ತಿರುವುದರಿಂದ ಸದ್ಯಕ್ಕೆ ಬಿಜೆಪಿಯ ಕೆ.ಜಿ. ಕುಮಾರಸ್ವಾಮಿಗೆ ಮೂರನೇ ಸ್ಥಾನದಲ್ಲಿ ಸಿಗುವಂತೆ ಭಾಸ ವಾಗುತ್ತಿದೆ.

****

ರಾಜ್ಯ ರಾಜಕಾರಣಕ್ಕೆ ಮರಳುವ ಶಪಥ ಮಾಡಿರುವ 'ಬಂ' ಆಗಾಗ್ಗೆ ಮೂರು ಕ್ಷೇತ್ರದ ಅಭ್ಯರ್ಥಿಗಳಿಗೆ ಜಾಪಾಳ ಮಾತ್ರ ತೋರಿಸುತ್ತಲೇ ಇದ್ದಾರೆ. ಮೊದಲನೆಯದಾಗಿ ಸಾಗರದಲ್ಲಿ ಸ್ಪರ್ಧಿಸುತ್ತೇನೆಂದು ಹೇಳಿ ಕಾಗೋಡು ತಿಮ್ಮಪ್ಪನನ್ನು ಅಧೈರ್ಯಗೊಳಿಸಿದ್ದರು. ನಂತರ ಶಿವಮೊಗ್ಗದಲ್ಲೇ ಸ್ಪರ್ಧಿಸುವುದಾಗಿ ಹೇಳಿ ಈಶ್ವರಪ್ಪನ ನಿದ್ದೆಯನ್ನೇ ಹಾಳು ಮಾಡಿದ್ದರು. ಈ ಮಧ್ಯೆ ಶಿಕಾರಿಪುರದಲ್ಲೂ ನಿಲ್ಲುತ್ತೇನೆಂದು ಗುಟುರು ಹಾಕಿ ಯಡಿಯೂರಪ್ಪ ಬೆವರುವಂತೆ ಮಾಡಿದ್ದರು. ಹಾಗೇನಾದರೂ 'ಬಂ' ಶಿಕಾರಿಪುರದಲ್ಲೇ ನಿಂತರೆ ಎಡಿಯೂರಪ್ಪ ಎಲ್ಲೂ ಹೋಗದೆ ಪ್ರತಿ ಕುಟುಂಬವನ್ನು ಖರೀದಿ ಮಾಡುವಂತಹ ಫಜೀತಿಗೆ ತುತ್ತಾಗುತ್ತಾರೆ. ಹಿಂದೊಮ್ಮೆ ಮಹಾಲಿಂಗಪ್ಪನನ್ನು ನಿಲ್ಲಿಸಿ ಯಡಿಯೂರಪ್ಪನನ್ನೇ ಶಿಕಾರಿಪುರದಲ್ಲಿ ಸೋಲಿಸಿ ಎಸ್.ಎಂ. ಕೃಷ್ಣರಿಗೆ ವಿರೋಧ ಪಕ್ಷವೇ ಇಲ್ಲದಂತೆ ಮಾಡಿದ್ದ 'ಬಂ' ಏನಾದರೂ ಮಾಡಬಲ್ಲರೆಂಬ ಆಂಜಿಕೆ ಕಾಂಗ್ರೆಸಿಗರಿಗಷ್ಟೇ ಅಲ್ಲ, ಬಿಜೆಪಿಗರಿಗೂ ಇದೆ!

ಕಳೆದ ಚುನಾವಣೆಯ ಸಂದರ್ಭದಲ್ಲಿ ಇದೇ ಬಂ ಇದ್ದಕ್ಕಿದ್ದಂತೆ ಚೆಡ್ಡಿ ತೊಟ್ಟು, ಆಡಬಾರದ ಆಟವಾಡಿ ಕೊನೆಗೆ ಬೇಸತ್ತು ಚೆಡ್ಡಿಯನ್ನು ಬಿಸಾಕಿ ಸ್ವತಂತ್ರವಾಗಿ ಗೆದ್ದುಬಂದು ತಮ್ಮ ಸಾಮರ್ಥ್ಯವನ್ನು ತೋರಿದ್ದರು. ಈ ಮಧ್ಯೆ ಮತ್ತೊಂದು ತಮಾಷೆಯ ಪ್ರಕರಣ ನಡೆದಿತ್ತು. 'ಬಂ' ವಿರುದ್ಧ ಸೋತಿದ್ದ ಆಯನೂರು ಮಂಜುನಾಥ್. ಇದ್ದಕ್ಕಿದ್ದಂತೆ ಚೆಡ್ಡಿ ಲಾರಿ, ಕಿತ್ತೆಸೆದು ಮಲ್ಲನ ಬಳಿಗೋಗಿ, ಅಲ್ಲೂ ಇರಲಾಗದೆ ಕಾಂಗ್ರೆ ಪಾಳಿಯದಲ್ಲಿ ಕಾಣಿಸಿಕೊಂಡರು. ಆದರೆ ಕಾಂಗ್ರೆಸ್‌ನಲ್ಲೂ ಬಹಳ ದಿನ ಇರಲಾರದೆ ಈಗ ಮತ್ತೆ ಬಿಜೆಪಿಗೆ ಬಂದು ಭದ್ರಾವತಿಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಭದ್ರಾವತಿಯಲ್ಲಿ ಕಾಂಗ್ರೆಸ್‌ನ ಸಂಗಮೇಶ್ ಮತ್ತು ಜೆಡಿಎಸ್‌ನ ಅಪ್ಪಾಜಿ ನಡುವೆ ಕಳೆದ ಬಾರಿ ಭೀಕರ ಸಮರ ನಡೆದಿತ್ತು! ಈ ಕ್ಷೇತ್ರದಲ್ಲಿ ಒಂದು ರೀತಿಯ ಜನಾಂಗೀಯ ಕಲಹ ನಿರಂತರವಾಗಿ ನಡೆದುಬಂದಿದೆ. ಅಪ್ಪಾಜಿ ಕಡೆಯವರ ಗೂಂಡಾಗಿರಿಗೆ ಹೆದರಿದ್ದ ಲಿಂಗವಂತರು ಈ ಬಾರಿ ಒಗ್ಗಟ್ಟಾಗಿ ಸಂಗಮೇಶ್‌ರನ್ನು ಬೆಂಬಲಿಸಲು ತಯಾರಾಗುವಷ್ಟರಲ್ಲಿ, ಆಯನೂರ್ ಮಂಜುನಾಥ್ ಎಂಬ ಮತ್ತೊರ್ವ ಲಿಂಗಾಯತ ಬಂದು ಭದ್ರಾವತಿಯ ಬಿಜೆಪಿ ಅಭ್ಯರ್ಥಿಯಾಗಿದ್ದಾರೆ. ಇದರಿಂದಾಗಿ ಲಿಂಗಾಯತರ ಓಟು ವಿಭಜನೆಯಾಗಿ ಅಪ್ಪಾಜಿ ಗೆಲು ಸುಲಭವಾಗಬಹುದೆಂಬ ಲೆಕ್ಕಾಚಾರಗಳು ನಡೆಯತೊಡಗಿವೆ.





****

ಇನ್ನು ಶಿವಮೊಗ್ಗದಲ್ಲಿನ ಪರಿಸ್ಥಿತಿ ಈಶ್ವರಪ್ಪನಿಗೆ ಆಶಾದಾಯಕವಾಗಿ ಕಾಣಿಸುತ್ತಿ ಏಕೆಂದರೆ ಜೆಡಿಎಸ್‌ನ ಶ್ರೀಕಾಂ ಕೂಡ ಕುರುಬ ಜನಾಂಗದವರಾಗಿದ್ದು ಕಳೆದೆರಡು ವರ್ಷದಿಂದ ಶಿವಮೊಗ್ಗದ ಸುತ್ತಮುತ್ತಲ ಜನರ ಸಂಘಟಿಸುತ್ತ ದಾನ ಧರ್ಮಗಳನ್ನು ಮಾಡುತ್ತ ಸದ್ದಿಲ್ಲ ಯುವ ಜನಾಂಗದ ಮುಖಂಡರಾಗಿ ಹೊಮ್ಮಿದ್ದಾ ಇದರ ಜೊತೆಗೆ ಬಿಜೆಪಿಯಲ್ಲಿ ಬೀಡುಬಿಟ್ಟಿರು ಗುಂಪೊಂದು ಈಶ್ವರಪ್ಪನಿಗೆ ತಕ್ಕ ಪಾಠ ಕಲಿಸ ಕಾಯುತ್ತ ಕುಳಿತಿದೆ. ಇದರ ಅರಿವಿರುವ ಈಶ್ವ ಶರಣ ಸಮೂಹವನ್ನು ಸಂತೈಸಲು ಹಲವಾ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತಿದ್ದಾರೆ. ಆ ಪ ತನಗೆ ಅರವತ್ತು ವರ್ಷ ತುಂಬಿದ ಹಬ್ಬವನ ಅದ್ದೂರಿಯಾಗಿ ಮಾಡಿ ಒಬ್ಬ ಮಾಧ್ವ, ಒಬ್ಬ ಕುರು ಸ್ವಾಮಿ ಜೊತೆಗೆ ಇಬ್ಬರು ಶರಣಸ್ವಾಮಿಗಳನ್ನು ಕರೆ ಆಶೀರ್ವಾದ ಪಡೆದಿದ್ದಾರೆ. ಆ ಸ್ವಾಮಿಗಳ ಪೈಕಿ ತರಳಬಾಳು ಶಿವಮೂರ್ತಿ ಸ್ವಾಮಿ ಈಶ್ವರಪ್ಪನ ಹಿಗ್ಗಾಮುಗ್ಗಾ ಹೊಗಳಿ, ವಿಶ್ವನಾಥನನ್ನು ಬೈದು ಹೋದರು ಇದರಿಂದ ವಿಶ್ವನಾಥರ 'ಹಳ್ಳಿ ಹ ಹಾದಿಗೆ' ಮತ್ತಷ್ಟು ಪ್ರಚಾರ ಸಿಕ್ಕಿ ಹೊರತು ಈಶ್ವರಪ್ಪನಿಗೆ ಯಾವ ಲಾಭವೂ ಆದಂತಿಲ್ಲ.

■ ವರದಿಗಾ

ಚುನಾವಣಾ ಚಮಕ್

ಮದುವೆಯಾಗೋ ಬ್ರಾಹ್ಮಣ ಅಂದ್ರೆ....

ಕೊಪ್ಪಳದ ಜನರಿಗೆ ಈಗ ಭಾರಿ ಮಜಾ ಕೊಡುತ್ತಿರುವ ಪಾರ್ಟಿ ಬಿಎಸ್‌ಪಿ. ಈ ಪಾರ್ಟಿಯಲ್ಲಿ ಯಾರಿದ್ದಾರೆ, ಎಲ್ಲಿದ್ದಾರೆ, ಅವರ ಹೆಸರೇನು, ಕುಲಗೋತ್ರಗಳೇನು ಎಂಬುದೊಂದೂ ಇಲ್ಲಿನ ಜನರಿಗೆ ಗೊತ್ತಿಲ್ಲ. ಮಾಯಾವತಿಯ ಫೋಟೋ ಬೀದಿಗಳಲ್ಲಿ ನೇತಾಡುತ್ತಾ, ಪೇಪರ್‌ಗಳಲ್ಲಿ ಪ್ರತ್ಯಕ್ಷವಾಗುತ್ತಾ ಜನರ ಕಣ್ಣಿಗೆ ಬಿದ್ದಿದೆಯೇ ಹೊರತು ಈ ಪಕ್ಷದ ಸ್ಥಳೀಯ ನಾಯಕರ್ಯಾರು ಎಂಬುದರ ಸುಳಿವೂ ಇಲ್ಲಿನ ಜನರಿಗಿಲ್ಲ. ಈ ಮಧ್ಯೆ ಆಗೊಮ್ಮೆ ಈಗೊಮ್ಮೆ ಬಿಎಸ್‌ಪಿಯ ಜಿಲ್ಲಾಧ್ಯಕ್ಷನ ಹೆಸರು ಸಲೀಮ್ ಬೇಗ್ ಅಂತ ಕೇಳಿಬರುತ್ತದೆಯಾದರೂ ಆತನ ಮುಖವನ್ನು ನೋಡುವ ಭಾಗ್ಯ ಕೊಪ್ಪಳದ ಜನಕ್ಕೆ ಈತನಕ ಸಿಕ್ಕಿಲ್ಲ.

ಮೊನ್ನೆ ಈ ಸಲೀಂಗೆ ಯಾರೋ ಕೇಳಿದರಂತೆ "ಏನ್ರೀ, ನಿಮ್ಮ ಪಕ್ಷದ ಕ್ಯಾಂಡಿಡೇಟ್ ಯಾರು?" ಅಂತ. ಅದಕ್ಕೆ ಆತ "ನೀನೇ ಬಂದುಬಿಡು ನಮ್ಮ ಪಾರ್ಟಿಗೆ" ಅಂತ ಕರೆಯತೊಡಗಿದನಂತೆ. ಅದೇನೋ ಅಂತಾರಲ್ಲ ಮದುವೆಯಾಗೋ ಬ್ರಾಹ್ಮಣ ಅಂದ್ರೆ ನೀನೆ ನನ್ನ ಹೆಂಡ್ತಿ ಅಂದನಂತೆ. ಹಾಗಾಯಿತು ಬಿಎಸ್‌ಪಿ ಕತೆ. ಇನ್ನೊಂದು ವಿಚಾರ, ಈ ರೀತಿ "ನೀನೇ ಬಂದುಬಿಡು ನಮ್ಮ ಪಾರ್ಟಿಗೆ" ಎಂದು ಸಲೀಂನಿಂದ ಕರೆಸಿಕೊಂಡವರ ಸಂಖ್ಯೆ ಕನಿಷ್ಠವೆಂದರೂ ಅರ್ಧ ಸೆಂಚುರಿ ದಾಟದೆಯಂತೆ!

ಕೊಪ್ಪಳ

ಹೆಸರು ರಾಣಿ, ಆದ್ರೂ ಅನಾಥೆ




ತನ್ನ ಗಂಡನನ್ನು ಐದು ಬಾರಿ ಶಾಸಕನನ್ನಾಗಿಸಿದ್ದ ಮತ್ತು ನಿಗಮ-ಮಂಡಳಿಗಳ ಅಧ್ಯಕ್ಷಗಿರಿ ಕೊಟ್ಟಿದ್ದ ಕಾಂಗ್ರೆಸ್ ಪಕ್ಷವನ್ನು ಲಲಿತಾರಾಣಿ ತೊರೆದು ಬಿಜೆಪಿಗೆ ಹಾರಿದ್ದು ತನ್ನ ಗಂಡನನ್ನೇ ಕತ್ತಲಲ್ಲಿರಿಸಿ! ಸ್ವತಃ ಡಿಸಿಸಿಯ ಮಾಜಿ ಅಧ್ಯಕ್ಷೆಯಾಗಿದ್ದ ಈಕೆ ಗಂಗಾವತಿಯ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದಳು. ಆದರೆ ಅದು ಅವಳ ಕೈತಪ್ಪಿ ಲಿಂಗಾಯತ ಸಮುದಾಯದ ಪರಣ್ಣ ಮುನವಳ್ಳಿಯ ಪಾಲಾಯಿತು.

ಆಗ ಬಿಜೆಪಿಯಿಂದಲಾದರೂ ತನಗೆ ಟಿಕೆಟ್ ಸಿಗುತ್ತೆ ಎಂಬ ಆಸೆಯಿಂದ ಆಂಧ್ರ ಸೆಂಟಿಮೆಂಟ್ ಬಳಸಿ ವೆಂಕಯ್ಯ ನಾಯ್ಡುವಿನ ಮನವೊಲಿಸಿ ಬಿಜೆಪಿಯನ್ನು ಲಲಿತಾರಾಣಿ ಸೇರಿಯೇ ಬಿಟ್ಟಳು. ಆದರೆ ಗಂಗಾವತಿಯ ಕೆಲವು ಲಿಂಗಾಯತ ಮುಖಂಡರು ಇತ್ತೀಚೆ ಮಠವೊಂದರಲ್ಲಿ ಕೈಗೊಂಡ 'ಬಿಜೆಪಿಯ ಟಿಕೆಟ್ಟು ಲಿಂಗಾಯತರಿಗೆ' ಎಂಬ ನಿರ್ಣಯದಿಂದಾ ಈಗ ಅಲ್ಲಿಯೂ ಆಕೆಗೆ ಟಿಕೆಟ್ ಖೋತಾ ಆಗಿದೆ!

ಅತ್ತ ಕಾಂಗ್ರೆಸ್ ಟಿಕೆಟ್ಟೂ ಇಲ್ಲ, ಇತ್ತ ಬಿಜೆಪಿಯಲ್ಲೂ ಟಿಕೆಟ್ ಇಲ್ಲ, ಈತನಕ ರಾಣಿ.... ರಾಣಿ.... ಅ ಹೇಳಿಕೊಂಡಿದ್ದವಳು ಈಗ 'ಅನಾಥ ಮಗುವಾದೆ ನಾನು....' ಅಂತ ಹಾಡು ಹೇಳುವ ಪರಿಸ್ಥಿತಿ ಒಕ ಬಂದೊದಗಿದೆ.

ಕುಮಾರಸ್ವಾಮಿ ಸಂಘ- ಜೆಡಿಎಸ್ ಗರ್ವಭಂಗ!

ಇದು ವಿಚಿತ್ರವಾದರೂ ಸತ್ಯ. ಕೊಪ್ಪಳದಲ್ಲಿ ಮಾಜಿ ಮುಖ್ಯಮಂತ್ರಿ ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಅಭಿಮಾನಿಗಳ ಸಂಘವೊಂದು ಇದೆ. ಕುಮಾರಸ್ವಾಮಿಯ ವರ್ಚಸ್ಸನ್ನೂ, ಜೊತೆಗೆ ಜೆಡಿಎಸ್ಸಿನ ಪ್ರಭಾವವನ್ನೂ ಬಲಪಡಿಸುವ ರಾಜಕೀಯ ತಂತ್ರದೊಂದಿಗೆ ಹುಟ್ಟಿಕೊಂಡ ಈ ಸಂಘ ಈಗ ಜೆಡಿಎಸ್‌ಗೇ ಮುಳುವಾಗುತ್ತಿದೆ.




ಈ ಸಂಘದ ಕೊಪ್ಪಳ ಜಿಲ್ಲಾ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಹಡಪದ್ ಎಂಬಾತ ಈ ಬಾರಿಯ ಚುನಾವಣೆಯಲ್ಲಿ ಜೆಡಿಎಸ್ ಟಿಕೆಟ್ ಆಕಾಂಕ್ಷಿ. ಕಳೆದಬಾರಿ ಕೂಡ ಪಕ್ಷೇತರವಾಗಿ ಸ್ಪರ್ಧಿಸಿ ಜೆಡಿಎಸ್‌ನ 1600 ಮತಗಳನ್ನು ಕಿತ್ತುಕೊಂಡು ಪಕ್ಷದ ಸಂಗಣ್ಣ ಕರಡಿ ಸೋಲುವುದಕ್ಕೆ ಪ್ರಮುಖ ಕಾರಣವಾಗಿದ್ದಾತ. ಈ ಬಾರಿ ತನಗೆ ಟಿಕೆಟ್ ಸಿಗದಿದ್ದರೆ ಮತ್ತೆ ಬಂಡಾಯವೆದ್ದು ಜೆಡಿಎಸ್ಸನ್ನು ಮುಳುಗಿಸಲು ತಂತ್ರ ಹೆಣೆಯುತ್ತಿದ್ದಾನೆ.

ಸಂಗಣ್ಣ ಕರಡಿ ಮೊದಲಿನಿಂದಲೂ ಜೆಡಿಎಸ್ಸೇ ಬೇರೆ, ಕುಮಾರಸ್ವಾಮಿ ಸಂಘವೇ ಬೇರೆ ಎಂದು ತನ್ನ ಹತ್ತಿರ ಸಂಘದ ಯಾರನ್ನೂ ಬಿಟ್ಟುಕೊಂಡಿಲ್ಲ. ಸಂಗಣ್ಣ ಕರಡಿಗೆ ಜೆಡಿಎಸ್ ಟಿಕೆಟ್ ಸಿಗುವುದಾದರೆ ಕುಮಾರಸ್ವಾಮಿ ಸಂಘದವರು ಒಗ್ಗಟ್ಟಾಗಿ ಮಲ್ಲಿಕಾರ್ಜುನ ಹಡಪದನನ್ನು ಕಣಕ್ಕಿಳಿಸುವ ಸಿದ್ಧತೆ ನಡೆಸಿದ್ದಾರೆ.

ಏನೇ ಆಗಲಿ, ಕುಮಾರಸ್ವಾಮಿ ಸಂಘ ಈ ಬಾರಿ ಜೆಡಿಎಸ್‌ಗೆ ಗರ್ವಭಂಗ ಮಾಡೋದಂತೂ ಖಾತ್ರಿ!

ಸಂಗಣ್ಣ ಕರಡಿಯದು ಯಾವ ಪಕ್ಷ?

ಕೊಪ್ಪಳದ ಮತದಾರರನ್ನು ಕಾಡುತ್ತಿರುವ ಪ್ರಶ್ನೆಯಿದು. ಹೆಸರಿಗೆ ಸಂಗಣ್ಣ ಕರಡಿ ಜೆಡಿಎಸ್‌ನ ಜಿಲ್ಲಾಧ್ಯಕ್ಷರಾಗಿದ್ ಮುನ್ನೆಚ್ಚರಿಕೆ ಕ್ರಮವಾಗಿ ಒಂದು ಕಾಲನ್ನು ಕಾಂಗ್ರೆಸ್‌ನಲ್ಲಿಯೂ ಇಟ್ಟಿದ್ದಾನೆ. ಕ್ಷೇತ್ರ ಪುನರ್ವಿಂಗಡಣೆಯಿಂ ಕೈತಪ್ಪಿಹೋಗಿರುವ ಇದಕಲ್ಲುಗಡ ಹೋಬಳಿಯಿಂದ ಯಾವ ಪರಿ ಹೆದರಿದ್ದಾನೆಂದರೆ ತಾನು ಎರಡು ಬಾರಿ ಗೆದ್ದಿದ್ದ ಕೊಪ್ಪಳ ಕ್ಷೇತ್ರವನ್ನು ತೊರೆದು ಗಂಗಾವತಿಗೆ ವಲಸೆ ಹೋಗಲು ತಯಾರಿ ನಡೆಸಿದ್ದಾನೆ. ಅದೂ ತನ್ನ ಜೆಡಿಎಸ್ ಪಕ್ಷದ ಮೂಲಕ ಅಲ್ಲ ಎದುರಾಳಿ ಕಾಂಗ್ರೆಸ್ ಮೂಲಕ!



ದೇವೇಗೌಡರೆದುರು "ನಾನೇ ಕೊಪ್ಪಳದ ಜೆಡಿಎಸ್ ಕ್ಯಾಂಡಿಡೇಟು" ಎಂದು ಹೇಳುವ ಕರಡಿಗೆ ಜೆಡಿಎಸ್ ಟಿಕೆಟ್ ಸಿಕ್ಕರೂ ಗೆಲ್ಲುವ ವಿಶ್ವಾಸವಿಲ್ಲ. ಹಾಗಾಗಿ ಒಳಗೊಳಗೇ ಗಂಗಾವತಿಯ ಕ್ಷೇತ್ರಕ್ಕೆ ಕಾಂಗ್ರೆಸ್ ಟಿಕೆಟ್‌ಗಾಗಿ ಪ್ರಯತ್ನ ನಡೆಸಿದ್ದಾನೆ. ಕಾಂಗ್ರೆಸ್‌ನಿಂದ ಟಿಕೆಟ್ ಸಿಗುತ್ತೆ ಎಂಬ ಭರವಸೆಯೊಂದಿಗೆ ಈಗಾಗಲೇ ಕರಡಿಯ ಬೆಂಬಲಿಗರು ಹಳ್ಳಿ ಹಳ್ಳಿ ಸುತ್ತಿ 'ಕಾಂಗ್ರೆಸ್‌ಗೆ ಓಟು ಕೊಡಿ' ಎಂದು ಪ್ರಚಾರ ಮಾಡುತ್ತಿವೆ.

ರಾಜಕೀಯ ಚದುರಂಗದಾಟದಲ್ಲಿ ತಾನೇ ಸೈ ಎಂದುಕೊಂಡಿರುವ ದೇವೇಗೌಡರಿಗೆ ತನ್ನದೇ ಪಕ್ಷದಲ್ಲಿ ತನ್ನ ಕಣ್ಣಿಗೇ ಮಣ್ಣೆರಚಬಲ್ಲ ಒಬ್ಬ ಆಸಾಮಿಯೂ ಇದ್ದಾನೆ ಎಂಬ ಸತ್ಯ ಗೊತ್ತಿದೆಯೇ?

ಚಿಡ್ಡಿ ಐಡಿಯಾಗಳ ಯಡ್ಡಿ ಲಿಂಗಾಯತನೆ?

ಯಡಿಯೂರಪ್ಪ ಎಂಬ ಚಿಡ್ಡಿ ಚತುರ ಇತ್ತೀಚೆಗೆ ಭೇಟಿಕೊಟ್ಟ ಧಾರ್ಮಿಕ ಕಾರ್ಯಕ್ರಮಗಳಲ್ಲೆಲ್ಲ ಸರಕಾರ ಅಸ್ತಿತ್ವಕ್ಕೆ ಬಂದರೆ ಸರಕಾರದ ಬಹುಪಾಲು ...ವನ್ನು ಧಾರ್ಮಿಕ ಮಠಗಳಿಗೆ ಕೊಡುವುದಾಗಿ ...ಪಿಸುತ್ತಿದ್ದಾನೆ. ಈ ಶೂದ್ರ ಸನಾತನನಿಗೆ ಮಠಗಳು, ...ದಿರಗಳು ಬಹುದೊಡ್ಡ ಧಾರ್ಮಿಕತೆಯ ಕೇಂದ್ರ ...ಗಿ ಕಾಣಿಸಿದರೆ ಯಾರೂ ...ರ್ಯಪಡಬೇಕಿಲ್ಲ. ಏಕೆಂದರೆ ಈ ...ಯಡ್ಡಿ ಬೆಳೆದಿರುವುದೇ ಮನು... ಸಂಘಿಗಳ ಸಂಘದಲ್ಲಿ.



...ದುರಂತವೆಂದರೆ ಅವಕಾಶ ...ಗಳೆಲ್ಲ ತಾನು ಬಸವಣ್ಣನವರ ...ಯಾಯಿ ಎಂದು ಯಡ್ಡಿ ...ತ್ತಾನಲ್ಲದೆ, ತಾನೊಬ್ಬ ಲಿಂಗಾ... ಎಂಬುದನ್ನೂ ಜಾಹೀರು ...ಡಿಕೊಳ್ಳಲು ಹಿಂಜರಿಯು... ...ಲ್ಲ. ಆದರೆ ಇವತ್ತಿನ ಬಹುತೇಕ ...ಾಯತ ಮಠಗಳಿಗೂ ಮತ್ತು ಬಸವಣ್ಣನಿಗೂ ... ಒಂದಿಷ್ಟೂ ಸಂಬಂಧವಿಲ್ಲವೋ, ಹಾಗೆಯೇ ...ಡ್ಡಿ ಎಂಬ ಚಿಡ್ಡಿಗೂ ಮತ್ತು ಬಸವ ತತ್ವಗಳಿಗೂ ...ಷ್ಟೂ ನಂಟಿಲ್ಲ.

...ಯಾಕೆಂದರೆ ಬಸವಣ್ಣನವರು 'ಉಳ್ಳವರು ...ಲಯವ ಮಾಡುವರು, ನಾನೇನು ಮಾಡಲಿ ಬಡವ ...ಯ್ಯಾ' ಎಂದಿದ್ದರಲ್ಲದೆ 'ದೇಹವೇ ದೇವಾಲಯವಯ್ಯ' ...ದಿದ್ದರು. ಆದರೆ ಯಡ್ಡಿ ಶಿವ ಭಕ್ತನಾಗಿದ್ದೂ ವೈಷ್ಣವರ ...ನ ಸೊಕಾಲ್ಡ್ ಜನ್ಮಭೂಮಿಯಲ್ಲಿ ದೇವಸ್ಥಾನವನ್ನು ...ಬೇಕೆನ್ನುತ್ತಾನೆ. ಬಸವಣ್ಣ ದೇಹವೇ ...ಗುಲವಯ್ಯ ಎಂದಿದ್ದರೆ ...ಡಿಯೂರಪ್ಪ ಅನಾಮಿಕರನ್ನು ...ದಾದರೂ ಸೈ ವಿಷ್ಣುವಿನ ...ನ್ನೊಂದು ಅವತಾರ ಎನ್ನಲಾದ ... ದೇವಸ್ಥಾನವನ್ನು ತನ್ನ ಪಕ್ಷ ...ಸುತ್ತದೆ ಎನ್ನುತ್ತಾನೆ. ಯಾವ ...ಹ್ಮಣರ ವಿರುದ್ಧ ಹನ್ನೆರಡನೇ ಶತ...ನದಲ್ಲಿ ಬಂಡೆದ್ದು ಲಿಂಗಾಯತ ...ರ್ಮವನ್ನು ಬಸವಣ್ಣನವರು ...ಸಿದ್ದರೋ ಇವತ್ತು ಅದೇ ...ಹ್ಮಣರ ಅಜೆಂಡಾವನ್ನು ಮುಂದು... ಶೂದ್ರರನ್ನು ಗುಲಾಮರನ್ನಾಗಿ ... ಹುನ್ನಾರದ ಭಾಗವಾಗಿದ್ದಾನೆ ಯಡ್ಡಿ.



...ಇಂತಹ ಯಡ್ಡಿಯನ್ನು ಲಿಂಗಾಯತ ಎಂದು ...ಗಣಿಸುವುದೇ ಕಷ್ಟವಾಗಿರುವಾಗ ಅವನು ಹೇಗೆ ...ವ ತತ್ವಗಳ ಪಾಲಕನಾಗುತ್ತಾನೆ?

...ಹೋಗಲಿ, ಯಡ್ಡಿ ಆರ್ಥಿಕ ಸಚಿವನಾಗಿದ್ದಾಗ ಆತ ...ಾರದ ಬೊಕ್ಕಸದಿಂದ ಕೋಟ್ಯಂತರ ರೂಪಾಯಿ ...ನ್ನು ನೀಡಿದ್ದಾದರೂ ಯಾವ ಸ್ವಾಮಿಗಳಿಗೆ? ಗೋ...ಶೆಯ ಹೆಸರಲ್ಲಿ ಕಾಡು ಮೇಡನ್ನು ನುಂಗುತ್ತಿರುವ ...ಹ್ಮಣರ ಶ್ರೀರಾಮಚಂದ್ರಾಪುರ ಮಠದ ರಾಘವೇಶ್ವರ ...ುಗೆ ಮತ್ತು ಯೋಗಾಸನ ಹೇಳಿಕೊಡುತ್ತೇನೆಂದು ...ವ್ಯಮ ವರ್ಗದ ಜನರ ಮುಂಡಾ ಮೋಚುತ್ತಿರುವ ...ಶಂಕರ್ ಎಂಬ ಢೋಂಗಿ ಸ್ವಾಮಿಗೆ! ...ಾಯತರಿಗೂ, ಬಸವಣ್ಣನಿಗೂ, ಬಸವ ತತ್ವಗಳಿಗೂ ...ತ್ತ ಈ ಕಳ್ಳ ಸ್ವಾಮಿಗಳಿಗೂ ಎತ್ತಿಂದೆತ್ತಣ ಸಂಬಂಧ? ...ಪ್ರಶ್ನೆಗೆ ಸ್ವತಃ ಯಡ್ಡಿಗೂ ಉತ್ತರಿಸಲಾಗುವುದಿಲ್ಲ.

ಅಂದಹಾಗೆ, ಮಠಗಳಿಗೆ ದುಡ್ಡು ಸುರಿಯಲು ಹೊರಟಿರುವ ಯಡ್ಡಿ ಆ ಹಣವನ್ನು ತನ್ನ ಸ್ವಂತ ಬೊಕ್ಕಸದಿಂದೇನೂ ತಂದಿಲ್ಲ. ಸರಕಾರದ ಖಜಾನೆಯಲ್ಲಿರುವ ದುಡ್ಡಿನಿಂದ ತಾನು ಎಲ್ಲಮ್ಮನ ಜಾತ್ರೆ ಮಾಡಬಹುದೆಂದು ತಿಳಿದಿರುವ ಯಡ್ಡಿಯನ್ನು ನಿಜವಾದ ಲಿಂಗಾಯತರು ಮೂಸಿಕೂಡ ನೋಡಬಾರದು. ಹಾಗೊಮ್ಮೆ ಲಿಂಗಾಯತರು ಯಡ್ಡಿಯನ್ನು ಬೆಂಬಲಿಸಿದ್ದೇ ಆದರೆ ಅವರೆಲ್ಲ ತಮ್ಮ ಆರಾಧ್ಯನಾದ ಬಸವಣ್ಣನವರಿಗೆ, ಅವರ ತತ್ವಗಳಿಗೆ ಮತ್ತು ಪ್ರತಿ ನಿತ್ಯ ಲಿಂಗಾಯತರು ಶ್ರದ್ಧೆಯಿಂದ ಪೂಜಿಸುವ ತಮ್ಮ ಇಷ್ಟ ಲಿಂಗಕ್ಕೇ ಮಸಿಬಳಿದಂತಾಗುತ್ತದೆ.

ಮನುವಾದಿ ಸಂಘಿಗಳ ಹುನ್ನಾರಗಳನ್ನು ಸ್ಪಷ್ಟವಾಗಿ ತಿಳಿಯದ ಕೆಲವು ಲಿಂಗಾಯತ(?)ರು ಬಿಜೆಪಿಯ ಜೊತೆ ಹೆಜ್ಜೆ ಹಾಕುತ್ತಿದ್ದು ಅವರೆಲ್ಲ ತಮ್ಮ ಗೋರಿಯನ್ನು ತಾವೇ ತೋಡಿಕೊಳ್ಳುತ್ತಿದ್ದಾರೆ. ಯಡ್ಡಿಯ ಹಿಂದೆ ಜಾಬಾದಿ ಸಂಘಿಗಳ ಹುನ್ನಾರಗಳು ಕೆಲಸ ಮಾಡುತ್ತಿವೆ ಎಂದು ಅವರೆಲ್ಲರಿಗೆ ಗೊತ್ತಿಲ್ಲ. ಈಗಾಗಲೇ ಯಡ್ಡಿಯ ಬ್ರೈನ್‌ವಾಶ್ ಆಗಿದೆ. ಈಗ ಎಲ್ಲ ಲಿಂಗಾಯತರ ಬ್ರೈನ್‌ವಾಶ್ ಮಾಡಲು ಆತನನ್ನು ಗಾಳವಾಗಿ ಬ್ರಾಹ್ಮಣರು ಉಪಯೋಗಿಸುತ್ತಿದ್ದಾರೆ.

ನಿಜ ಹೇಳಬೇಕೆಂದರೆ ಇವತ್ತು ಯಡಿಯೂರಪ್ಪ ಅಸಲಿ ಲಿಂಗಾಯತನಾಗಿ ಉಳಿದಿಲ್ಲ. ಅಂದಮೇಲೆ ಬಸವಣ್ಣನವರ ಹೆಸರನ್ನು ಎತ್ತುವ ಯಾವ ನೈತಿಕತೆಯೂ ಯಡ್ಡಿಗೆ ಇಲ್ಲ. ಸನಾತನ ಪರಂಪರೆ ಎಂಬ ಹೆಸರಿನ ಮೇಲೆ ಮತ್ತದೆ ಮನುವಿನ ಮೊಮ್ಮಕ್ಕಳ ಆಟಾಟೋಪ ಜರುಗದಂತೆ ತಡೆಯಬೇಕೆಂದರೆ ನಾವು ನೀವೆಲ್ಲ ಅನಿವಾರ್ಯವಾಗಿ ಇಂಥ ಬೂಸಿಗಳನ್ನು ಆದಷ್ಟು ದೂರ ಇಟ್ಟುಕೊಳ್ಳಬೇಕು. ಆ ಮೂಲಕ ಬಸವಣ್ಣ, ಬಸವತತ್ವ ಮತ್ತು ಲಿಂಗಾಯತರ ಸ್ವಾತಂತ್ರ್ಯ ಮತ್ತು ಸ್ವಾಭಿಮಾನವನ್ನು ಉಳಿಸಿಕೊಳ್ಳಬೇಕು.

ಇವತ್ತು ಯಡಿಯೂರಪ್ಪನಿಗೆ ಲಿಂಗಾಯತ ಧರ್ಮ ತಾನು ಅಧಿಕಾರಕ್ಕೆ ಏರುವುದಕ್ಕೆಂದು ಮಾತ್ರವೇ ಬೇಕಿರಬಹುದು. ಆದರೆ ಈ ರಾಜ್ಯದ ಸ್ವಾಭಿಮಾನಿ ಲಿಂಗಾಯತರಿಗೆ ತಮ್ಮ ಸಮುದಾಯದ ತತ್ವ, ಸಿದ್ಧಾಂತ, ಸ್ವಾತಂತ್ರ ಮತ್ತು ಸ್ವಾಭಿಮಾನವನ್ನು ಉಳಿಸಿಕೊಳ್ಳುವ ಜವಾಬ್ದಾರಿ ಇದೆಯಲ್ಲವೇ? ಅದನ್ನು ಸಮಸ್ತ ಲಿಂಗಾಯತರು ಮಾಡಲು ಸಿದ್ಧರಾಗಬೇಕಲ್ಲವೇ? ಲಿಂಗಾಯತ ಧರ್ಮ ಉಳಿಯಬೇಕೆಂದರೆ ಸನಾತನ ಧರ್ಮದ ಪಾಲಕರ ಪಕ್ಷವಾದ ಬಿಜೆಪಿ ಸೋಲಬೇಕಲ್ಲವೇ?

ಇವತ್ತು ಲಿಂಗಾಯತರು ತಮ್ಮನ್ನು ಒಂದು ಪ್ರಶ್ನೆಯನ್ನು ಕೇಳಿಕೊಳ್ಳಬೇಕಿದೆ.

ಅದೇನೆಂದರೆ: ಬಸವತತ್ವಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿರುವ ಯಡ್ಡಿಯನ್ನು ಗೆಲ್ಲಿಸುವ ಮೂಲಕ ತಾವೇ ತಮ್ಮ ಕೈಯ್ಯಾರೆ ತಮ್ಮ ಲಿಂಗಾಯತ ಧರ್ಮಕ್ಕೆ ದ್ರೋಹ ಬಗೆಯುತ್ತಿಲ್ಲವೆ ಎಂಬುದು.

■ ವಿಶ್ವಾರಾಧ್ಯ ಸತ್ಯಂಪೇಟೆ

ಇದೊಂತರ ತುಂಡುಗುತ್ತಿಗೆ ರಾಜಕಾರಣ ಆಯ್ತಲ್ಲ ಸಾರ್

ತನ್ನ ಹಸ್ತಕ್ಷೇಪವಿಲ್ಲದೆ ಹಸ್ತದವರಾಗಲಿ, ಕಮಲದವರಾಗಲಿ ಕುರ್ಚಿ ಹಿಡಿಯುವುದು ಕನಸಿನ ಮಾತು ಎಂದು ಠೇಂಕಾರ ಮಾಡಿರುವ ದೇವೇಗೌಡರನ್ನ ಮನದುಂಬಿ ಮಾತನಾಡಿಸಬೇಕೆನಿಸಿತಲ್ಲಾ, ಆ ಕೂಡಲೇ ಫೋನ್ ಮಾಡಲಾಗಿ, ರಿಂಗಾಯ್ತು, ರಿಂಗ್ ಟೋನ್, "ಆಡಿಸಿನೋಡು ಬೀಳಿಸಿನೋಡು ಉರುಳಿ ಹೋಗದು. ಏನೇ ಬರಲಿ ಯಾರಿಗು ಸೋತು ತಲೆಯಬಾಗದೂ, ಆಡಿಸಿ....."

ಘೂತ್ತೇರಿ

■ ಯಾಹೂ

"ಹಲೋ, ಯಾರೂ?"

"ನಾನು ಸಾರ್, ಯಾಹೂ."

"ಓಹ್ ಓ, ಏನು ಗುರುವೇ ಸಮಾಚಾರ?"

"ಒಳ್ಳೆ ಹೇಳಿಕೆ ಕೊಟ್ಟಿದ್ದಿರಿ ಸಾರ್. ನನಗಂತೂ ತುಂಬಾ ಖುಷಿಯಾಯ್ತು."

"ಈ ಸಂದರ್ಭದಲ್ಲಿ ನಮ್ಮ ಅಭಿಪ್ರಾಯಗಳನ್ನ ಹೇಳುವಂತಹ ಅನಿವಾರ್ಯ ಸ್ಥಿತಿ ಸೃಷ್ಟಿಯಾಗಿದೆ."

"ನೀವೆ ಅಲ್ಲವ ಸಾರ್ ಸೃಷ್ಟಿ ಮಾಡಿದೋರು?"

"ಇರಬಹುದು. ಕಾರಣ ಅಂತೂ ನಾನಲ್ಲ, ಈ ದೇವೇಗೌಡನ್ನ ಬಹಳ ಹಗುರವಾಗಿ ಪರಿಗಣಿಸಿರತಕ್ಕಂತಹ ಜನಕ್ಕೆ ಉತ್ತರ ಕೊಡತಕ್ಕಂತಹ ಕಾಲ ಹತ್ತಿರ ಬರ್ತಾಯಿದೆ."

"ನಿಮ್ಮ ಹೇಳಿಕೆಯಿಂದ ಒಂದು ಅನಾಹುತವಾಗೊ ಸಂಭವವಿದೆಯಲ್ಲವಾ ಸಾರ್?"

"ಯಾವ ಅನಾಹುತನೂ ಆಗಲ್ಲ."

"ಅಂಗಲ್ಲ ಸಾರ್, ನಿಮ್ಮ ಹಂಗಿನಲ್ಲಿ ಅಥವಾ ನಿಮ್ಮ ಬೆಂಬಲದಿಂದ ಸರ್ಕಾರ ರಚನೆ ಮಾಡದಂಗೆ ಜನಗಳು ಯಾವುದಾರ ಒಂದು ಪಾರ್ಟಿಗೆ ಮೆಜಾರಿಟಿ ಕೊಟ್ರೆ?"

"ಅಂತಹ ಅಪಾಯ ಆಗೋ ಸಂಭವ ಇಲ್ಲ. ಕರ್ನಾಟಕದ ಮತದಾರ ತುಂಬ ಪ್ರಬುದ್ಧನಾಗಿದ್ದಾನೆ."

"ಆತ ಪ್ರಬುದ್ಧನಾಗಿದ್ರೆ ನಿಮ್ಮನ್ನ ಸಾರಾಸಗಟು ತಿರಸ್ಕರಿಸುತ್ತಾನಲ್ಲವ ಸಾರ್?"

"ಏನೇಳ್ತಯಿದೀರಿ ನೀವು? ಈ ದೇವೇಗೌಡ ಬಹಳ ಚುನಾವಣೆಗಳನ್ನು ನೋಡಿದಾನೆ, ಅದಕ್ಕೆ ಈ ರೀತಿ ಧೈರ್ಯವಾಗಿ ಹೇಳಿರೋದು."

"ನಿಮ್ಮ ಪಾರ್ಟಿಯಿಂದ ಯಾರೂ ಹೊರಗೋಗದಂಗೆ ತಡಿಯುತ್ತಲವ ಈ ಹೇಳಿಕೆ?"


"ನಮ್ಮ ಪಾರ್ಟಿಯಿಂದ ಹೋದವರನ್ನ ನಾನೆಂದೂ ತಡದಿಲ್ಲ, ಹಾಗೆ ಬರೋವರನ್ನ ತಡದಿಲ್ಲ. ಈ ತರದ ಜನಗಳನ್ನ ನಾನು ಕಳೆದ ಅರ್ಧ ಶತಮಾನದಿಂದ ನೋಡಿದ್ದೇನೆ. ವಿಷಯ ಅದಲ್ಲ, ಸಂಪೂರ್ಣ ಮೆಜಾರಿಟಿ ಬರ್ತಿವಿ ಅಂತ ಏನು ಮೆರಿತಾಯಿದ್ದಾರಲ್ಲಾ, ಆ ಎರಡೂ ಪಾರ್ಟಿಗಳಿಗೂ ಒಂದು ಎಚ್ಚರಿಕೆ ಕೊಡಬೇಕಾಗಿತ್ತು ಕೊಟ್ಟಿದಿನಿ."

"ಅಂಗಿದ್ರೆ ತಾವು ಎಷ್ಟು ಸೀಟು ಗೆಲ್ತಿರಿ ಸಾರ್?"

"ಚುನಾವಣೆ ಮುಗದ ಮೇಲೆ ನೀವೇ ನೋಡಿ."

"ಅಂತೂ ನಿಮ್ಮ ಸಹಕಾರವಿಲ್ದೆ ಯಾರೂ ಸರ್ಕಾರ ಮಾಡಕ್ಕಾಗಲ್ಲ ಅಂತಿರಾ?"


"ಅದನ್ನೆಲ್ಲ ಈಗ್ಲೆ ಹೇಳಲ್ಲ, ನನ್ನ ಪಾರ್ಟಿಗೆ ಪ್ರಭಾವಿ ನಾಯಕರ ಅಗತ್ಯವಿಲ್ಲ, ಹಾಗೇನೇ ಮುವ್ವತ್ತು ಸೀಟುಗಳಿಗಿಂತ ಹೆಚ್ಚಿನ ಸ್ಥಾನದ ಅಗತ್ಯವೂ ಇಲ್ಲ."



"ಅಂಗಾದ್ರೆ ಇದೊಂತರ ತುಂಡುಗುತ್ತಿಗೆ ರಾಜಕಾರಣ ಆದಂಗಾಯ್ತಲ್ಲ ಸಾರ್?"

"ತುಂಡು ಗುತ್ತಿಗೆ ಜನಗಳೇ ಅಲ್ಲವ ಕ್ರಮೇಣ ಕ್ಲಾಸ್‌ವನ್ ಕಂಟ್ರಾಕ್ಟರಾಗೋದು. ಆದ್ದರಿಂದ ನಾನು ಸದ್ಯದ ಕರ್ನಾಟಕದ ಪರಿಸ್ಥಿತಿಯಲ್ಲಿ ದೊಡ್ಡಮಟ್ಟದ ರಾಜಕಾರಣವನ್ನ ಮಾಡೋದಿಕ್ಕೋಗಲ್ಲ. ಅರವತ್ತು ಕ್ಷೇತ್ರದಲ್ಲಿ ಗೆಲ್ಲಲೇಬೇಕು ಅಂತ ಹೋರಾಡ್ತಿವಿ. ಮುವ್ವತ್ತು ಸೀಟುಗಳನ್ನ ಗೆದ್ದೇ ಗೆಲ್ತಿವಿ. ಆಗ ಮಾಜಿ ಪ್ರಧಾನಿಗಳಾದ ದೇವೇಗೌಡರು ಎಲ್ಲಿದಾರೆ ಅಂತ ಕೇಳಿ ಅದ್ವಾನಿಯವರು, ಶ್ರೀಮತಿ ಸೋನಿಯಾಗಾಂಧಿಯವರು ನನ್ನ ಮನೆ ಬಾಗಿಲಿಗೆ ಬರ್ತರೆ. ಉಳಿದ ವಿಷಯನ ಈಗ ಮಾತನಾಡೊಲ್ಲ ನಾನು."

"ಘೂತ್ತೇರಿ!!!"



ಪ್ರೀತಿಯ ಅಕ್ಕ ಗೌರಿ ಲಂಕೇಶ್‌ಗೆ,

ಇಂದು ಪ್ರೆಸ್‌ಗೆ ಇಬ್ಬರು ಹೆಣ್ಣುಮಕ್ಕಳು ಬಂದು ಯಶಸ್ವಿನಿ ಫಲಾನುಭವಿಯ ಪ್ರತಿಗೆ ಲ್ಯಾಮಿನೇಷನ್ ಮಾಡಿಕೊಡಿ ಎಂದರು.

ಮಾಮೂಲಿನಂತೆ ಮಿಷನ್ ಆನ್ ಮಾಡಿ ಕಣ್ಣರಳಿಸಿ ನೋಡುತ್ತೇನೆ ಪಿ. ಲಂಕೇಶ್ ಸ್ವಸಹಾಯ ಸಂಘ, ನೆಹರು ಬೀದಿ, ಅಜ್ಜಂಪುರ!? ಮೂಕವಿಸ್ಮಿತನಾಗಿ, ಕಣ್ಣಲ್ಲಿ ನನಗರಿವಿಲ್ಲದಂತೆ ನೀರು ನುಗ್ಗಿ ಬಂದವು. ವಿಚಾರಿಸಿದರೆ, ಮೇಷ್ಟ್ರು ನಿಧನ ಹೊಂದಿದ ದಿನ ಅವರ ನೆನಪಿಗೆ ಸಂಘ ರಚಿಸಿಕೊಂಡು ಅಂದಿನಿಂದ ಇಂದಿನವರೆಗೂ ಚೆನ್ನಾಗಿ ನಡೆಸಿಕೊಂಡು ಬರುತ್ತಿದ್ದೇವೆ ಎಂದು ಖುಷಿಯಾಗಿ ಹೇಳಿದರು.

ಅಪ್ಪ (ಮೇಷ್ಟ್ರು) ಇನ್ನೂ ನಮ್ಮ ನಡುವೆ ಜೀವಂತ ಇದ್ದಾರೆ ಎನ್ನುವುದಕ್ಕೆ ಇದೊಂದೇ ನಿದರ್ಶನ ಸಾಕಲ್ಲವೇ? ಯಾಕೋ ಇದನ್ನೆಲ್ಲಾ ನಿಮ್ಮ ಮುಂದೆ ಹೇಳಿಕೊಳ್ಳೋಣ ಅಂತ ಅನ್ನಿಸಿ, ಬಡುವು ಮಾಡಿಕೊಂಡು ಪತ್ರಿಸಿದೆ.

ಇತಿ ನಿಮ್ಮ ತಮ್ಮ
ಶೂದ್ರ ಸಂತೋಷ್
ಅಜ್ಜಂಪುರ



ಕಾಸಿದ್ದೋರಿಗೆ ಟಿಕೆಟ್ ನಿಷ್ಠಾವಂತರಿಗೆ ಬಕೆಟ್

ಕ್ರೂರಾತಿಕ್ರೂರ ದಕಾಯಿತರು, ಕಳ್ಳರು ಮತ್ತು ರೌಡಿ ಗ್ಯಾಂಗ್‌ಗಳಲ್ಲೂ ಒಂದು ನೀತಿಯಿದೆ. ಬಹುಕಾಲದಿಂದ ತಮಗೆ ನಿಷ್ಠರಾಗಿದ್ದವರನ್ನು, ಕಷ್ಟ ಕಾಲದಲ್ಲಿ ಕೈಹಿಡಿದವರನ್ನು ಯಾವುದೇ ಕಾರಣಕ್ಕೂ ಅವರು ಬಿಟ್ಟುಕೊಡುವುದಿಲ್ಲ. ಆದರೆ ಕರ್ನಾಟಕದ ರಾಜಕೀಯ ಪಕ್ಷಗಳಿವೆಯಲ್ಲ; ಅದರಲ್ಲೂ ಬಿಜೆಪಿ-ಕಾಂಗ್ರೆಸ್‌ನಂಥ ದೈತ್ಯ ಪಾರ್ಟಿಗಳಲ್ಲಿ ಈ ದಕಾಯಿತರು-ರೌಡಿಗಳ ನಿಯತ್ತೂ ಉಳಿದಿಲ್ಲ.

ಆ ಕಾಲದಿಂದ ಪಕ್ಷ ಕಟ್ಟಿದವರು, ಕಷ್ಟಕಾಲದಲ್ಲಿ ಪಕ್ಷನಿಷ್ಠೆ ಬಿಡದವರು, ಸಾಲಸೂಲ ಮಾಡಿ ಕಾರ್ಯಕರ್ತರನ್ನು ಉಳಿಸಿಕೊಂಡವರು, ನಿದ್ದೆ-ನೀರು ತೊರೆದು ಪಕ್ಷಗಳ ಬ್ಯಾನರ್ ಕಟ್ಟಿದವರು, ನಡುರಾತ್ರಿ ತನಕ ಕಾದು ನಾಯಕರಿಗೆ ಜಿಂದಾಬಾದ್ ಕೂಗಿದವರು, ವಿರೋಧಿಗಳಿಂದ ಒದೆ ತಿಂದೂ ಪಕ್ಷ ಬಿಡದವರನ್ನು ರೊಕ್ಕದ ಥೈಲಿಗಳ ಮುಂದೆ ಮಾರಾಟಕ್ಕಿಟ್ಟರೆ ಏನಾಗಬೇಡ?

ಇನ್ನು ಮುಂದೆ ನಾವೂ ಕೂಡ ಕಂಡೋರ ಆಸ್ತಿಗೆ ಕಾಂಪೌಂಡ್ ಹಾಕ್ಕೊಂಡೋ ಕಾಂಟ್ರಾಕ್ಟ್ ಮಾಡಿ ಬೋಗಸ್ ಬಿಲ್ ಹೊಡಕೊಂಡೋ ದುಡ್ಡು ಮಾಡಿಕೊಂಡೇ ಪಕ್ಷಕ್ಕೆ ಬರಬೇಕಾ? ದುಡ್ಡು ಇದೆ ಎಂದ ಮಾತ್ರಕ್ಕೇ ಟಿಕೆಟ್ ಕೊಡೋದಾದ್ರೆ ಇನ್ನು ಮುಂದೆ ಪಕ್ಷಗಳಿಗೆ ಯಾರಾದ್ರೂ ಏಕೆ ಸದಸ್ಯರಾಗಬೇಕು? ಕಾರ್ಯಕರ್ತ ಅನ್ನಿಸಿಕೊಂಡು ಕಾಂಗ್ರೆಸ್‌ನವರಿಂದ ಒದೆ ತಿನ್ನೋದಕ್ಕಿಂತಲೂ ಮನೆಹಾಳ ಕೆಲ್ಸ ಮಾಡ್ಕೊಂಡಿದ್ದು ದುಡ್ಡು ಮಾಡಿ ಟಿಕೆಟ್ ಖರೀದಿಸಬಹುದಲ್ವಾ?

ಇದು ಚಿಕ್ಕಪೇಟೆಯ ಬಿಜೆಪಿ ಕಾರ್ಯಕರ್ತರ ಆಕ್ರೋಶ. ಉದಯ್ ಗರುಡಾಚಾರ್ ಎಂಬ ಖತರ್‌ನಾಕ್ ಭೂಡಕಾಯಿತನಿಗೆ ಚಿಕ್ಕಪೇಟೆಯ ಬಿಜೆಪಿ ಟಿಕೆಟ್ ಘೋಷಣೆಯಾದ ಮರುಗಳಿಗೆಯಿಂದಲೇ ಇಂಥದೊಂದು ಬಂಡಾಯ ಭುಗಿಲೆದ್ದಿದೆ. ಈ ರೀತಿ ಬಿಜೆಪಿ ನಾಯಕರ ವಿರುದ್ಧ ಶಾಪ ಹಾಕುತ್ತಿರುವವರೆಲ್ಲರೂ ಕೇವಲ ಬಿಜೆಪಿ ಕಾರ್ಯಕರ್ತರಷ್ಟೇ ಅಲ್ಲ; ಹುಟ್ಟಾ ಆರೆಸ್ಸೆಸ್ ಸ್ವಯಂಸೇವಕರು!

ಓಕೆ, ಮಾರ್ಕೆಟ್‌ದೇವಿಯಂಥ ರಕ್ಕಸನ ಮುಂದೆ ರೊಕ್ಕ ಬಿಚ್ಚುವ ಉದಯ ಗರುಡಾಚಾರನಂಥವರೇ ಬಿಜೆಪಿಗೆ ಅನಿವಾರ್ಯವಾಗಿರಬೇಕೆಂದೇ ಲೆಕ್ಕ ಹಾಕಿದರೂ ಯಶವಂತಪುರ ಕಾರ್ಯಕರ್ತರ ಮೇಲೆ ಶೋಭಾ ಕರಂದ್ಲಾಜೆಯನ್ನು ತಂದು ಗುದುಮಿದ ನಾಯಕರ ಏಕಾಧಿಪತ್ಯಕ್ಕೆ ಯಾವುದೇ ಸಮರ್ಥನೆಗಳಿರಲಿಲ್ಲ.

ಯಾವ ಯೋಗ್ಯತೆಯೂ ಇಲ್ಲದೆ ಆಕೆಯನ್ನು ಎಮ್ಮೆಲ್ಸಿ ಮಾಡುವಾಗಲೇ ದೊಡ್ಡಮಟ್ಟದ ಪ್ರತಿಭಟನೆಗಳಾಗಿದ್ದವು. ಈಗ ಮತ್ತೆ ಯಶವಂತಪುರಕ್ಕೆ ಟಿಕೆಟ್ಟು ಕೊಟ್ಟು ಡಬಲ್ ಬೋನಸ್ ಕೊಟ್ಟರೆ ಉಳಿದ ಕಾರ್ಯಕರ್ತರ ಗತಿಯೇನು?

ಕರಂದ್ಲಾಜೆ ಮೂಲತಃ ದಕ್ಷಿಣ ಕನ್ನಡದಾಕೆ. ಪಕ್ಷಕ್ಕಾಗಿ ನಯಾಪೈಸೆಯ ತ್ಯಾಗ ಮಾಡಿಲ್ಲ, ಯಡ್ಡಿಗೆ ಪರಮಾಪ್ತೆ ಎಂಬ ಏಕಮಾತ್ರ ಅರ್ಹತೆಯ ಹೊರತಾಗಿ ಮತ್ತೊಂದಿಲ್ಲ, ಇನ್ನೂ ಎಮ್ಮೆಲ್ಸಿಗಿರಿಯೇ ಮುಗಿದಿಲ್ಲ, ಅಂಥಾದ್ದರಲ್ಲಿ ಪಕ್ಷದ ಗೆಲುವಿಗೆ ಶ್ರಮಿಸುವ ಬದಲು ತಾನೇ ಎಲೆಕ್ಷನ್ನಿಗೆ ನಿಂತು ಎಮ್ಮೆಲ್ಲೆಯಾಗಲು ಹೊರಟ ಕರಂದ್ಲಾಜೆಯ ವಿರುದ್ಧ ಯಶವಂತಪುರದ ನಿಷ್ಠಾವಂತ ಬಿಜೆಪಿ ಕಾರ್ಯಕರ್ತರು ಯಡ್ಡಿಯ ಮುಂದೆ ನಿಂತು ಕಷ್ಟ ಹೇಳಿಕೊಂಡರೆ ಯಡ್ಡಿಯ ಬಾಯಿಂದ ಬಂದ ಮಾತಾದರೂ ಎಂಥಾದ್ದು?

ನೋಡ್ರಯ್ಯಾ ಸುಮ್ನೇ ಕ್ಯಾತೆ ತೆಗೀಬೇಡಿ. ನಾಳೆದಿನ ನೀವೆಲ್ಲ ಕೌನ್ಸಿಲರ್‌ಗಳಾಗಬೇಕು ಅಂದ್ರೆ, ನಿಮಗೆಲ್ಲ ಪಾರ್ಟಿಯಿಂದ ಟಿಕೆಟ್ ಸಿಗಬೇಕು ಅಂದ್ರೆ; ಬಾಯಿಮುಚ್ಕೊಂಡು ಆವಳನ್ನ ಗೆಲ್ಸಿಕೊಂಡು ಬನ್ನಿ. ಮಾತೇನಿದ್ರೂ ಅವಳು ಎಮ್ಮೆಲ್ಲೇಯಾದ ನಂತರಾನೇ.....!

ಯಡ್ಡಿಯ ಹೂಂಕಾರವೇ ಹೀಗಿತ್ತೆಂದ ಮೇಲೆ ಯಶವಂತಪುರದ ಬಿಜೆಪಿ ಕಾರ್ಯಕರ್ತರ ಮನಸ್ಥಿತಿ ಹೇಗಿರಬೇಡ? ಯಶವಂತಪುರವೆಂಬ ಹೊಸ ಕ್ಷೇತ್ರದ ಮಟ್ಟಿಗೆ ಆ ಕಾಲದಿಂದಲೂ ಬಿಜೆಪಿಯನ್ನು ಬೆಳೆಸಿದ ನಿಷ್ಠಾವಂತ ಕಾರ್ಯಕರ್ತರ ದಂಡೇ ಇದೆ. ಎಮ್ಮೆಲ್ಲೆಯಾಗುವ ಕನಸು ಹೊತ್ತೇ ಅಶೋಕ್ ಅನುಯಾಯಿ ಕಗ್ಗಲಿಪುರದ ಶಿವಕುಮಾರ್ ಪಕ್ಷ ಸಂಘಟಿಸಿದ್ದಾರೆ. ಯಶವಂತಪುರ ಮಂಡಲದ ಬಿಜೆಪಿ ಉಪಾಧ್ಯಕ್ಷ ಶಿವಸ್ವಾಮಿ, ಕೆಂಗೇರಿ ಪುರಸಭೆಯ ಮಾಜಿ ಉಪಾಧ್ಯಕ್ಷ ಮತ್ತು ಚಿತ್ರ ನಿರ್ಮಾಪಕ ಜಿ. ಮುನಿರಾಜು, ಕೆಂಗೇರಿ ಪುರಸಭೆಯ ಮಾಜಿ ಅಧ್ಯಕ್ಷ ರ. ಆಂಜನಪ್ಪ ಗಿರಿಯಪ್ಪ, ಹನುಮಂತರಾಯಪ್ಪ ಮುಂತಾದ ಲೋಕಲ್ ಲೀಡರುಗಳೇ ಆಕಾಲದಿಂದ ಈ ಭಾಗದಲ್ಲಿ ಬಿಜೆಪಿಯನ್ನು ಬೆಳೆಸಿದ್ದು.

ಇಂಥ ಕಾರ್ಯಕರ್ತರನ್ನು ಮುಂದೆ ನಿಲ್ಲಿಸಿಕೊಂಡು ತನ್ನ ಮನದನ್ನೆಯನ್ನು ಎಮ್ಮೆಲ್ಲೆ ಮಾಡಿದ ನಂತರವೇ ಮುಂದಿನ ಮಾತು ಎನ್ನುವ ಯಡ್ಡಿಯ ದುಷ್ಟತನಕ್ಕೆ ಹೋಲಿಸಿದರೆ ಕಾಂಗ್ರೆಸ್ ಸಾವಿರ ಪಾಲು ಮೇಲಲ್ಲವೇ? ತಪ್ಪೋನೆಪ್ಪೋ, ಪಕ್ಷ ನಿಷ್ಠೆ ಮತ್ತು ತತ್ವನಿಷ್ಠೆಗಳನ್ನು ಅನಾದಿಕಾಲದಿಂದಲೂ ತನ್ನ ಕಾರ್ಯಕರ್ತರಿಗೆ ಬೋಧಿಸಿಕೊಂಡೇ ಬಂದದ್ದು ಬಿಜೆಪಿ. ಈಗ ಬಿಟಿಎಂ ಲೇಔಟಿಗೆ ಬಿಜೆಪಿ ಅಭ್ಯರ್ಥಿಯಾಗಿರುವ ಪ್ರಸಾದ್ ರೆಡ್ಡಿಗೆ ಲ್ಯಾಂಡ್ ಹೊಡೆಯುವುದು ಮತ್ತು ಸೆಕೆಂಡ್ಸ್ ಕಳ್ಳಸಾಗಾಣಿಕೆ ಮಾಡುವುದು ಬಿಟ್ಟರೆ ಆರೆಸ್ಸೆಸ್ ಎಂಬುದು ಏನು? ದೀನದಯಾಳ್ ಉಪಾಧ್ಯಾಯ ಯಾರು? ಎಂಬುದೇ ಗೊತ್ತಿಲ್ಲ.

ಇಂಥಾ ಖದೀಮನನ್ನು ಕರೆತಂದು ಬಿಟಿಎಂ ಲೇಔಟಿಗೆ ಬಿಜೆಪಿ ಅಭ್ಯರ್ಥಿಯನ್ನಾಗಿ ಮಾಡಿ ಗೆಲ್ಲಿಸಿ ಎಂದುಬಿಟ್ಟರೆ ಯಾವ ಬಿಜೆಪಿ ಕಾರ್ಯಕರ್ತನಿಗೆ ಸಿಟ್ಟು ಬರಲ್ಲ? ಮಹದೇವಪುರ ಕ್ಷೇತ್ರದಲ್ಲಿ ಇನ್ನಿಲ್ಲದಂತೆ ಬಿಜೆಪಿಗಾಗಿ ದುಡಿದ ಕೆಂಪಾಪುರಮೂರ್ತಿ, ವೆಂಕಟೇಶ್ ಥರದವರ ಮುಂದೆ ದೂರದ ಬಾಗಲಕೋಟೆಯ ಅರವಿಂದ ಲಿಂಬಾವಳಿಯನ್ನು ತಂದು ಹೇರಿದರೆ ಕಾರ್ಯಕರ್ತರ ಪಾಡೇನು?

ಅಷ್ಟಕ್ಕೂ ಲಿಂಬಾವಳಿ ಮತ್ತು ಪಕ್ಕದ ಸಿ.ವಿ. ರಾಮನ್‌ನಗರದ ಬಿಜೆಪಿ ಅಭ್ಯರ್ಥಿ ರಘು ಇಬ್ಬರೂ ಭಾವನೆಂಟರು. ಬಾಮ್ಮೈದನಿಗೊಂದು ಎಮ್ಮೆಲ್ಲೇ ಟಿಕೆಟ್ಟು ಆತನ ಪಕ್ಕದಲ್ಲೇ ಭಾವನಿಗೆ ಇನ್ನೊಂದು ಟಿಕೆಟ್ ಕೊಡುತ್ತಾರೆಂದರೆ ಉಳಿದ ನಾಯಕರೇನು ಜೀತದಾಳುಗಳೆ? ಬಿಜೆಪಿ ಅದೆಷ್ಟು ಕುಲಗೆಟ್ಟಿದೆಯೆಂಬುದಕ್ಕೆ ಹೊಸಪೇಟೆಯಿಂದ ಕರುಣಾಕರ ರೆಡ್ಡಿಗೆ ಟಿಕೆಟ್ ಕೊಟ್ಟು ಆತನ ಅಣ್ಣ ಸೋಮಶೇಖರ ರೆಡ್ಡಿಗೆ ಬಳ್ಳಾರಿಯ ಬಿಜೆಪಿ ಟಿಕೆಟ್ ಕೊಡುತ್ತದೆ. ಕೆ.ಆರ್. ಪುರದ ನಂದೀಶ್ ರೆಡ್ಡಿ ಮತ್ತು ಯಲಹಂಕದ ಬಿಜೆಪಿ ಅಭ್ಯರ್ಥಿ ವಿಶ್ವನಾಥ್ ರೆಡ್ಡಿ ಇಬ್ಬರೂ ರಕ್ತಸಂಬಂಧಿಗಳು!

ನೆಹರೂ ವಂಶಾಳ್ವಿಕೆಯನ್ನು ದೇವೇಗೌಡರ ಕುಟುಂಬಾಧಿಕಾರವನ್ನು ಇನ್ನು ಯಾವತ್ತಾದರೂ ಬಿಜೆಪಿ ನಾಯಕರು ಟೀಕಿಸುವುದುಂಟೆ? ನಂಬಿದ ಕಾರ್ಯಕರ್ತರನ್ನು ಬೀದಿಗೆ ಹಾಕಿದ ಬಿಜೆಪಿಯ ದುಷ್ಟತನದ ವಿರುದ್ಧ ಅದರ ಕಾರ್ಯಕರ್ತರೇ ದಿನಕ್ಕೊಂದು ಪ್ರತಿಭಟನೆ ಮಾಡುತ್ತಿದ್ದಾರೆಂದರೆ ಅದರ ಪ್ರಣಾಳಿಕೆಗಳಿಗಾಗಲಿ, ಚುನಾವಣಾ ಭರವಸೆಗಾಗಲಿ ಏನಾದರೂ ಅರ್ಥವುಂಟೆ? ತನ್ನ ನಿಷ್ಠಾವಂತ ಕಾರ್ಯಕರ್ತರನ್ನೇ ವಂಚಿಸುವ ಪಕ್ಷ ನಂಬಿ ಓಟು ಕೊಟ್ಟವರನ್ನು ವಂಚಿಸದಿರುತ್ತಾ?

ಇನ್ನು ಕಾಂಗ್ರೆಸ್ ವಿಷಯಕ್ಕೆ ಬಂದರೆ ಖರ್ಗೆ, ಧರ್ಮಸಿಂಗ್, ಕೃಷ್ಣ, ಆಸ್ಕರ್ ಪೂಜಾರಿ, ಮಾರ್ಗರೆಟ್ ಆಳ್ವ, ಜಾಫರ್ ಷರೀಫ್ ಹೀಗೆ ಅಸಂಖ್ಯಾತ ನಾಯಕರ ಭಾರಕ್ಕೆ ಕಾಂಗ್ರೆಸ್ಸೇ ತತ್ತರಿಸುತ್ತಿದೆ. ಇಷ್ಟೆಲ್ಲ ಅನುಭವಿಸಿದ ಮೇಲೂ ನಾಯಕಿ ಮಾರ್ಗರೆಟ್ ಆಳ್ವಗೆ ತನ್ನ ಮಗ ನಿವೇದಿತಾ ಆಳ್ವನನ್ನು ಸರ್ವಜ್ಞ ನಗರದ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಮಾಡುವ ದುರಾಶೆ. ತಮಾಷೆಯೆಂದರೆ ಅದೇ ಸರ್ವಜ್ಞ ನಗರದಿಂದ ತನ್ನ ಮೊಮ್ಮಗ ರೆಹಮಾನ್ ಷರೀಫ್‌ನನ್ನು ಎಮ್ಮೆಲ್ಲೇ ಮಾಡಲು ಜಾಫರ್ ಷರೀಫ್ ಹಠಕ್ಕೆ ಬಿದ್ದಿದ್ದಾರೆ. ಕಾಂಗ್ರೆಸ್ ಅಧಿಕಾರದಲ್ಲಿಲ್ಲದ ಸಂಕಷ್ಟ ಕಾಲದಲ್ಲಿ ಅಲ್ಲಿ ಪಕ್ಷ ಕಟ್ಟಿ ಬೆಳೆಸಿದ್ದು ಮಾಜಿ ಉಪಮೇಯರ್ ಆರ್. ಶಂಕರ್. ಇಡೀ ಸರ್ವಜ್ಞನಗರದ ಕಾಂಗ್ರೆಸ್ ಕಾರ್ಯಕರ್ತರೆಲ್ಲ ಶಂಕರ್ ಬೆನ್ನಿಗೆ ನಿಂತು ವಲಸೆ ಬರುವ ಯಾರಿಗೇ ಟಿಕೆಟ್ ಕೊಟ್ಟರೂ ಪ್ರತಿಭಟಿಸುತ್ತವೆಂದು


(12 ನೇ ಪುಟಕ್ಕೆ)

ಆ ಕಾಲದಿಂದ ಪಕ್ಷ ಕಟ್ಟಿದವರು, ಕಷ್ಟಕಾಲದಲ್ಲಿ ಪಕ್ಷನಿಷ್ಠೆ ಬಿಡದವರು, ಸಾಲಸೂಲ ಮಾಡಿ ಕಾರ್ಯಕರ್ತರನ್ನು ಉಳಿಸಿಕೊಂಡವರು, ನಿದ್ದೆ-ನೀರು ತೊರೆದು ಪಕ್ಷಗಳ ಬ್ಯಾನರ್ ಕಟ್ಟಿದವರು, ನಡುರಾತ್ರಿ ತನಕ ಕಾದು ನಾಯಕರಿಗೆ ಜಿಂದಾಬಾದ್ ಕೂಗಿದವರು, ವಿರೋಧಿಗಳಿಂದ ಒದೆ ತಿಂದೂ ಪಕ್ಷ ಬಿಡದವರನ್ನು ರೊಕ್ಕದ ಥೈಲಿಗಳ ಮುಂದೆ ಮಾರಾಟಕ್ಕಿಟ್ಟರೆ ಏನಾಗಬೇಡ?

■ ರಾ. ಸೋಮನಾಥ್


ಲಿಂಬಾವಳಿ


ಮಾರ್ಗರೆಟ್ ಆಳ್ವ


ಗೋಲ್ಡ್ ನಾರಾಯಣಸ್ವಾಮಿ


ಆರ್. ಶಂಕರ್


ಎಂ. ಶ್ರೀನಿವಾಸ್

ಅಶೋಕ್ ಗೆಲುವಿಗೆ ಕಾಂಗ್ರೆಸ್ ಉಡುಗೊರೆ?



ಬಿಜೆಪಿಯ ಕೆಲ ನಾಯಕರನ್ನು ಗೆಲ್ಲಿಸಲು ಬೇಕೆಂತಲೇ ಕಾಂಗ್ರೆಸ್ಸು ಡಮ್ಮಿ ಅಭ್ಯರ್ಥಿಗಳನ್ನು ಹಾಕುತ್ತಿದೆಯೆ? ಕೆಲ ಕಾಂಗ್ರೆಸ್ ಮತ್ತು ಬಿಜೆಪಿ ನಾಯಕರ ಮಧ್ಯೆ ಸೀಕ್ರೆಟ್ ಒಪ್ಪಂದವಾಗಿದೆಯೇ?

ಇದು ರಾಜಾಜಿನಗರ ಮತ್ತು ಸರ್ ಸಿ.ವಿ. ರಾಮನಗರದ ಮಟ್ಟಿಗಷ್ಟೇ ಅಲ್ಲ ಪದ್ಮನಾಭನಗರದ ವಿಷಯದಲ್ಲೂ ನಿಜವಾಗುತ್ತಿದೆ. ಸದ್ಯ ಪದ್ಮನಾಭನಗರದ ಅಷ್ಟೂ ಕಾಂಗ್ರೆಸ್ ಕಾರ್ಯಕರ್ತರು ಯಡಿಯೂರಿನ ಕೌನ್ಸಿಲರ್ ವೆಂಕಟೇಶ್ ರೆಡ್ಡಿಗೇ ಟಿಕೆಟ್ ಕೊಡುವಂತೆ ಖರ್ಗೆಗೆ ಮನವಿ ಕೊಟ್ಟಿದ್ದಾರೆ. ಕಾಂಗ್ರೆಸ್‌ಗೆ ಅಧಿಕಾರವಿಲ್ಲದಿದ್ದಾಗ್ಲೂ ತನ್ನ ಸ್ವಂತ ಶಕ್ತಿಯಿಂದ ಒಂದಲ್ಲ ಎರಡು ಬಾರಿ ಗೆದ್ದ ಕೌನ್ಸಿಲರ್ ಆಗಿ ಇಡೀ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರನ್ನು ಸಂಭಾಳಿಸಿದ್ದೇ ವೆಂಕಟೇಶ್ ರೆಡ್ಡಿ. ಇವತ್ತು ಬಿಜೆಪಿಯ ಅಶೋಕ್ ವಿರುದ್ಧ ಸೆಣಸುವ ತಾಕತ್ತು ಮತ್ತು ಕಾರ್ಯಕರ್ತರ ಬೆಂಬಲವಿರುವ ವೆಂಕಟೇಶ್ ರೆಡ್ಡಿಯನ್ನು ಬದಿಗೊತ್ತಿ ತಾನು ಟಿಕೆಟ್ ಗಿಟ್ಟಿಸುವುದು ಗುರಪ್ಪನಾಯ್ಡು ಎಂಬ ಧರ್ಮಸಿಂಗ್ ಬಂಟನ ಮಸಲತ್ತು.

ಅಷ್ಟಕ್ಕೂ ಈ ಗುರಪ್ಪನಾಯ್ಡುವಿಗೂ ಪದ್ಮನಾಭನಗರಕ್ಕೂ ಏನೇನೂ ಸಂಬಂಧವಿಲ್ಲ. ಸಿಕ್ಕಾಪಟ್ಟೆ ಲ್ಯಾಂಡು ಹೊಡೆದು ದಿನ ಬೆಳಗ್ಗೆಯಾದರೆ ಧರ್ಮಸಿಂಗ್ ಮನೆಗೆ ಹಾಜರಿ ಕೊಟ್ಟು ಚಾಕರಿ ಮಾಡಿದ್ದು ಬಿಟ್ಟರೆ ಯಕಶ್ಚಿತ್ ಕೌನ್ಸಿಲರ್ ಆಗುವ ಯೋಗ್ಯತೆಯೂ ಈತನಿಗಿಲ್ಲ. ಈತನೇ ಕಾಂಗ್ರೆಸ್ ಅಭ್ಯರ್ಥಿಯಾದರೆ ಅಶೋಕ್ ದಾರಿ ಸಲೀಸು. ಒಂದೆಡೆ ಜೆಡಿಎಸ್‌ನ ಕಬ್ಬ ಬಾಬುವಿಗೆ ದಕ್ಕುವ ನಾಯ್ಡುಗಳ ಓಟೂ ಒಡೆದಂತಾಗುತ್ತದೆ ಇನ್ನೊಂದೆಡೆ ರೊಚ್ಚಿಗೆದ್ದ ಕಾಂಗ್ರೆಸ್ ಕಾರ್ಯಕರ್ತರೇ ಆತನನ್ನು ಸೋಲಿಸುತ್ತಾರೆ!



ಇದು ಬಿಜೆಪಿ ಷಡ್ಯಂತ್ರ. ಹಾಗೊಮ್ಮೆ ಗುರಪ್ಪ ನಾಯ್ಡುಗೆ ಬೇಡವೆಂದರೆ ತನ್ನನ್ನೇ ಅಭ್ಯರ್ಥಿ ಮಾಡಿ ಎಂದು ಕತ್ರಿಗುಪ್ಪೆ ಮುನಿರಾಜು ಲಾಬಿಗಿಳಿದಿದ್ದಾನೆ. ಈತನೂ ಬಿಜೆಪಿ ಏಜೆಂಟನೆ. ಹೇಳಿಕೇಳಿ ಅಶೋಕ್ ಪಕ್ಕಾ ಬಂಟ ಮತ್ತು ಪದ್ಮನಾಭನಗರದ ಕೌನ್ಸಿಲರ್ ಎಲ್. ಶ್ರೀನಿವಾಸ್‌ಗೆ ಈತ ರಕ್ತ ಸಂಬಂಧಿ. ನಿನ್ನೆಮೊನ್ನೆಯ ತನಕ ಬಿಜೆಪಿಯಲ್ಲೇ ಇದ್ದು ಚುನಾವಣೆ ಸಮೀಪಿಸುತ್ತಿದ್ದಂತೆ ಕಾಂಗ್ರೆಸ್‌ಗೆ ವಾಪಸ್ಸಾಗಿ ಈಗ ಟಿಕೆಟ್ ಕೇಳುತ್ತಿದ್ದಾನೆಂದರೆ, ಅದರ ಉದ್ದೇಶವೇನು?

ವೆಂಕಟೇಶ್ ರೆಡ್ಡಿಯಂಥ ಕಾಂಗ್ರೆಸ್ ನಿಷ್ಠರನ್ನು ಕೇಳುವವರ್‍ಯಾರು?

...ಈ ಯಡಿಯೂರಪ್ಪ ಬೇಕಿದ್ದರೆ ತಮ್ಮ ಮುಖ್ಯಮಂತ್ರಿ ಹುದ್ದೆ ಆಸೆಯನ್ನು, ಆಸ್ತಿಪಾಸ್ತಿಯನ್ನು, ಕೊನೆಗೆ ತಮ್ಮ ಇಡೀ ಪರಿವಾರವನ್ನೇ ಬಿಟ್ಟುಕೊಡುತ್ತಾರಾಗಲೀ, ಬದಲಿಗೆ ಅದರ ಶಾಸಕಿಯನ್ನು ಮಾತ್ರ ಬಿಟ್ಟುಕೊಡುವುದಿಲ್ಲ ಎಂಬುದು ಈಗಿನ ಟಿಕೆಟ್ ಹಂಚಿಕೆ ಪ್ರಸಂಗವೇ ತೋರಿಸಿಕೊಟ್ಟಿದೆ. ಕರ್ನಾಟಕದ ಪ್ರಬಲ ರಾಜಕೀಯ ನಾಯಕ ಯಡಿಯೂರಪ್ಪರ ಮೇಲೆ ಶೋಭಾರ ಪ್ರಭಾವ ಹಾಗೂ ಹಿಡಿತ ಅಷ್ಟರ ಮಟ್ಟಿಗಿದೆ-ಥೇಟ್ ತಮಿಳುನಾಡಿನ ಎಂಜಿಆರ್ ಮೇಲೆ ಜಯಲಲಿತಾರಿಗಿದ್ದಂಥ ಹಿಡಿತ ಅದು.

ಕರ್ನಾಟಕದ ಜಯಲಲಿತಾ ಶೋಭಾ





...ಕರ್ನಾಟಕ ಬಿಜೆಪಿಗೀಗ ವಯಸ್ಸು ನಲವತ್ತು. ಆ ...ರ್ಟಿಯಲ್ಲೀಗ ಅರವತ್ತು ವರ್ಷ ಮೀರಿದ ...ಮುಕರುಗಳೇ ಡಜನ್‌ಗೂ ಹೆಚ್ಚು ಜನ ಇದ್ದಾರೆ. ...ರೆ ಅವರ್‍ಯಾರಿಗೂ ಇರದ ತಾಕತ್ತು, ಧೈರ್ಯ ಹಾಗೂ ...ಾವವನ್ನು ಅದೇ ಪಾರ್ಟಿಯ ಕಿಳಸು ನಾಯಕಿಯೊಬ್ಬಳು ...ಸಿಕೊಳ್ಳು ತ್ತಾರೆಂದರೆ ಅದು ಹುಡುಗಾಟದ ಮಾತಲ್ಲ.

...ಆಕೆಯೇ ಶೋಭಾ ಕರಂದ್ಲಾಜೆ!

...ಶೋಭಾರಿಗಿನ್ನು ವಯಸ್ಸು ನಲವತ್ತೂ ದಾಟಿಲ್ಲ. ...ಜೆಪಿಗೆ ಸೇರಿ ಹತ್ತು ವರ್ಷ ಪೂರ್ತಿ ಆಗಿಲ್ಲ. Lime ...ht ಗೆ ಬಂದು ನಾಲ್ಕು ವರ್ಷವೂ ಆಗಿಲ್ಲ.

...ಆದರೆ,

...ಈಗಾಗಲೇ ಶೋಭಾ ಎಂಎಲ್‌ಸಿ ಆಗಿ ...ಾರು ವರ್ಷ ಮುಗಿಸಿದ್ದಾರೆ. ಅದರ ಅವಧಿ ...ನ್ನೂ ಮೂರು ವರ್ಷ ಇದೆಯಾದರೂ ಆಕೆಗೆ ...ಶವಂತಪುರದಿಂದ ಬಿಜೆಪಿ ಟಿಕೆಟ್ ಮಂಜೂ...ದೆ. ಅಕಸ್ಮಾತ್ ನಾಳೆ ಬಿಜೆಪಿ ಹಾಗೂ ಶೋಭಾ ...ಬಿಟ್ಟರೆ ಆಕೆ ಮಂತ್ರಿಯಾಗುತ್ತಾರೆ. ಇದರ ...ಯಾರಿಗೂ ಅನುಮಾನಗಳಿಲ್ಲ.

...ಅತ್ಯಂತ ಶಿಸ್ತಿನ ಪಕ್ಷ, ನೀತಿ ನಿಯಮಗಳಿರುವ ...ಎನಿಸಿಕೊಂಡಿರುವ ಇದೇ ಬಿಜೆಪಿ ಈಗ ...ೋಭಾ ಪ್ರಭಾವದಡಿ ಸಿಕ್ಕಿ ನರಳುತ್ತಿದೆ. ಇವರು ...ಗೆ ಬೇಕಾದ ಕಡೆ ಟಿಕೆಟ್ ಪಡೆಯುತ್ತಿರುವುದಷ್ಟೇ ...ಲ್ಲ ತನಗೆ ಬೇಕಾದವರಿಗೆ ಟಿಕೆಟ್ ಕೊಡಿಸುವ ...ಗೂ ಬೇಡವಾದವರಿಗೆ ಟಿಕೆಟ್ ತಪ್ಪಿಸುವಷ್ಟು ...ಶಾಲಿಯಾಗಿದ್ದಾರೆಂಬುದೇ ಅತ್ಯಂತ ಆಶ್ಚರ್ಯದ ...ಚಾರ.

...ಯಡಿಯೂರಪ್ಪನವರ ಅಖಂಡ ಬೆಂಬಲವೇ ...ಶಕ್ಕೆ ಕಾರಣವೆಂಬುದಂತೂ ಹೊಸ ವಿಚಾರ ...ನಲ್ಲ.

...ಈ ಯಡಿಯೂರಪ್ಪ ಬೇಕಿದ್ದರೆ ತಮ್ಮ ...ಖ್ಯಮಂತ್ರಿ ಹುದ್ದೆ ಆಸೆಯನ್ನು, ಆಸ್ತಿಪಾಸ್ತಿಯನ್ನು, ...ನೆಗೆ ತಮ್ಮ ಇಡೀ ಪರಿವಾರವನ್ನೇ ಬಿಟ್ಟು...ಡುತ್ತಾರಾಗಲೀ, ಬದಲಿಗೆ ಅದರ ಶಾಸಕಿಯನ್ನು ...ಾತ್ರ ಬಿಟ್ಟುಕೊಡುವುದಿಲ್ಲ ಎಂಬುದು ಈಗಿನ ...ಕೆಟ್ ಹಂಚಿಕೆ ಪ್ರಸಂಗವೇ ತೋರಿಸಿಕೊಟ್ಟಿದೆ.

...ಕರ್ನಾಟಕದ ಪ್ರಬಲ ರಾಜಕೀಯ ನಾಯಕ ...ಡಿಯೂರಪ್ಪರ ಮೇಲೆ ಶೋಭಾರ ಪ್ರಭಾವ ...ಗೂ ಹಿಡಿತ ಅಷ್ಟರ ಮಟ್ಟಿಗಿದೆ-ಥೇಟ್ ...ಮಿಳುನಾಡಿನ ಎಂಜಿಆರ್ ಮೇಲೆ ...ಯಲಲಿತಾರಿಗಿದ್ದಂಥ ಹಿಡಿತ ಅದು.

...ಈ ಜಯಲಲಿತಾ ತಾನೇ ಏನು?

...ಸಿನಿಮಾ ನಟಿಯಾಗಿದ್ದವಳು ಎಂಜಿಆರ್ ಆಪ್ತ ಬಳಗ ಸೇರಿಕೊಂಡು ...81 ರಲ್ಲಿ ಕೇವಲ ತನ್ನ ಮೂವತ್ಮೂರನೇ ವಯಸ್ಸಿನಲ್ಲೇ ಎಐಡಿಎಂಕೆಗೆ ...ನರಲ್ ಸೆಕ್ರೆಟರಿಯಾದಳು. ಅಲ್ಲಿಂದ ಮೂರೇ ವರ್ಷದಲ್ಲಿ ಅಂದರೆ 1984 ...ಲ್ಲಿ ರಾಜ್ಯಸಭಾ ಮೆಂಬರ್ ಆದಳು.

...ಎಲ್ಲಾ ಎಂಜಿಆರ್ ಕೃಪೆ ಬಿಡಿ!

...ಇಲ್ಲಿ ಶೋಭಾರೂ ಅಷ್ಟೆ. 1998 ...ಲ್ಲಿ ಬಿಜೆಪಿ ಸೇರಿ ಮೂರೇ ವರ್ಷದಲ್ಲಿ ...ರ್ಟಿ ಜನರಲ್ ಸೆಕ್ರೆಟರಿಯಾದರು. ಮತ್ತೆ ...ಿಂದಿನ ಮೂರೇ ವರ್ಷದೊಳಗೆ ...ಧಾನಪರಿಷತ್ ಮೆಂಬರ್ ಆಗಿ ...ಧಿಕಾರದ ಮೆಟ್ಟಿಲನ್ನು ಏರಿಯೇಬಿಟ್ಟರು.

...ಅತ್ತ ಜಯಲಲಿತಾ ಈಗ ಇಡೀ ...ಎಐಡಿಎಂಕೆಯ ಪ್ರಶ್ನಾತೀತ ನಾಯಕಿ...ಾಗಿದ್ದರೆ ಇತ್ತ ಶೋಭಾ ಕರ್ನಾಟಕ ...ಜೆಪಿಯ ಅತೀ ಪ್ರಭಾವಶಾಲಿ ...ಾಯಕಿಯಾಗಿ ಬೇರುಬಿಟ್ಟಿದ್ದಾರೆ.

...ಇದೆಲ್ಲಾ ಯಡ್ಡಿ ಕೃಪೆ ಬಿಡಿ!!

ಟೀಂಬು-ದಂಧೆ

...ಸುಳ್ಯದ ಕಣಿಯೂರಿನ ಶೋಭಾ ಆರ್‌ಎಸ್‌ಎಸ್, ಎಬಿವಿಪಿ, ರಾಷ್ಟ್ರ ...ಕಾ ಸಮಿತಿ, ಭಾರತೀಯ ಕಿಸಾನ್, ವಿಶ್ವಹಿಂದೂ ಪರಿಷತ್‌ಗಳಲ್ಲಿ ...ೊಡಿಕೊಂಡಿದ್ದು 1998 ರಲ್ಲಿ ಉಡುಪಿ ಜಿಲ್ಲಾ ಬಿಜೆಪಿ ಮಹಿಳಾ ಮೋರ್ಚಾ ...ಾನ ಕಾರ್ಯದರ್ಶಿಯಾಗಿದ್ದರು.

ಈ ಮಹತ್ವಾಕಾಂಕ್ಷಿ ಮಹಿಳೆ ಯಡಿಯೂರಪ್ಪನವರ ನಜರ್‌ಗೆ ಬಂದಿದ್ದೇ ಆವಾಗ. ಇನ್ನು ಹೇಳಬೇಕೆಂದರೆ ಯಡಿಯೂರಪ್ಪರ ಹೆಂಡತಿ ಮೈತ್ರಾದೇವಿ ಆಗಿನ್ನೂ ಬದುಕಿದ್ದರು. ಎಂಜಿಆರ್ ಹೆಂಡತಿ ಜಾನಕಿ ತರಹನೇ...

ನಂತರ ಬೆಂಗಳೂರಿಗೆ ಶಿಫ್ಟ್ ಆದ ಶೋಭಾ ಹರಿಶ್ಚಂದ್ರ ಘಾಟ್‌ನ ಆರ್‌ಎಸ್‌ಎಸ್ ಕಚೇರಿ ಸುಕೃತದಲ್ಲಿರುತ್ತಾ ಮಹಿಳಾ ಮೋರ್ಚಾದಲ್ಲಿ ಓಡಾಡತೊಡಗಿದರು. ನಿಜಕ್ಕೂ ಬಿಜೆಪಿಯಲ್ಲಿ ಆಗ ಶೋಭಾರಷ್ಟು ಡೈನಾಮಿಕ್ ಆದ ನಾಯಕಿಯರಿರಲಿಲ್ಲ. ಶಕುಂತಲಾ ಶೆಟ್ಟಿ ದೂರದ ಪುತ್ತೂರಿನಲ್ಲಿದ್ದರೆ, ಇಲ್ಲೇ ಇದ್ದ ವಿಮಲಾಗೌಡ ಪಾರ್ಟಿ ಕೆಲಸ ಮಾಡುವ ಬದಲು ಕೈಲಿ ಯಾವಾಗಲೂ ವಿಷದ ಬಾಟಲು ಇಟ್ಟುಕೊಂಡು 'ನನಗೆ ಆ ಪೋಸ್ಟು, ಈ ಅಧಿಕಾರ ಕೊಡದಿದ್ದರೆ ವಿಷ ಕುಡಿತೀನಿ' ಎಂದು ಎಲ್ಲರನ್ನು ಬೆದರಿಸಿಕೊಂಡು ಕಾಲ ಹಾಕುತ್ತಿದ್ದರು. ಸಹಜವಾಗೇ ಶೋಭಾ ಆ ಶೂನ್ಯ ತುಂಬಿ ರಾಜ್ಯ ಬಿಜೆಪಿ ಮಹಿಳಾ ಮೋರ್ಚಾದ ಪ್ರಧಾನ ಕಾರ್ಯದರ್ಶಿಯಾಗಿ ಮೂರು ಬಾರಿ ಕೆಲಸ ಮಾಡಿದರು. ಯಡಿಯೂರಪ್ಪನವರೊಂದಿಗೆ ಹಗಲೂ ರಾತ್ರಿ ಜೊತೆಗಿರುತ್ತಾ ರಾಜ್ಯ ಪೂರ್ತಿ ಟೂರ್ ಮಾಡುತ್ತಾ ಯಡ್ಡಿಯ ವಿಶ್ವಾಸ ಗಳಿಸಿದರು. ಅದರ ಪ್ರತಿಫಲವಾಗೇ 2004 ರಲ್ಲಿ ಶೋಭಾರಿಗೆ ಎಂಎಲ್‌ಸಿಗಿರಿ ಸಿಕ್ಕಿತು.

2005 ರಲ್ಲಿ ಜನತಾ ದಳದೊಂದಿಗೆ ಮೈತ್ರಿ ಸರ್ಕಾರ ಕಟ್ಟಲು ಯಡ್ಡಿ ಪ್ರಯತ್ನಿಸಿ ಬಿಜೆಪಿ ವಿಭಜನೆಯಾಗುವ ಹಂತಕ್ಕೆ ಹೋದಾಗಲೂ ಶೋಭಾ ಬೆಂಬಲ ಯಡ್ಡಿಗಿತ್ತು. ಇನ್ಶೂರೆನ್ಸ್ ಏಜೆಂಟ್ ಆಗಿದ್ದ ಶೋಭಾರಿಗೆ ಯಡ್ಡಿ ಪ್ರಭಾವದಿಂದಲೇ ಇವತ್ತು ನೂರಾರು ಪಾಲಿಸಿಗಳು ದೊರೆತು ತಿಂಗಳಿಗೆ 75 ಸಾವಿರ ರೂಪಾಯಿ ಬರೀ ಕಮಿಷನ್ ರೂಪದಲ್ಲಿ ಹರಿದುಬರುತ್ತಿದೆ. ಧರ್ಮಸಿಂಗ್ ಸಿಎಂ ಆಗಿದ್ದಾಗ "ನನಗೆ ಸೈಟು-ಮನೆ ಇಲ್ಲಾ ಎಂದು ಹೇಳಿ" ಎಚ್‌ಎಸ್‌ಆರ್ ಲೇಔಟಿನಲ್ಲಿ ಬರೀ ಎಂಟೂವರೆ ಲಕ್ಷಕ್ಕೆ 50x80 ಅಡಿ ಸೈಟು ಗಿಟ್ಟಿಸಿದರು. ಶೋಭಾ ಕೋ-ಜಾ ಸರ್ಕಾರವಿದ್ದಾಗ ಸಂಪುಟ ವಿಸ್ತರಣೆ ವೇಳೆ ಯಡ್ಡಿ ಬಿಜೆಪಿ ಕೋಟಾದಲ್ಲಿ ಶೋಭಾರನ್ನು ಮಂತ್ರಿಯಾಗಿಸಲೂ ಹೊರಟಿದ್ದರು. ಆದರೆ ಇದರಿಂದ ಪಕ್ಷವೇ ಹೋಳಾಗುವಂಥ ಸ್ಥಿತಿ ಬಂದ ಕಾರಣ ಕಣ್ಣೀರಿಡುತ್ತಾ ಯಡ್ಡಿ ಸುಮ್ಮನಾಗಿದ್ದರು.

ಇದೇ ಯಡ್ಡಿ ಉಪಮುಖ್ಯಮಂತ್ರಿಯಾಗಿದ್ದಾಗ ಕಡೂರು ತಾಲ್ಲೂಕಿನ ಹೊರಕೆಕಾನ್ ಅರಣ್ಯದ 300 ಎಕರೆ ಜಾಗದಲ್ಲಿ ಕಬ್ಬಿಣದ ಅದಿರಿನ ಗಣಿಗಾರಿಕೆ ನಡೆಸಲು ಶ್ರೀನಿವಾಸ ಮಿನರಲ್ಸ್ ಲಿಮಿಟೆಡ್ ಕಂಪನಿಗೆ ಯಡ್ಡಿಯೇ ಅನುಮತಿ ಕೊಡಿಸಿದ್ದರು. ಶೋಭಾರ ಅಣ್ಣ ಲಕ್ಷ್ಮಣ ಪಾಲುದಾರನಾಗಿರುವ ಕಂಪನಿ ಇದು. ಆಂಧ್ರದ ವೆಂಕಯ್ಯ ನಾಯ್ಡು ನೆಂಟ ಬಾಲಗುರುವಯ್ಯ ಇವರ ಇನ್ನೊಬ್ಬ ಪಾಲುದಾರನಾಗಿದ್ದಾನೆ.





ಬಿಜೆಪಿಯಲ್ಲಿ ದಶಕಗಳ ಕಾಲದಿಂದಲೂ ನಿಷ್ಠೆಯಿಂದ ಕೆಲಸ ಮಾಡಿಕೊಂಡು ಬಂದಿರುವ ಅನೇಕ ಜನರಿದ್ದಾರೆ. ಆದರೆ ನಾಯಕರ ಕೃಪೆ ಎಲ್ಲರಿಗೂ ಸಿಗುವುದಿಲ್ಲ. ಅದರಲ್ಲೂ ಶೋಭಾರಿಗೆ ಸಿಕ್ಕಷ್ಟು ಆದ್ಯತೆ ಬೇರೆ ಯಾರಿಗೂ ಸಿಕ್ಕಿಲ್ಲ.

ಇನ್ನೊಂದು ಸ್ವಾರಸ್ಯ ಏನೆಂದರೆ ಬಿಜೆಪಿಯಲ್ಲಿ ಇಷ್ಟೆಲ್ಲಾ ಪ್ರಭಾವವಿರುವ ಶೋಭಾಗೆ ಯಡ್ಡಿ ಬಿಟ್ಟರೆ ಇನ್ನೊಬ್ಬ ನಾಯಕರ, ಕಾರ್ಯಕರ್ತರ ಬೆಂಬಲ ಇಲ್ಲ. ಸಂಗೀತಾ ಎಂಬ ಅನುಮಾನಾಸ್ಪದ ಚಟುವಟಿಕೆಗಳ ಒಬ್ಬಾಕೆ, ಭಾಗ್ಯ ಅಮರೇಶ್, ಭಾರತಿ ಶೆಟ್ಟಿ ಇವರಿಷ್ಟೇ ಶೋಭಾ ಬೆಂಬಲಿಗರು.

ಇದಕ್ಕೆ ತಕ್ಕಂತೆ ಶೋಭಾ ಕೂಡಾ ಯಡ್ಡಿ ಸ್ಥಾನಮಾನಕ್ಕೆ ತಕ್ಕಂತೆ ಉಪಚರಿಸುತ್ತಾ ತಮ್ಮ ಮೇಲಿರುವ ಋಣ ತೀರಿಸುತ್ತಿದ್ದಾರೆ. ಇದು ಒಮ್ಮೆ ಇಬ್ಬರು ಸರ್ಕಾರಿ ಅಧಿಕಾರಿಗಳ ಅಮಾನತ್ತಿಗೂ ಕಾರಣವಾಗಿತ್ತು. 2007ರ ಜೂನ್‌ನಲ್ಲಿ ಶೋಭಾರ ಕಿರಿಯ ಸೋದರಿ ಮದುವೆ ಸುಳ್ಯದ ಒಕ್ಕಲಿಗರ ಭವನದಲ್ಲಿ ಅರೇಂಜಾಗಿತ್ತು. ಅವತ್ತು ಯಡ್ಡಿಯೇ ಮುಖ್ಯ ಅತಿಥಿ. ಮದುವೆ ಸಂಭ್ರಮ ಮುಗಿದ ಕೂಡಲೇ ವಿಐಪಿಗಳಿಗೆ ಅಲ್ಲೆ ಒಂದು ಗುಂಡುಪಾರ್ಟಿ ಅರೇಂಜಾಗಿತ್ತು. ಇವರಿಗೆಲ್ಲಾ

(12 ನೇ ಪುಟಕ್ಕೆ)

"ಶೋಭಾ ವಿರುದ್ಧ ನಿಲ್ತೀನಿ"



ತಮಗೆ ಬಿಜೆಪಿ ಟಿಕೆಟ್ ತಪ್ಪಿಸಿದ ಯಡಿಯೂರಪ್ಪ ಹಾಗೂ ಶೋಭಾ ಕರಂದ್ಲಾಜೆ ವಿರುದ್ಧ ಬಿಜೆಪಿಯ ಹಿರಿಯ ನಾಯಕ ಹನುಮಂತರಾಯಪ್ಪ ರೊಚ್ಚಿಗೆದ್ದಿದ್ದಾರೆ.

'ಲಂಕೇಶ್'ನೊಂದಿಗೆ ಅವರು ಹಂಚಿಕೊಂಡ ಕೆಲ ಪ್ರಶ್ನೋತ್ತರಗಳು ಇಲ್ಲಿವೆ.

ಲಂಕೇಶ್: ಯಶವಂತಪುರದಿಂದ ನಿಮಗೆ ಬಿಜೆಪಿ ಟಿಕೆಟ್ ಯಾಕೆ ಸಿಗಲಿಲ್ಲ?

ಹನುಮಂತರಾಯಪ್ಪ: Because of Shobha and Yediyurappa. ಯಡಿಯೂರಪ್ಪನವರ ಗುಂಪುಗಾರಿಕೆಯೇ ಇದಕ್ಕೆ ಕಾರಣ.

* ಯಶವಂತಪುರದಿಂದ ನೀವೇ ಬಿಜೆಪಿ ಅಭ್ಯರ್ಥಿ ಅಂತ ಇಡೀ ರಾಜ್ಯಕ್ಕೆ ಗೊತ್ತಿತ್ತು. ಹಾಗಿದ್ದರೂ ಶೋಭಾಗೆ ಟಿಕೆಟ್ ಸಿಕ್ಕಿದ್ದು ಹೇಗೆ. ನಿಮ್ಮ ಬಗ್ಗೆ ವರಿಷ್ಠರಿಗೆ ಗೊತ್ತಿರಲಿಲ್ವೆ?

ನಾನು ಅಶೋಕ್‌ನ ನಂಬಿ ಮೋಸ ಹೋದೆ. ಬೇರೆ ನಾಯಕರನ್ನು ನಾನು ಅಂಟಿಸಿಕೊಂಡಿರಲಿಲ್ಲ.

* ಹೋಗಲಿ ಈಗ ಶೋಭಾ ಕರಂದ್ಲಾಜೆ ಪರ ಕೆಲಸ ಮಾಡ್ತೀರಾ?

ನನಗೆ ಸುತರಾಂ ಇಷ್ಟವಿಲ್ಲ. ನಮ್ಮ ಕಾರ್ಯಕರ್ತರನ್ನು ಕೇಳ್ತೀನಿ.

* ಬಿಜೆಪಿ ಬಂಡಾಯ ಅಭ್ಯರ್ಥಿಯಾಗಿ ನಿಲ್ತೀದ್ದೀರಾ ಅಂತ ಕೇಳಿಬಂದಿದೆ!

ಹೌದು, ಇವತ್ತು ಸಾಯಂಕಾಲ ನನ್ನ ಹಿತೈಷಿಗಳ ಜೊತೆ ಮಾತಾಡಿ ತೀರ್ಮಾನ ಮಾಡ್ತೀನಿ. ನಾನು 1989 ರಲ್ಲೇ ಉತ್ತರಹಳ್ಳಿ ಕ್ಷೇತ್ರದಿಂದ ಎಸ್‌ಜೆಪಿಯಿಂದ ಸ್ಪರ್ಧಿಸಿ ಫೈಟ್ ಮಾಡಿದೋನು. ಆಗ ನನಗೂ ಜನತಾದಳದ ಎಂ. ಶ್ರೀನಿವಾಸ್‌ಗೂ ಪೈಪೋಟಿಯಾಗಿ ಕಾಂಗ್ರೆಸ್‌ನ ಎಸ್. ರಮೇಶ್ ಗೆದ್ದಿದ್ರು. ನನಗೆ ದೇವೇಗೌಡರಾದಿಯಾಗಿ ದೊಡ್ಡ ನಾಯಕರೆಲ್ಲಾ ಗೊತ್ತಿರೋರೆ.

* ಹಾಲಿ ಎಂಎಲ್‌ಸಿಯಾಗಿರೋ ಶೋಭಾರ ಅವಧಿ ಇನ್ನು 3 ವರ್ಷ ಇದೆ, ಆದರೂ ಅವರಿಗೆ ಎಂಎಲ್‌ಎ ಟಿಕೆಟ್ ಕೊಟ್ಟಿದ್ಯಾಕೆ?

ನೋಡಿ, ಅಷ್ಟೇ ಅಲ್ಲ. ಅಲ್ಲಿ ಪುತ್ತೂರಿನಲ್ಲೂ ಶಕುಂತಲಾ ಶೆಟ್ಟಿಯವರಿಗೆ ಇದೇ ಶೋಭಾ ಟಿಕೆಟ್ ತಪ್ಪಿಸಿದ್ದಾರೆ. ಪುತ್ತೂರಿನವರಾದ ಶೋಭಾ ಬೇಕಿದ್ರೆ ಅಲ್ಲಿಂದಾನೇ ಎಲೆಕ್ಷನ್‌ಗೆ ನಿಲ್ಲಬೇಕಿತ್ತು.

* ನೀವು ಶೋಭಾರಿಗೇ ಈ ಪ್ರಶ್ನೆ ಕೇಳಬೇಕಿತ್ತು?

ಖಂಡಿತಾ ಕೇಳಿದ್ದೀವಿ. ಮೊನ್ನೆ ನನ್ನ ಸ್ನೇಹಿತರು ಇದೇ ಪ್ರಶ್ನೇನಾ ಕೇಳಿದ್ದಕ್ಕೆ 'ನಂಗೇನೂ ಗೊತ್ತಿಲ್ಲಾ' ಅಂತ ಶೋಭಾ ಹಾರಿಕೆ ಉತ್ತರ ಕೊಟ್ಟು ಮಳ್ಳಿ ಥರ ಮಾತಾಡಿದ್ದಾರೆ.

* ಇದರರ್ಥ ಬಿಜೆಪೀಲಿ ನಿಷ್ಠಾವಂತ ನಾಯಕರಿಗೆ, ಕಾರ್ಯಕರ್ತರಿಗೆ ನ್ಯಾಯ ಸಿಗಲ್ಲ ಅಂತಾನಾ?

ಇನ್ನೇನು ಹೇಳಿ, ಯಶವಂತಪುರದಲ್ಲಿ ನನಗೆ ಅನ್ಯಾಯ ಮಾಡಿದ್ದಾರೆ. ನಟರಾಜ್‌ಗೆ ವಂಚನೆ ಆಗಿದೆ. ರಾಮಚಂದ್ರ ಅಂತ ಒಬ್ಬರು ಆಕಾಂಕ್ಷಿಗೂ ಹೀಗೆ ಮಾಡಿದ್ದಾರೆ. ಇವರೆಲ್ಲಾ ಪಕ್ಷಕ್ಕಾಗಿ ದುಡಿದಿದ್ದೋರು. ಅಭ್ಯರ್ಥಿಗಳಾಗಲು ಅರ್ಹತೆ ಇದ್ದ ಜನ.

* ಬಿಜೆಪಿಗೆ ಶೋಭಾ ಕರಂದ್ಲಾಜೆ ಕೊಡುಗೆ ಏನು?

ಅವರು ಪಕ್ಷದ ಪ್ರಧಾನ ಕಾರ್ಯದರ್ಶಿ ಆಗಿದ್ದಾರೆ. ಸಿಟ್ಟಿಂಗ್ ಎಂಎಲ್‌ಸಿ. ರಾಜ್ಯ ನಾಯಕರ ಜೊತೆ ರಾಜ್ಯ ಪೂರ್ತಿ ಟೂರ್ ಮಾಡ್ತಿರ್ತಾರೆ ಅಷ್ಟೆ.

* ಶೋಭಾರವರು ನಿಮ್ಮನ್ನು ಭೇಟಿಯಾಗಿ ಬೆಂಬಲ ಕೇಳಿದ್ರಾ?

ಅವೆಲ್ಲಾ ದೂರದ ಮಾತು. ಅವರಿಗೆ ನನ್ನ ಬಗ್ಗೆ ಗೊತ್ತಿಲ್ಲ. ಒಂದು ಕಾಲದಲ್ಲಿ ದೇವೇಗೌಡರೇ ಬಂದಿದ್ದಾಗ ಭೇಟಿ ಆಗಲ್ಲ ಅಂದಿದ್ದವನು ನಾನು. ಶೋಭಾಗೆ ಯಾರು ಯಶವಂತಪುರ ಟಿಕೆಟ್ ಕೊಡಿಸಿದ್ದಾರೋ ಅವರ್ನೇ ಬೆಂಬಲ ಕೇಳಲಿ ಬಿಡಿ.

* ಈ ತಕ್ಷಣದ ನಿಮ್ಮ ತೀರ್ಮಾನ ಏನು?

ನೋಡಿ ಹೊರಗಿನವರನ್ನ ಕರೆಸಿ ಟಿಕೆಟ್ ಕೊಟ್ರೆ ಪಕ್ಷಕ್ಕೇ ಹಾನಿ. ಯಶವಂತಪುರ ಕ್ಷೇತ್ರ ನಮ್ಮದು. ನಾನು ಇಲ್ಲಿಯೇ ರಾಜಕೀಯ ಮಾಡಿದವನು. ನನ್ನನ್ನು ನಂಬಿಸಿ ಅವಕಾಶ ಹಾಳು ಮಾಡಿದ್ದಾರೆ. ಇದೊಂತರಾ ರಾಜಕೀಯ ಕಗ್ಗೊಲೆ.


* [illegible] ಬಿಜೆಪಿ ಟಿಕೆಟ್ ಅಂತ ಕೊಡೋ [illegible]

ನಾನು ಎಂಥ ಛಲದ ಮನುಷ್ಯ ಅನ್ನೋದನ್ನ ವಿಚಾರಿಸಿ ನೋಡಿ. ಬಂಡಾಯ ಅಭ್ಯರ್ಥಿಯಾಗಿ ಶೋಭಾ ವಿರುದ್ಧ ನಿಂತು ಛಾಲೆಂಜ್ ಮಾಡ್ತೀನಿ... ನೋಡ್ತಿರಿ.

(10 ನೇ ಪುಟದಿಂದ)

ಧಮಕಿ ಹಾಕಿದ್ದಾರೆ. ಸಾಲದ್ದಕ್ಕೆ ನಿನ್ನೆಮೊನ್ನೆಯಷ್ಟೇ ತನ್ನ ಐಪಿಎಸ್ ಹುದ್ದೆಗೆ ರಾಜೀನಾಮೆ ಕೊಟ್ಟು ಬಿಜೆಪಿಯಲ್ಲೊಂದು ಕಾಲು ಕಾಂಗ್ರೆಸ್ಸಿನಲ್ಲೊಂದು ಕಾಲಿಟ್ಟು ಟಿಕೆಟ್ಟಿಗಾಗಿ ಜಪಿಸುತ್ತಿರುವ ಕೆ.ಸಿ. ರಾಮಮೂರ್ತಿಗೂ ಇದೇ ಸರ್ವಜ್ಞನಗರದ ಮೇಲೆ ಕಣ್ಣಿದೆ. ಅದೆಷ್ಟೇ ಕೋಟಿ ಕೊಟ್ಟಾದರೂ ಕಾಂಗ್ರೆಸ್ ಟಿಕೆಟ್ ತರುತ್ತಾರಂತೆ. ಇಂಥ ರಾಮಮೂರ್ತಿಗೆ ಸದ್ಯ ಖರ್ಗೆ ಅಳಿಯ ರಾಧಾಕೃಷ್ಣನೇ ಗಾಡ್‌ಫಾದರ್ ಅಂದರೆ ಕಾಂಗ್ರೆಸ್ ಕಾರ್ಯಕರ್ತರು ಏನು ಮಾಡಬೇಕು?

ಇದು ಒಂದು ಕ್ಷೇತ್ರದ ಕಾಂಗ್ರೆಸ್ ನಿಷ್ಠರ ಪಾಡಾಗಿದ್ದರೆ ಆ ಮಾತು ಬೇರೆ. ಪಕ್ಕದ ಸಿ.ವಿ. ರಾಮನ್‌ನಗರದಲ್ಲಿ ಆ ಕಾಲದಿಂದಲೂ ಕಾಂಗ್ರೆಸ್ ಸಂಘಟಿಸಿಕೊಂಡೇ ಬಂದ ನಿಷ್ಠಾವಂತ ಕಾರ್ಯಕರ್ತರ ಹಿಂಡೇ ಇದೆ. ಈ ಪೈಕಿ ಎಂ. ಶ್ರೀನಿವಾಸ್ ಅಲ್ಲಿನ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಾಜಿ ಮಂತ್ರಿ ವರ್ತೂರು ಕೃಷ್ಣಪ್ಪನವರ ಪಕ್ಕಾ ಬೆಂಬಲಿಗ. ಶ್ರೀನಿವಾಸ್ ಹೊರತಾಗಿ ಹೊರಗಿನ ಯಾರೇ ಅಭ್ಯರ್ಥಿಯನ್ನೂ ಅಲ್ಲಿನ ಕಾರ್ಯಕರ್ತರು ಸಹಿಸುತ್ತಿಲ್ಲ. ಆದರೆ ಎಸ್.ಎಂ. ಕೃಷ್ಣರ ತಲೆ ತಿಕ್ಕಿದ ವಿ. ಶಂಕರ್ ಎಂಬ ಮಾಜಿ ಎನ್‌ಜಿಎಫ್ ಅಧ್ಯಕ್ಷನಿಗೆ ಶತಗತಾಯ ಸಿ.ವಿ. ರಾಮನ್ ನಗರದ ಟಿಕೆಟ್ ಕಸಿಯುವ ದುರಾಶೆ. ಜೊತೆಗೆ ಮಾಜಿ ಮೇಯರ್ ಕೆ.ಸಿ. ವಿಜಯ್‌ಕುಮಾರ್, ಮತ್ತೊಬ್ಬ ಮೇಯರ್ ಗೋಲ್ಡ್ ನಾರಾಯಣಸ್ವಾಮಿ ಕೂಡ ಇಲ್ಲಿಂದಲೇ ಟಿಕೆಟ್ ಕೇಳುತ್ತಿದ್ದಾರೆ.



ಕಾಸಿದ್ದೋರಿಗೆ ಟಿಕೆಟ್ ನಿಷ್ಠಾವಂತರಿಗೆ ಬಕೆಟ್

ಅಧಿಕಾರವಿದ್ದಾಗ ಎನ್‌ಜಿಎಫ್ ಮುಳುಗಿಸಿದ ವಿ. ಶಂಕರ್ ನಿಂತನೆಂದರೆ ಈ ಭಾಗದ ಎನ್‌ಜಿಎಫ್ ಕಾರ್ಮಿಕರೇ ರೊಚ್ಚಿಗೇಳುತ್ತಾರೆ. ಅಷ್ಟಕ್ಕೂ ವಿ. ಶಂಕರ್ ಹಿಂದೆ ಶಾಂತಿನಗರಕ್ಕೆ ಟಿಕೆಟ್ ಆಕಾಂಕ್ಷಿಯಾಗಿದ್ದ. ಕಳೆದ ಚುನಾವಣೆಯಲ್ಲಿ ಬಿಜೆಪಿಯ ರಘು ಜೊತೆ ಕೈಜೋಡಿಸಿ ತನ್ನದೇ ಕಾಂಗ್ರೆಸ್ ಪಕ್ಷದ ಮುನಿಸ್ವಾಮಿಯನ್ನು ಸೋಲಿಸಿದ್ದ. ಇಂಥವನನ್ನು ಸಿ.ವಿ. ರಾಮನನಗರಕ್ಕೆ ಅಭ್ಯರ್ಥಿಯಾಗಿ ಹೇರಿದ್ದೇ ಆದರೆ ಬಿಜೆಪಿ ಅಭ್ಯರ್ಥಿ ರಘು ಪ್ರಚಾರಕ್ಕೂ ಹೋಗದೇ ಗೆಲ್ಲುತ್ತಾನೆ.

ಆಯಾ ಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಕಷ್ಟಸುಖಕ್ಕೆ ಕವಡೆ ಕಿಮ್ಮತ್ತಿಲ್ಲದಂತಾಗಿರುವುದೇ ಸದ್ಯದ ಬೇಗುದಿಯ ಮೂಲ ಕಾರಣ. ಅದರಲ್ಲೂ ಕುಪೇಂದ್ರ ರೆಡ್ಡಿಯಂಥ ಖತರ್‌ನಾಕ್ ಭೂಗಳ್ಳನಿಗೆ ಬೊಮ್ಮನಹಳ್ಳಿಯ ಟಿಕೆಟ್ ಕೊಟ್ಟ ಮೇಲಂತೂ ಕಾಂಗ್ರೆಸ್ ಕಾರ್ಯಕರ್ತರ ಜಂಘಾಬಲವೇ ಉಡುಗಿ ಹೋಗಿದೆ. ಕೆಲವೆಡೆ ಯಾವುದೋ ಕ್ಷೇತ್ರದಿಂದ ವಲಸೆ ಬಂದವನಿಗೆ ಇನ್ನೂ ಕೆಲವೆಡೆ ನೆಲಗಳ್ಳನಿಗೆ, ಮತ್ತೂ ಹಲವೆಡೆ ದುಡ್ಡಿಗೆ ಕಾಂಗ್ರೆಸ್ ಟಿಕೆಟ್ ಬಿಕರಿಯಾಗಿದೆ. ನಿನ್ನೆಮೊನ್ನೆಯ ತನಕ ಜೆಡಿಎಸ್‌ನಲ್ಲಿದ್ದ ಕುಪೇಂದ್ರ ರೆಡ್ಡಿ ರಾತ್ರೋರಾತ್ರಿ ಹೇಗೆ ಕಾಂಗ್ರೆಸ್ ಟಿಕೆಟ್ ಗಿಟ್ಟಿಸುತ್ತಾನೆ?


ಈತನ ಜೋಡಿದಾರನೇ ಬೆಂಗಳೂರು ಮಹಾನಗರ ಪಾಲಿಕೆಯ ಖದೀಮ ಕಂಟ್ರಾಕ್ಟರ್ ಜಯರಾಮ ರೆಡ್ಡಿ. ಬಾಂಡ್ ಕಾಮಗಾರಿಗಳಲ್ಲಿ ರಸ್ತೆ ಡಾಂಬರೀಕರಣದಲ್ಲಿ ಹಗಲು ದರೋಡೆ ಮಾಡಿಯೇ ಕುಬೇರನಾದ ಜಯರಾಮ ರೆಡ್ಡಿ ಕೆಐಎಡಿಬಿಯ ಮೂಲಕ ರೈತರ ಭೂಮಿ ದೋಚಿದ್ದರಲ್ಲೂ ಕುಪೇಂದ್ರ ರೆಡ್ಡಿಯ ಪಾಲುದಾರ. ಈಗ ಜಯರಾಮ ರೆಡ್ಡಿಗೆ ಶಾಂತಿನಗರದ ಕಾಂಗ್ರೆಸ್ ಟಿಕೆಟ್ ಖರೀದಿಸುವ ದುರಾಶೆ. ರಾಜಾಜಿನಗರಕ್ಕೆ ವಾಸಂತಿ ಶಿವಣ್ಣ ಎಂಬ ಡಮ್ಮಿ ಅಭ್ಯರ್ಥಿಯನ್ನು ಎಸ್ಸೆಂ ಕೃಷ್ಣ ಹೇರುತ್ತಿದ್ದಂತೆ ಬಿಜೆಪಿಯ ಸುರೇಶ್‌ಕುಮಾರ್ ಗೆಲುವು ಖಚಿತಗೊಂಡಿದೆ.

ಶಾಂತಿನಗರದ ಮೇಲೆ ಕಣ್ಣಿಟ್ಟ ಮತ್ತೊಬ್ಬ ಮಾಜಿ ಐಎಎಸ್ ಅಲೆಕ್ಸಾಂಡರ್ ಮತ್ತು ಮಾಜಿ ಎಮ್ಮೆಲ್ಲೇ ಕೆ.ಜೆ. ಜಾರ್ಜ್ ಕಾಂಗ್ರೆಸ್ ಕಷ್ಟಕಾಲದಲ್ಲಿ ಮೋಜು ಮಾಡಿಕೊಂಡೇ ಕಾಲ ಕಳೆದರು. ಈಗ ಅಧಿಕಾರ ಸಮೀಪಿಸುತ್ತಿದ್ದಂತೆ ಟಿಕೆಟ್ ಕಾಳಜಿ ಭುಗಿಲೆದ್ದಿದೆ. ಅಧಿಕಾರವಿದ್ದಷ್ಟೂ ದಿನ ಲೂಟಿಯಲ್ಲಿ ಬಿಜಿಯಾಗಿದ್ದ, ಅಧಿಕಾರ ಹೋಗುತ್ತಿದ್ದಂತೆ ಭೂಗತರಾಗುವ ಇಂಥ ಸಮಯಸಾಧಕರೇ ಕಾಂಗ್ರೆಸ್‌ನಲ್ಲಿ ಮೇಲುಗೈ ಸಾಧಿಸಿದರೆಂದರೆ, ನಾಳೆ ದಿನ ಕಾಂಗ್ರೆಸ್ಸಿಗೆ ಕಾರ್ಯಕರ್ತರೇ ದಿಕ್ಕಿಲ್ಲದಂತಾಗುವ ದಿನ ದೂರವಿಲ್ಲ.

ಇಂಥ ಪಕ್ಷಗಳ ಕಾರ್ಯಕರ್ತರಿಗೆ ಭವಿಷ್ಯವುಂಟೆ? ಪಕ್ಷಗಳೇ ತಮ್ಮನ್ನು ತಾವು ಬಿಕರಿಗಿಟ್ಟಿರುವಾಗ ಸಹಜವಾಗೇ ರೊಕ್ಕಸ್ಥರು, ನೆಲಗಳ್ಳರು, ಗಣಿಕಳ್ಳರೇ ಗೆದ್ದು ವಿಧಾನಸಭೆ ಪ್ರವೇಶಿಸುತ್ತಾರೆ. ಅದು ಅವರ ಬ್ಲಾಕ್ ಮನಿ ಮತ್ತು ಹಗಲು ದರೋಡೆಯ ರಕ್ಷಣೆಗಷ್ಟೇ ಬಳಕೆಯಾಗುತ್ತದೆಯೇ ಹೊರತು ಜನಸಾಮಾನ್ಯರಿಗಲ್ಲ.

ಇದನ್ನು ಪ್ರಜಾಪ್ರಭುತ್ವ ಎನ್ನಬೇಕೆ? ■

ಸೌಂದರ್ಯ ಮಂಜಪ್ಪನೂ ನೆಲಮಂಗಲದ ಕೃಷ್ಣಪ್ಪನೂ




ಒಂದಷ್ಟು ಮಂದಿ ರೆಡ್ಡಿಗಳು ಇನ್ನೊಂದಿಷ್ಟು ಒಕ್ಕಲಿಗರಿಗೆ ಇಡೀ ಕಾಂಗ್ರೆಸ್ ಪಕ್ಷವನ್ನು ಸೀಮಿತಗೊಳಿಸುವ ಹುನ್ನಾರದ ವಿರುದ್ಧ ಹಿಂದುಳಿದ ಜಾತಿಯ ಕಾಂಗ್ರೆಸ್ ಕಾರ್ಯಕರ್ತರು ಬೀದಿಗಿಳಿದಿದ್ದಾರೆ. ಈ ಪೈಕಿ ದಾಸರಹಳ್ಳಿ ಕ್ಷೇತ್ರದಲ್ಲಿ ಪ್ರತಿನಿತ್ಯ ಕಾಂಗ್ರೆಸ್ ವರಿಷ್ಠರ ವಿರುದ್ಧ ಪ್ರತಿಭಟನೆಗಳಾಗುತ್ತಿವೆ.

ಅಸಲಿಗೆ ದಾಸರಹಳ್ಳಿ ಕಾಂಗ್ರೆಸ್ ಕಾರ್ಯಕರ್ತರನ್ನು ಬಹುದಿನದಿಂದಲೂ ಕಾಪಾಡಿಕೊಂಡು ಬಂದದ್ದು ಸೌಂದರ್ಯ ಮಂಜಪ್ಪ ಮತ್ತು ದಾಸರಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಲಗ್ಗೆರೆ ಶಿವಣ್ಣ. ಖರ್ಗೆ ಅಳಿಯ ರಾಧಾಕೃಷ್ಣನಿಗೆ ದುಡ್ಡು ತಿನ್ನಿಸಿ ಕಾಂಗ್ರೆಸ್ ಟಿಕೆಟ್ ಗಿಟ್ಟಿಸಲು ಕೆ.ಸಿ. ಅಶೋಕ್ ಎಂಬ ಮಾಜಿ ಸಿಎಂಸಿ ಅಧ್ಯಕ್ಷ ಲಾಬಿಗಿಳಿದಾಗಲೇ ಕಾಂಗ್ರೆಸ್ ಕಾರ್ಯಕರ್ತರು ರೊಚ್ಚಿಗೆದ್ದರು. ಏಕೆಂದರೆ ಈ ಅಶೋಕ್ ಹೇಳಿಕೇಳಿ ಬಿಜೆಪಿ ನಾಯಕ ಅಶೋಕ್‌ರ ಪರಮಾಪ್ತನಾಗಿದ್ದ. ಈಗ ಇದೇ ದಾಸರಹಳ್ಳಿಗೆ ಪಕ್ಕದ ನೆಲಮಂಗಲದ ಬಿನ್ನಮಂಗಲ ಕೃಷ್ಣಪ್ಪ ವಕ್ಕರಿಸಿದ್ದಾರೆ. ಜಾತಿಯಲ್ಲಿ ಒಕ್ಕಲಿಗ ಮತ್ತು ದೀಕೇಶಿ ಬಂಟ ಎಂಬುದರ ಹೊರತಾಗಿ ದಾಸರಹಳ್ಳಿಗೂ ಬಿಎಂಎಲ್ ಕೃಷ್ಣಪ್ಪರಿಗೂ ಏನೇನೂ ಸಂಬಂಧ ವಿಲ್ಲ.

ಸೌಂದರ್ಯ ಮಂಜಪ್ಪರ ಹೊರತಾಗಿ ಬೇರೆ ಯಾರೇ ವಲಸೆ ಕಾಂಗ್ರೆಸ್ಸಿಗನಿಗೆ ಟಿಕೆಟ್ ಕೊಟ್ಟರೂ ಸ್ಥಳೀಯ ಕಾಂಗ್ರೆಸ್ಸಿಗರು ಬಂಡೇಳುತ್ತಾರೆ. ತೀರಾ ಹಿಂದುಳಿದ ಕುಂಬಾರರ ಜಾತಿಯವರೆಂಬ ಕಾರಣಕ್ಕೆ ಬಿ.ಕೆ. ಹರಿಪ್ರಸಾದ್ ಮತ್ತು ಖರ್ಗೆ ಮಂಜಪ್ಪರ ಬೆನ್ನಿಗಿದ್ದಾರೆ. ಆದರೆ ದುಡ್ಡಿನ ಮುಂದೆ ಪಕ್ಷ ನಿಷ್ಠೆಗೆ ಬೆಲೆಯುಂಟಾ? ■

'ಗೌಡ ಸಮುದಾಯವನ್ನು ಬಿಜೆಪಿಗೆ ಮಾರಿಕೊಂಡಿಲ್ಲ!'



ರಾಜ್ಯದ ಗೌಡ ಸಮುದಾಯಕ್ಕೆ ಹೀಗೆ ಗಂಟಲು ಹರಿದುಕೊಳ್ಳುವ ಹಾಗೆ ಕೂಗಿಕೊಳ್ಳುವ ಪರಿಸ್ಥಿತಿಯನ್ನು 'ಉದಯವಾಣಿ' ಎಂಬ ಕೇಸರಿ ಪತ್ರಿಕೆ ತಂದಿಟ್ಟಿದೆ.

ಪುತ್ತೂರು ವಿಧಾನಸಭಾ ಕ್ಷೇತ್ರಕ್ಕೆ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಶಕುಂತಲಾ ಶೆಟ್ಟಿಗೆ ಟಿಕೆಟ್ ನಿರಾಕರಿಸಿ ಅದನ್ನು ಶ್ರೀಮತಿ ಮಲ್ಲಿಕಾ ಪ್ರಸಾದ್ ಅವರ ಮಡಿಲಿಗೆ ಹಾಕಿದ್ದರಲ್ಲಿ ಯಾರ್‍ಯಾರ ಕೈವಾಡ ಎಷ್ಟೆಷ್ಟಿದೆಯೋ ಆ ಡಿ.ವಿ.ಸದಾನಂದಗೌಡನೇ ಬಲ್ಲ. ಆದರೆ 'ಉದಯವಾಣಿ' ಪತ್ರಿಕೆ ಮಾತ್ರ ಮಲ್ಲಿಕಾ ಪರ ವಕಾಲತ್ತು ವಹಿಸಿ ಶಕುಂತಲಾ ಶೆಟ್ಟಿಗೆ ಟಿಕೆಟ್ ನಿರಾಕರಣೆಯಲ್ಲಿ ತನ್ನ ಪಾತ್ರವನ್ನು ನಿರ್ವಹಿಸಿದ್ದಂತೂ ಸತ್ಯ.

ಒಳ್ಳೆಯದಿರಲಿ, ಕೆಟ್ಟದ್ದಿರಲಿ, 'ಉದಯವಾಣಿ' ಪತ್ರಿಕೆ ಮಾತ್ರ ಕುರಿಯಂತೆ ಉದ್ದಕ್ಕೂ ಬಿಜೆಪಿಯನ್ನು ಬೆಂಬಲಿಸುತ್ತಾ ಬಂದಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಬಾರಿಯೂ ಕೂಡ ಅದು ತನ್ನ ಪರಂಪರೆಯನ್ನು ಬಿಟ್ಟಿಲ್ಲ. ಅಷ್ಟೇ ಏಕೆ, ಏಪ್ರಿಲ್ ೪ರ 'ಓಟಿನ ಬೇಟೆ' ಸಂಚಿಕೆಯಲ್ಲಿ ಅದು ಒಂದು ಹೆಜ್ಜೆ ಮುಂದೆಹೋಗಿ "ಪುತ್ತೂರು ಕ್ಷೇತ್ರದಲ್ಲಿ ಒಂದು ಲಕ್ಷ ಅರವತ್ತು ಸಾವಿರ ಮತದಾರರಿದ್ದಾರೆ, ಈ ಪೈಕಿ ಮೂವತ್ತು ಸಾವಿರ ಗೌಡ ಮತಗಳೇ ನಿರ್ಣಾಯಕವಾಗಿದ್ದು ಅವು ಉದ್ದಕ್ಕೂ ಬಿಜೆಪಿಯನ್ನೇ ಗೆಲ್ಲಿಸುತ್ತಾ ಬಂದಿವೆ. ಈ ಬಾರಿ ಮಲ್ಲಿಕಾ ಪ್ರಸಾದ್ ಭಂಡಾರಿಯವರು ಸ್ಪರ್ಧಿಸಿದರೆ ಇವೇ ಗೌಡ ಮತಗಳು ಅವರನ್ನು ನಿಶ್ಚಿತವಾಗಿ ಗೆಲ್ಲಿಸುವುದರಲ್ಲಿ ಯಾವುದೇ ಅನುಮಾನವಿಲ್ಲ" ಎಂದು ತನ್ನ ಸಂಶೋಧನಾ ವರದಿಯನ್ನು ಪ್ರಕಟಿಸುವ ಮೂಲಕ ಗೌಡ ಸಮುದಾಯ ಯಾವಾಗಲೂ ಬಿಜೆಪಿಗೇನೇ ಓಟು ಹಾಕುತ್ತಿದೆ ಎಂದು ಹೇಳಿ ಆ ಸಮುದಾಯದ ಅಧಿಕೃತ ವಕ್ತಾರನಂತೆ ವರ್ತಿಸಿದೆ. ಆ ಮೂಲಕ ವಿವೇಚನಾಪೂರ್ವಕವಾಗಿ ತಮಗಿಷ್ಟ ಬಂದ ಅಭ್ಯರ್ಥಿಗೆ ಮತಹಾಕುವ ಪ್ರಜ್ಞಾವಂತಿಕೆ ಗೌಡ ಸಮುದಾಯದ ಜನಕ್ಕಿಲ್ಲ ಎಂಬಂತಹ ಚಿತ್ರಣವನ್ನು ಕೊಟ್ಟು ಆ ಸಮುದಾಯಕ್ಕೆ ಅವಮಾನ ಮಾಡಿದೆ.

ಕೊನೆಗೆ 'ಉದಯವಾಣಿ'ಗೆ ಬುದ್ಧಿ ಹೇಳಲು ಗೌಡ ಸಮಾಜದ ಹಿರಿಯರು 'ಗೌಡ ಸಮಾಜವನ್ನು ಬಿಜೆಪಿಗೆ ಮಾರಿಕೊಂಡಿಲ್ಲ, ಎಲ್ಲ ಪಕ್ಷಗಳಿಗೆ ಸೇರಿದ ಜನರೂ, ಎಲ್ಲ ಪಕ್ಷಗಳಿಗೂ ಓಟು ಹಾಕುವ ಜನರೂ ಗೌಡ ಸಮಾಜದಲ್ಲಿದ್ದಾರೆ' ಎಂದು ಜಾಹೀರಾತಿನ ಮೂಲಕ ಸ್ಪಷ್ಟೀಕರಣ ನೀಡಿ 'ಉದಯವಾಣಿ' ಪತ್ರಿಕೆ ಉಗಿಯಬೇಕಾಯಿತು. ■



ಎಂ.ಜಿ.ಆರ್. ಮತ್ತು ಜಾನಕಿ ದಂಪತಿಗಳು



ಮುದ್ದೂರಪ್ಪ ಮತ್ತು ಮೈತ್ರಾದೇವಿ

(11 ನೇ ಪುಟದಿಂದ)

ಲೋಕಲ್ ಡ್ರಿಂಕ್ಸ್ ಕೊಡಿಸಲಾಗುತ್ತದೆಯೇ? ಅದಕ್ಕಾಗಿ ಅಬ್ಕಾರಿ ಇನ್ಸ್‌ಪೆಕ್ಟರುಗಳಾದ ಯಾಕೂಬ್ ಖಾನ್ ಮತ್ತು ಕೃಷ್ಣ ನಾಯಕ್ ಶಾಸಕಿಯ ಆದೇಶದ ಮೇರೆಗೆ ಊರೂರು ಸುತ್ತಿ ಮದ್ಯದಂಗಡಿಗಳ ಮೇಲೆ ದಾಳಿ ನಡೆಸಿ ಅತ್ಯುತ್ತಮ ವಿದೇಶಿ ಬ್ರಾಂಡಿನ ಲಿಕ್ಕರ್ ತಂದು ಪೂರೈಸಿದರು. ಆದರೆ ಆಮೇಲೆ ಈ ಬಗ್ಗೆ ಗಲಾಟೆಗಳಾಗಿ ಈ ಇಬ್ಬರೂ ಆಫೀಸರ್‌ಗಳು ಸಸ್ಪೆಂಡಾಗಿದ್ದರು. ಕಳೆದ ವರ್ಷದ ಉಲ್ಲಾಳ ಉಪನಗರ ಚುನಾವಣೆಯಾದಾಗಲೂ ಯಡ್ಡಿ ಬಿಜೆಪಿ ಪ್ರಚಾರದ ಸಂಪೂರ್ಣ ಉಸ್ತುವಾರಿಯನ್ನು ಶೋಭಾರಿಗೆ ವಹಿಸಿಕೊಟ್ಟಿದ್ದರು. ಹಾಗೆ ನೋಡಿದರೆ ಕರಾವಳಿಯಲ್ಲಿ ಶೋಭಾರಿಗಿಂತಾ ಬಲಿಷ್ಠರೂ, ಪಳಗಿದ ರಾಜಕಾರಣಿಗಳೂ ಆಗಿರುವ ನಾಗರಾಜ ಶೆಟ್ಟಿ, ಸದಾನಂದ ಗೌಡರಂತಹವರಿದ್ದರೂ ಅವರನ್ನೆಲ್ಲಾ ಮೂಲೆಗೆ ತಳ್ಳಿ ಶೋಭಾ ಮಿಂಚಿದ್ದರು. ಆದರೆ ಆ ಚುನಾವಣೆಯಲ್ಲಿ ಬಿಜೆಪಿ ಮಣ್ಣುಮುಕ್ಕಿತ್ತು ಎಂಬುದು ಬೇರೆ ವಿಚಾರ, ಬಿಡಿ.

ಈಗಿನ ಟಿಕೆಟ್ ಹಂಚಿಕೆಯಲ್ಲೂ ಶೋಭಾ ಪ್ರಭಾವ ಎಷ್ಟಿದೆಯೆಂದರೆ ಬೊಮ್ಮನಹಳ್ಳಿ ಕ್ಯಾಂಡಿಡೇಟ್ ಪ್ರಸಾದ್ ರೆಡ್ಡಿ, ಶಾಂತಿನಗರದ ಮಲ್ಲಿಕಾರ್ಜುನ ಮೂಟೆಗಳಲ್ಲಿ ಹಣ ತುಂಬಿಕೊಂಡು ಯಡ್ಡಿ ಮನೆಯಲ್ಲಿ ಇಳಿಸಿ ಟಿಕೆಟ್ ಗಿಟ್ಟಿಸಿದ್ದಾರೆ. ಶೋಭಾರ ಕೈವಾಡವೂ ಇದರಲ್ಲಿದೆ. ಅಷ್ಟೇ ಅಲ್ಲದೆ ಬಿಜೆಪಿಯ ಹಿರಿಯ ನಾಯಕ ಹನುಮಂತರಾಯಪ್ಪನವರನ್ನೇ ಬಲಿ ಕೊಟ್ಟು ಶೋಭಾರಿಗಾಗಿ ಯಶವಂತಪುರ ಕ್ಷೇತ್ರ ತೆರವುಗೊಳಿಸಲಾಗಿದೆ. ಅನಂತ್ ಕುಮಾರ್ ಬಣ ಮೊದಮೊದಲು ಇದಕ್ಕೆ ಬಿಲ್‌ಕುಲ್ ಒಪ್ಪಿರಲಿಲ್ಲ. ಇದು ಮಾತಿನ ಚಕಮಕಿಗೂ ಕಾರಣವಾಗಿ ಶೋಭಾಗೆ ಟಿಕೆಟ್ ಕೊಡಕೂಡದು ಎಂದು ಪಟ್ಟುಹಿಡಿದಿದ್ದ ಭಿನ್ನಮತೀಯರ ವಿರುದ್ಧ ಸಿಟ್ಟಿಗೆದ್ದ ಯಡ್ಡಿ ಅಭ್ಯರ್ಥಿಗಳ ಪಟ್ಟಿಯನ್ನೇ ಹರಿದೆಸೆದಿದ್ದರು.

ಶೋಭಾರ ಬಗ್ಗೆ ಯಡ್ಡಿಗೆ ಎಷ್ಟು ಕಾಳಜಿಯಿದೆ ಎಂದರೆ ನಾಳೆ ಈಕೆ ಗೆದ್ದು ಬಂದರೆ ಮಹಿಳಾ ಕೋಟಾದಲ್ಲಿ ಮಂತ್ರಿ ಮಾಡುವ ಸಲುವಾಗಿ ಬಿಜೆಪಿಯಿಂದ ಇನ್ನೊಬ್ಬ ಮಹಿಳೆಗೂ ಟಿಕೆಟ್ ಸಿಗದಂತೆ ಮಾಡಿದ್ದಾರೆ.

ಪುತ್ತೂರಿನ ಹಿರಿಯ ನಾಯಕಿ ಶಕುಂತಲಾ ಶೆಟ್ಟಿಗೆ ಟಿಕೆಟ್ ತಪ್ಪುತ್ತಿರುವುದು ಶೋಭಾರ ಈ ಮಂತ್ರಿಗಿರಿ ಆಸೆಯಿಂದಲೇನೆ.

ಇದನ್ನು ದೂರಾಲೋಚನೆ ಅನ್ನುತ್ತೀರಾ ಅಥವಾ ದುರಾಲೋಚನೆ ಅಂದುಕೊಳ್ಳುತ್ತೀರೋ ನಿಮಗೆ ಬಿಟ್ಟದ್ದು.

ಶೋಭಾರ ಎಂಎಲ್‌ಸಿ ಅವಧಿ 2010ರ ಜೂನ್ ತನಕವೂ ಇದೆ. ಅಂದರೆ ಇನ್ನು ಎರಡೂಕಾಲ ವರ್ಷಗಳ ಅವಧಿ ಅದು.

ಅಂದರೆ ಶೋಭಾರ ಶಾಸಕತ್ವದ ಅವಧಿ ಇನ್ನೂ ಇದ್ದಾಗಲೂ ಯಡ್ಡಿ ಯಾಕೆ ಅನಗತ್ಯವಾಗಿ ಮತ್ತೆ ಶೋಭಾರಿಗೇ ಯಶವಂತಪುರ ಟಿಕೆಟ್ ಕೊಡಿಸಿದ್ದಾರೆ?

ಇಡೀ ರಾಜ್ಯದ 224 ಅಸೆಂಬ್ಲಿ ಕ್ಷೇತ್ರಗಳಲ್ಲಿ ಕಾಂಗ್ರೆಸ್, ದಳ, ಜೆಡಿಯು ಹೀಗೆ ಯಾವ ಪಾರ್ಟಿಗಳಲ್ಲೂ ಹಾಲಿ ಎಂಎಲ್‌ಸಿಗೆ ಟಿಕೆಟ್ ನೀಡುತ್ತಿರುವ ಉದಾಹರಣೆ ಸಿಗುತ್ತಿಲ್ಲ. ಅಂತಲ್ಲಿ ಶೋಭಾದ್ದೇನು ವಿಶೇಷ?

ಬಿಜೆಪಿಯೊಳಗೆ ಇನ್ನೊಬ್ಬ ಎಂಎಲ್‌ಸಿ ಲಿಂಬಾವಳಿಯವರಿಗೂ ಮಹದೇವಪುರದ ಟಿಕೆಟ್ ನೀಡಲಾಗಿದೆಯಾದರೂ ಅದು ಶೋಭಾರಿಗೆ ಟಿಕೆಟ್ ನೀಡುವುದನ್ನು ಒಪ್ಪಲೇಬೇಕಾಗಿ ಬಂದಾಗ ಅನಂತ್ ಬಣದ ಶರತ್ತಿನಂತೆ ಸಿಕ್ಕಿರುವ ಅವಕಾಶವಷ್ಟೇ. ಮಜಾ ಅಂದರೆ ಮೊನ್ನೆ ಬಿಜೆಪಿ ವರಿಷ್ಠರು ದೆಹಲಿಯಲ್ಲಿ ಪತ್ರಿಕಾಗೋಷ್ಠಿ ನಡೆಸುತ್ತಿದ್ದಾಗ ಶೋಭಾಗೆ ಯಡ್ಡಿ ರಕ್ಷಣೆಯ ವಿಚಾರವೂ ಪ್ರಸ್ತಾಪವಾಗಿತ್ತು. ಅವತ್ತು ಅರುಣ್ ಜೈಟ್ಲಿ ಕೂಡ ವಿಧಿ ಇಲ್ಲದೆ ಶೋಭಾಗೆ ಟಿಕೆಟ್ ನೀಡಲೇಬೇಕಾಯಿತೆಂದು ಒಪ್ಪಿಕೊಂಡಿದ್ದರು. ಅಂದರೆ ಬಿಜೆಪಿ ಹೈಕಮಾಂಡಿಗೂ ಸವಾಲಾಗುವಂಥ ಬಲಿಷ್ಠ ಅನಂತ್‌ಕುಮಾರ್ ಕೂಡ ಮಣಿಸಲಾಗದ, ಪಕ್ಷದೊಳಗಿನ ಯಾವ ಭಿನ್ನಮತ, ಬಂಡಾಯದ ಬೆದರಿಕೆಗಳಿಗೂ ಜಗ್ಗದ...

ಪ್ರಭಾವಶಾಲಿ ಮಹಿಳಾ ರಾಜಕಾರಣಿಯಾಗಿ ಶೋಭಾ ಬೆಳೆದಿದ್ದಾರೆ. ಮುಂದಿಟ್ಟ ಹೆಜ್ಜೆ ಹಿಂತೆಗೆಯಲಾರೆ ಎಂಬಂತೆ ಎಂಎಲ್‌ಸಿಗಿರಿಯೂ ಬೇಕು, ಎಂಎಲ್‌ಎನೂ ನನಗೇ ಬೇಕು, ನಾಳೆ ಮಂತ್ರಿಯೂ ಆಗಬೇಕೆಂದು ಶೋಭಾ ಹೊರಟಿದ್ದಾರೆ.

.....ಜಯಲಲಿತಾ ವೇಗದಲ್ಲಿ,
ಅಲ್ಲಿ ಎಂ.ಜಿ.ಆರ್.
ಇಲ್ಲಿ ಯಡ್ಡಿ.... ಅಷ್ಟೇ ವ್ಯತ್ಯಾಸ.

■ ವರದಿಗಾರ


ಮೂಡಿಗೆರೆ: ನೆಲಕಚ್ಚಲಿರುವ ಬಿಜೆಪಿ

ಚುನಾವಣೆ ಘೋಷಣೆಯಾಗುತ್ತಿದ್ದಂತೆ ಮೂಡಿಗೆರೆ ಮೀಸಲು ಕ್ಷೇತ್ರದಲ್ಲಿ ಚುನಾವಣೆಯ ರಂಗೇರಿದೆ. ಸಿಪಿಐ ಒಂದನ್ನು ಬಿಟ್ಟರೆ ಉಳಿದಂತೆ ಎಲ್ಲ ಪಕ್ಷಗಳಲ್ಲೂ ಅಭ್ಯರ್ಥಿಗಳ ಆಯ್ಕೆಯದ್ದೇ ದೊಡ್ಡ ಗೊಂದಲ ಸೃಷ್ಟಿಯಾಗಿದೆ.

ಕಳೆದ ಬಾರಿ ಬಿಜೆಪಿಯಿಂದ ಸ್ಪರ್ಧಿಸಿದ್ದ ಎಂ.ಪಿ.ಕುಮಾರಸ್ವಾಮಿಗಂತೂ ಈ ಚುನಾವಣೆ ಒಂದು ಅಗ್ನಿಪರೀಕ್ಷೆ. ಈತ ಅನಾಮಿಕನಾಗಿದ್ದರೂ ದಲಿತನಾಗಿದ್ದರಿಂದ ಮತ್ತು ತನ್ನ ಸುತ್ತ ಯಾವ ಅರ್ಹ ದಲಿತ ಇಲ್ಲದಿದ್ದರಿಂದ ಕಳೆದ ಬಾರಿ ಇವನನ್ನೇ ಕರೆದು ಬಿಜೆಪಿ ಟಿಕೆಟ್ ಕೊಟ್ಟಿತ್ತು. ಆದರೆ ಕುಮಾರಸ್ವಾಮಿ ಕಟ್ಟರ್ ಹಿಂದೂತ್ವವಾದಿಯಾಗಿರದಿದ್ದರಿಂದ ಅಲ್ಲಿನ ಮೇಲುಜಾತಿಯವರಿಗೆ ಮತ್ತು ಅಪ್ಪಟ ಚೆಡ್ಡಿಗಳಿಗೆ ಈತನನ್ನು ಕಂಡರಾಗುತ್ತಿರಲಿಲ್ಲ. ಎಷ್ಟರಮಟ್ಟಿಗೆ ಎಂದರೆ ಸಾರ್ವಜನಿಕ ಸಭೆಯೊಂದರಲ್ಲಿ







ಈತನ ಮೇಲೆ ಮೇಲು ಜಾತಿಯ ಆರೆಸ್ಸೆಸ್ ನಾಯಕರೇ ಹಲ್ಲೆ ಮಾಡಿದ್ದರು. ಅಷ್ಟೇ ಅಲ್ಲದೆ, ಈತ ಬಿಜೆಪಿ ಶಾಸಕನಾಗಿದ್ದರೂ ಆರೆಸ್ಸೆಸ್ ಹೇಳಿದಂತೆ ಮಾಡದಿದ್ದದ್ದು ಈತನ ಬಗ್ಗೆ ಚೆಡ್ಡಿಗಳಲ್ಲಿ ಅಸಮಾಧಾನ ಮತ್ತು ಆಕ್ರೋಶ ಬೆಳೆಯುವಂತಾಯಿತು.

ಈ ಎಲ್ಲ ಕಾರಣಗಳಿಂದಾಗಿಯೇ ಈ ಬಾರಿ ಕುಮಾರಸ್ವಾಮಿಗೆ ಟಿಕೆಟ್ ನೀಡಬಾರದೆಂದು ಪಕ್ಷದೊಳಗೇ ಅಪಸ್ವರವೆದ್ದಿತ್ತು. ಚಿಕ್ಕಮಗಳೂರಿನ ಮಾಜಿ ಶಾಸಕ ಸಿ.ಟಿ ರವಿಯೇ ಖುದ್ದಾಗಿ ಈತನಿಗೆ ಟಿಕೆಟ್ ಕೊಡಬಾರದೆಂದು ಪಕ್ಷದ ರಾಜ್ಯ ನಾಯಕರ ಕಿವಿಯೂದಿದ್ದ. ಇಷ್ಟೆಲ್ಲಾ ಅಪಸ್ವರಗಳ ನಡುವೆಯೂ ಪಕ್ಷದ ಟಿಕೆಟ್ ಪಡೆದುಕೊಳ್ಳುವಲ್ಲಿ ಆತ ಯಶಸ್ವಿಯಾಗಿದ್ದಾನೆ. ಆದರೆ ಗೆಲ್ಲುವುದು ಟಿಕೆಟ್ ಗಿಟ್ಟಿಸಿದಷ್ಟು ಸುಲಭವಲ್ಲ ಎಂಬುದಂತೂ ಸತ್ಯ.

ಕಳೆದ ಬಾರಿ ಕುಮಾರಸ್ವಾಮಿ ಗೆಲ್ಲುವುದಕ್ಕೆ ಆತನ ವರ್ಚಸ್ಸಿಗಿಂತ ಬೇರೆಯದೇ ಕೆಲವು ಕಾರಣಗಳಿದ್ದವು. ಆ ಹಿಂದೆ ಶಾಸಕಿಯಾಗಿದ್ದ ಮೋಟಮ್ಮನ ವಿರುದ್ಧ ಜನರಿಗಿದ್ದ ಸಿಟ್ಟು, ಬಾಬಾಬುಡನ್‌ಗಿರಿಯ ವಿಚಾರದಲ್ಲಿ ಜನರಲ್ಲಿ ಸಂಘಪರಿವಾರ ಮೂಡಿಸಿದ್ದ ತಪ್ಪು ಪರಿಕಲ್ಪನೆ, ಬಂಗಾರಪ್ಪ ಬಿಜೆಪಿ ಸೇರಿದ್ದು ಮುಂತಾದವುಗಳು ಕುಮಾರಸ್ವಾಮಿಯನ್ನು ಗೆಲ್ಲಿಸಿದ್ದವು. ಈ ಬಾರಿ ಆತ ಗೆಲ್ಲುವುದು ಅಷ್ಟು ಸುಲಭವಲ್ಲ.

ಈ ಬಾರಿ ಕುಮಾರಸ್ವಾಮಿಯನ್ನು ಸೋಲಿಸಲು ಒಂದು ಕಡೆ ಸಿ.ಟಿ.ರವಿ ಪಣತೊಟ್ಟಿದ್ದರೆ ಇನ್ನೊಂದೆಡೆ ಮಾಜಿ ಬಿಜೆಪಿ ಜಿಲ್ಲಾಧ್ಯಕ್ಷ ಎಂ.ಕೆ. ಪ್ರಾಣೇಶ್ ಕೂಡ ಸೆಟೆದು ನಿಂತಿದ್ದಾರೆ. ಟಿಕೆಟ್ ಆಕಾಂಕ್ಷಿಗಳಾಗಿದ್ದ ಶಾಮಣ್ಣ, ದೀಪಕ್, ದೊಡ್ಡಯ್ಯರಂಥವರೂ ಈಗ ಟಿಕೆಟ್ ವಂಚಿತರಾಗಿ ಕುಮಾರಸ್ವಾಮಿಯ ವಿರುದ್ಧ ಕತ್ತಿ ಮಸೆಯುತ್ತಿದ್ದಾರೆ. ಪಕ್ಷದೊಳಗಿನ ಈ ಗುಂಪುಗಾರಿಕೆ ಮತ್ತು ಹಗೆತನಗಳೇ ಈ ಬಾರಿ ಬಿಜೆಪಿಯ ಬುಡವನ್ನು ಅಲ್ಲಾಡಿಸಿದರೂ ಆಶ್ಚರ್ಯವಿಲ್ಲ.

ಕುಮಾರಸ್ವಾಮಿಗೆ ಎದುರಾಗಿರುವ ಇನ್ನೊಂದು ಮುಖ್ಯ ವಿಚಾರ ಎಂದರೆ ಕಾಂಗ್ರೆಸ್‌ನ ಪ್ರಬಲ ಸ್ಪರ್ಧೆ. ಕಳೆದ ಬಾರಿಯ ಸೋಲಿನಿಂದ ಪಾಠ ಕಲಿತಿರುವ ಕಾಂಗ್ರೆಸ್ ಈ ಬಾರಿ ಹೇಗಾದರೂ ಮಾಡಿ ಮೂಡಿಗೆರೆಯನ್ನು ತನ್ನ ತೆಕ್ಕೆಗೆ ಹಾಕಿಕೊಳ್ಳಲು ಸಿದ್ಧತೆ ನಡೆಸಿದೆ. ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ನಾಯಕರಿಗೇನೂ ಕೊರತೆಯಿಲ್ಲ. ಎಸ್.ಎಂ.ಕೃಷ್ಣ ಸಂಪುಟದಲ್ಲಿ ಸಚಿವರಾಗಿದ್ದ ಮೋಟಮ್ಮ, ಮಾಜಿ ಸಂಸದೆ ಡಿ.ಕೆ.ತಾರಾದೇವಿ, ಡಿ.ಎಂ.ಪುಟ್ಟಯ್ಯ, ಮಾಜಿ ಸಭಾಪತಿ ಬಿ.ಎಲ್.ಶಂಕರ್ ಮುಂತಾದ ಘಟಾನುಘಟಿಗಳ ದಂಡೇ ಮೂಡಿಗೆರೆಯಲ್ಲಿದೆ. ಆದರೆ ಕಾಂಗ್ರೆಸ್‌ನ ಒಂದು ಸಮಸ್ಯೆ ಒಳಜಗಳ. ಕಳೆದ ಬಾರಿ ಕೂಡ ಈ ಒಳಜಗಳವೇ ಕಾಂಗ್ರೆಸ್ಸನ್ನು ಅರ್ಧದಷ್ಟು ಹೈರಾಣು ಮಾಡಿತ್ತು, ಈ ಬಾರಿಯೂ ಅದು ಇದ್ದೇ ಇದೆ. ಒಂದು ಗುಂಪು ಮೋಟಮ್ಮನಿಗೆ ಮಣೆ ಹಾಕಲು ಹವಣಿಸುತ್ತಿದ್ದರೆ ಇನ್ನೊಂದು ಗುಂಪು ಹೊಸ ಮುಖಗಳಿಗೆ ಅವಕಾಶ ಕೊಡಿ ಎಂದು ದುಂಬಾಲು ಬಿದ್ದಿದೆ. ಏನೇ ಆದರೂ ಈ ನಾಯಕರೆಲ್ಲಾ ಒಗ್ಗಟ್ಟಿನಿಂದ ಚುನಾವಣೆ ಎದುರಿಸಿದ್ದೇ ಆದರೆ ಬಿಜೆಪಿಯ ಕುಮಾರಸ್ವಾಮಿಗೆ ಮಣ್ಣು ತಿನ್ನಿಸುವುದು ಕಷ್ಟಕರವೇನಲ್ಲ.

ಇನ್ನೊಂದೆಡೆಗೆ ಜೆಡಿಎಸ್ ಕೂಡ ತನ್ನ ಸಾಮರ್ಥ್ಯ ಪ್ರದರ್ಶಿಸಲು ಸಿದ್ಧವಾಗಿ ನಿಂತಿದೆ. ಜೆಡಿಎಸ್‌ನಿಂದ ಬಿ.ಬಿ.ನಿಂಗಯ್ಯ ಸ್ಪರ್ಧಿಸುವುದು ಖಾತ್ರಿಯಾಗಿದೆ. ಇವರ ವೈಯಕ್ತಿಕ ವರ್ಚಸ್ಸು ಮತ್ತು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯ ಜನಪ್ರಿಯತೆ ಪಕ್ಷದ ನೆರವಿಗೆ ಬರಬಲ್ಲವು. ಎಲ್ಲ ಪಕ್ಷಗಳಂತೆ ಇಲ್ಲಿಯೂ ಕೂಡ ಒಳಜಗಳ ಇದ್ದೇ ಇದೆ. ಈ ಹಿಂದೆ ಕಾಂಗ್ರೆಸ್‌ನಿಂದ ವಲಸೆ ಬಂದಿದ್ದ ಪ್ರಭಾವಿ ನಾಯಕ ಕೆ.ವೆಂಕಟೇಶ್ ಅಸಮಾಧಾನದ ಕಿಡಿಹೊತ್ತಿಸಿದ್ದಾರೆ. ಅವರಿಗೆ ತಾಲ್ಲೂಕು ಅಧ್ಯಕ್ಷ ಉಮಾಪತಿ, ಮಂಜಪ್ಪಯ್ಯ, ಬಿ.ಎಂ. ಸಂದೀಪ್ ಮುಂತಾದ ಮುಖಂಡರುಗಳೊಂದಿಗೆ ಉತ್ತಮ ಬಾಂಧವ್ಯ ಕೂಡ ಇದೆ.

ಈ ಮಧ್ಯೆ ಶಿಕಾರಿಪುರದಿಂದ ವಲಸೆ ಬಂದಿರುವ ಮಾಜಿ ಸಚಿವ ವೆಂಕಟಪ್ಪನವರ ಮಗ ಅನಿಲ್‌ಸೂರ್ಯ ಕ್ಷೇತ್ರದಾದ್ಯಂತ ಬಿರುಸಿನ ಚಟುವಟಿಕೆಯಲ್ಲಿದ್ದಾರೆ. ಕೆ.ವೆಂಕಟೇಶರ ಭಿನ್ನಮತೀಯರ ಬಣ ಅನಿಲ್ ಸೂರ್ಯರನ್ನು ಕಣಕ್ಕಿಳಿಸುವ ತಯಾರಿ ನಡೆಸಿದೆ. ಈ ಎರಡೂ ಗುಂಪುಗಳ ನಡುವಿನ ತಿಕ್ಕಾಟ ಎಷ್ಟರಮಟ್ಟಿಗೆ ಹೋಗಿದೆಯೆಂದರೆ ನಿಂಗಯ್ಯನಿಗೆ ಟಿಕೆಟ್ ಕೊಟ್ಟರೆ ವೆಂಕಟೇಶ್ ಬಣ ಪಕ್ಷ ತ್ಯಜಿಸುವ ಬೆದರಿಕೆಯನ್ನೂ ಒಡ್ಡಿದೆ. ಇದು ನಿಜವಾದರೆ ಜೆಡಿಎಸ್ ಪಾಲಿಗೆ ಒಂದಿಷ್ಟು ಕಷ್ಟವನ್ನಂತೂ ತರಲಿದೆ.

ಕ್ಷೇತ್ರದಲ್ಲಿ ತನ್ನದೇ ಆದ ಮತಬ್ಯಾಂಕನ್ನು ಉಳಿಸಿಕೊಂಡಿರುವ ಸಿಪಿಐ ಪಕ್ಷದಿಂದ ಸಾತಿ ಸುಂದರೇಶ್ ಸ್ಪರ್ಧಿಸುವುದು ಖಚಿತವಾಗಿದೆ. ವಾಸ್ತವದಲ್ಲಿ ಕಳೆದ ಬಾರಿ ಕಾಂಗ್ರೆಸ್ ಸೋಲಲಿಕ್ಕೆ ಸಿಪಿಐ ಕಿತ್ತುಕೊಂಡ ಮತಗಳೂ ಗಣನೀಯವಾಗಿ ಸಹಕರಿಸಿದ್ದವು. ಸಾತಿ ಸುಂದರೇಶರ ಸಾಮಾಜಿಕ ಕಳಕಳಿ, ಪ್ರಾಮಾಣಿಕತೆ ಒಂದಿಷ್ಟು ಜನಪ್ರಿಯತೆಗೆ ಕಾರಣವಾಗಿದ್ದರೂ ಅವರು ಗೆಲ್ಲುವುದು ದೂರದ ಮಾತಾಗಿಯೇ ಉಳಿಯುವಂತೆ ಕಾಣಿಸುತ್ತಿದೆ.

ಇನ್ನೊಂದೆಡೆಗೆ ಬಿಎಸ್‌ಪಿಯೂ ಹೋರಾಟಕ್ಕೆ ಸಿದ್ಧವಾಗಿದೆ. ಉತ್ತರ ಪ್ರದೇಶದ ಚುನಾವಣಾ ಫಲಿತಾಂಶದಿಂದ ಉತ್ಸುಕರಾಗಿರುವ ಯುವಕರ ದಂಡು ಬಿಎಸ್‌ಪಿಯನ್ನು ಸಂಘಟಿಸುವಲ್ಲಿ ನಿರತವಾಗಿದೆ. ಇಲ್ಲಿಯೂ ಎಂ.ಎ.ಸಲಾವುದ್ದೀನ್, ಮರಗುಂದ ಪ್ರಸನ್ನ, ಮಂಜಯ್ಯ, ಶಂಕರ್ - ಹೀಗೇ ಟಿಕೆಟ್ ಆಕಾಂಕ್ಷಿಗಳ ಪಟ್ಟಿ ದೊಡ್ಡದಿದೆ. ಆದರೆ ಅಂತಿಮವಾಗಿ ರಾಧಾಕೃಷ್ಣ ಬಿಎಸ್‌ಪಿ ಕಡೆಯಿಂದ ಕಣಕ್ಕಿಳಿಯುವ ಸಾಧ್ಯತೆಯೇ ಜಾಸ್ತಿಯಿದೆ. ಇದೂ ಕೂಡ ಗೆಲ್ಲುವ ಪಕ್ಷವಲ್ಲ. ಕಾಂಗ್ರೆಸ್ ಮತ್ತು ಜೆಡಿಎಸ್‌ಗೆ ಒಂದಿಷ್ಟು ಹಾನಿ ಮಾಡಬಹುದಷ್ಟೆ.


ಸಾರಾಂಶೀಕರಿಸಿ ಹೇಳುವುದಾದರೆ, ಮೂಡಿಗೆರೆಯಲ್ಲಿ ಕಾಂಗ್ರೆಸ್-ಬಿಜೆಪಿ-ಜೆಡಿಎಸ್ ನಡುವೆ ತ್ರಿಕೋನ ಸ್ಪರ್ಧೆ ಏರ್ಪಡುವುದು ನಿಚ್ಚಳವಾಗಿದೆ. ಬಿಜೆಪಿಯ ಒಳಜಗಳ, ಎಂ.ಪಿ.ಕುಮಾರಸ್ವಾಮಿಯ ಬಗ್ಗೆ ಚೆಡ್ಡಿಗಳಿಗಿರುವ ಸಿಟ್ಟು ಮುಂತಾದವನ್ನು ಬಳಸಿಕೊಂಡು ಕಾಂಗ್ರೆಸ್ ಒಗ್ಗಟ್ಟಿನಿಂದ ಹೋರಾಡಿದರೆ ಗೆಲುವು ಕಾಂಗ್ರೆಸ್ ಪಾಲಾಗುವುದರಲ್ಲಿ ಯಾವುದೇ ಅಚ್ಚರಿಯಲ್ಲ.

■ ಅಜೀಜ್ ಕಿರುಗುಂದ

ಬೀಳಗಿ: ಮುರುಗೇಶ್ ನಿರಾಣಿಗೆ ಜನ ನೀರಿಳಿಸುವರೆ?

ಬಿಜೆಪಿ ಅದೆಷ್ಟು ಮರ್ಯಾದೆ ಬಿಟ್ಟು ಕುಳಿತಿದೆಯೆಂದರೆ ಬೀಳಗಿ ಕ್ಷೇತ್ರದಲ್ಲಿ ಅದು ಮತ್ತೆ ಮುರುಗೇಶ್ ನಿರಾಣಿ ಎಂಬ ಭ್ರಷ್ಟಾತಿಭ್ರಷ್ಟನಿಗೆ ಟಿಕೆಟ್ ನೀಡಿದೆ. ಈತ ಶಾಸಕನಾಗಿದ್ದಷ್ಟೂ ದಿನ ಕ್ಷೇತ್ರದುದ್ದಕ್ಕೂ ಈತ ಮಾಡಿದ ಘನಂದಾರಿ ಕೆಲಸಗಳನ್ನು ನೋಡಿದರೆ ಯಾರಿಗಾದರೂ ಹೇವರಿಕೆ ಬರುವುದು ಸಹಜ. ಇಂತಹ ಪುಂಡರಿಂದಲೇ ಬಿಜೆಪಿಗೆ ಗತಿ ಬಂದಿದೆ ಎಂದರೆ ಅದು ಅದ್ಯಾವ ಮಟ್ಟಕ್ಕೆ ಬಂದು ನಿಂತಿದೆ ಎಂಬುದು ಅರ್ಥವಾಗುತ್ತದೆ.

ಕಳೆದ ಬಾರಿ ಯಡಿಯೂರಪ್ಪನ ಕಾಲಿಗೆ ಬಿದ್ದೇ ನಿರಾಣಿ ಟಿಕೆಟ್ ಪಡೆದಿದ್ದ. ಮೂಲತಃ ಕೈಗಾರಿಕೋದ್ಯಮಿಯಾಗಿರುವ ಈತ ಚೆಲ್ಲಿದ ಹಣ ಹಾಗೂ ಬೀಳಗಿ ಜನಕ್ಕೆ ನೀಡಿದ ಆಶ್ವಾಸನೆಗಳು ಅವನನ್ನು ಗೆಲ್ಲಿಸಿದ್ದವು. ಈತ ಗೆದ್ದಿದ್ದೇ ತಡ ಪ್ರಮೋದ್ ಮುತಾಲಿಕನಂತಹ ಹಿಂದೂ ಲಾಡೆನ್‌ನನ್ನು ಬೀಳಗಿಗೆ ಕರೆಸಿ ಹಿಂದೂ ಮತೋನ್ಮಾದದ ಕಹಿಯನ್ನು ಯುವಕರಲ್ಲಿ ತುಂಬಿ ಕೋಮುದಳ್ಳುರಿ ಹಚ್ಚಲು ಪ್ರಯತ್ನಿಸಿದ. ಶಾಸಕನಾಗಿದ್ದೇ ಸರ್ಕಾರಿ ದುಡ್ಡು ಮೇಯಲು, ತನ್ನ ಬಿಸಿನೆಸ್ಸನ್ನು ಮತ್ತಷ್ಟು ಲಾಭದಾಯಕಗೊಳಿಸಲು ಎಂದು ನಂಬಿದ್ದ ತನ್ನ ಕ್ಷೇತ್ರದಲ್ಲಿ ನಡೆದ ಎಲ್ಲಾ ಕಾಮಗಾರಿಗಳಿಗೆ ತನ್ನ ವಿಜಯ್ ಶಕ್ತಿ ಕಾರ್ಖಾನೆ ಉತ್ಪಾದಿಸುವ ಕಳಪೆ ಗುಣಮಟ್ಟದ ಸಿಮೆಂಟನ್ನೇ ಬಳಸಬೇಕೆಂದು ಅಲಿಖಿತ ಫರ್ಮಾನು ಹೊರಡಿಸಿದ. ಒಂದೆಡೆ ಕಾಮಗಾರಿ ಕಂಟ್ರಾಕ್ಟ್ ಪಡೆದ ಗುತ್ತಿಗೆದಾರರಿಂದ ಕಮೀಷನ್, ಇನ್ನೊಂದೆಡೆ ತನ್ನದೇ ಕಾರ್ಖಾನೆಯ ಸಿಮೆಂಟ್ ಮಾರಾಟ - ಹೀಗೆ ಎರಡೂ ಕಡೆಯಿಂದ ಮುಕ್ಕತೊಡಗಿದ.



ಈತ ಸರ್ಕಾರಿ ದುಡ್ಡನ್ನು ಹೇಗೆ ಕದಿಯುತ್ತಿದ್ದ ಎಂಬುದಕ್ಕೆ ಮೊನ್ನೆ ನಡೆದ ಘಟನೆಯೇ ಸಾಕ್ಷಿ. ಇವನ ಮಾಲಿಕತ್ವದ ವಿಜಯ್ ಶಕ್ತಿ ಸಿಮೆಂಟ್ ಫ್ಯಾಕ್ಟರಿಯ ಮೇಲೆ ಕೆಪಿಟಿಸಿಎಲ್‌ನವರು ದಾಳಿ ಮಾಡಿ ವಿದ್ಯುತ್ ಕದ್ದು ಉಪಯೋಗಿಸುತ್ತಿದ್ದುದನ್ನು ರೆಡ್ ಹ್ಯಾಂಡಾಗಿ ಹಿಡಿದು ಕೇಸು ಜಡಿದಿದ್ದಾರೆ. ದಾಳಿ ನಡೆಸಿದ ಅಧಿಕಾರಿಗಳ ಪ್ರಕಾರ ನಿರಾಣಿ 3.5 ಕೋಟಿ ಮೌಲ್ಯದ ವಿದ್ಯುತ್ ಕಳ್ಳತನ ಮಾಡಿದ್ದಾನೆ.

ಜಾತಿ ರಾಜಕಾರಣದಲ್ಲೂ ಈತ ಕಡಿಮೆಯೇನೂ ಇಲ್ಲ. ಕ್ಷೇತ್ರದಾದ್ಯಂತ ಆಯಕಟ್ಟಿನ ಸ್ಥಳಗಳಲ್ಲಿ ತನ್ನದೇ ಪಂಚಮಸಾಲಿ ಚೇಲಾಗಳನ್ನು ಇಟ್ಟು ನಿರಾಳವಾಗಿ ಕಮೀಷನ್ ಪಡೆಯುವ ವ್ಯವಸ್ಥೆ ಮಾಡಿಕೊಂಡಿದ್ದಾನೆ. ಇಂತಹ ಖದೀಮನಿಗೆ ರಾಮ ಭಕ್ತ ಬಿಜೆಪಿಗಳು ಆಶ್ರಯ ಕೊಟ್ಟಿದ್ದಾರಲ್ಲದೆ, ಈ ಬಾರಿಯೂ ಚುನಾವಣೆಯಲ್ಲಿ ಸ್ಪರ್ಧಿಸುವಂತೆ ಟಿಕೆಟ್ ಕೊಟ್ಟು ಪ್ರೋತ್ಸಾಹಿಸುತ್ತಿದ್ದಾರೆ. ಈ ಚೆಡ್ಡಿಗಳು ಸ್ಥಾಪಿಸಬಯಸುವ ರಾಮರಾಜ್ಯ ಎಂತಹದ್ದೆಂದು ಈ ಒಂದು ಪ್ರಕರಣದಿಂದಲೇ ಊಹಿಸಬಹುದು!

ಬೀಳಗಿಯಲ್ಲಿ ಮುರುಗೇಶ್ ನಿರಾಣಿಯ ಮಂಗಾಟ ಎಗ್ಗಿಲ್ಲದಂತೆ ನಡೆಯುವುದಕ್ಕೆ ಕಾಂಗ್ರೆಸ್‌ನ ದೌರ್ಬಲ್ಯವೂ ಒಂದು ಕಾರಣವಾಗಿದೆ. ಜೆ.ಟಿ.ಪಾಟೀಲ್ ಭ್ರಷ್ಟಾಚಾರದ ಕೊಚ್ಚೆಗುಂಡಿಯಲ್ಲಿ ಹೊರಳಾಡಿ ಮೈಹೊಲಸು ಮಾಡಿಕೊಂಡಿದ್ದರ ಪರಿಣಾಮವಾಗಿ ಈ ಬಾರಿ ಆತನಿಗೆ ಟಿಕೆಟ್ ಸಿಗುವುದು ದುಸ್ತರವಾಗಿದೆ. ಅವರ ಸ್ಥಾನಕ್ಕೆ ಕುಮಾರ ಮಲಘಾಣನನ್ನು ತರುವ ಸೂಚನೆ ಎದ್ದು ಕಾಣುತ್ತಿದೆ. ಜೊತೆಗೆ ಸರನಾಡಗೌಡರ ಹೆಸರೂ ಕೇಳಿಬರುತ್ತಿದೆಯಾದರೂ ಇವರಿಗೆ ಟಿಕೆಟ್ ಸಿಗುವ ಛಾನ್ಸು ಕಡಿಮೆಯೇ ಇದೆ.

ಕುಮಾರ ಮಲಘಾಣ ಈ ಹಿಂದೆ ಮೂರು ಬಾರಿ ಜಿಲ್ಲಾ ಪಂಚಾಯತಿ ಅಧ್ಯಕ್ಷನಾಗಿ ಹೆಸರು ಮಾಡಿದ ಯುವಕ. ಉಳಿದವರಿಗೆ ಹೋಲಿಸಿದರೆ ಅಷ್ಟಾಗಿ ಮೈಕೈ ಹೊಲಸು ಮಾಡಿಕೊಂಡಿಲ್ಲ. ಈತನಿಗೆ ನಿಜಕ್ಕೂ ಕಾಂಗ್ರೆಸ್ ಟಿಕೆಟ್ ಸಿಗುವುದಾದರೆ ಮುರುಗೇಶ್ ನಿರಾಣಿ ಎಂಬ ಶನಿಯನ್ನು ಬೀಳಗಿಯಿಂದ ಹೊರಗಟ್ಟಲು ಸಾಧ್ಯವಾದೀತು. ಇಲ್ಲಿ ಜೆಡಿಎಸ್ ಆಟಕ್ಕುಂಟು ಲೆಕ್ಕಕ್ಕಿಲ್ಲ ಎಂಬಂತಹ ಸ್ಥಿತಿಯಿದೆಯಾದ್ದರಿಂದ ಈ ಕೆಲಸವನ್ನು ಕಾಂಗ್ರೆಸ್ಸೇ ಮಾಡಬೇಕು.

ಈತನ ಮುಕ್ಕುವಿಕೆಯನ್ನು ನೋಡಿರುವ ಬೀಳಗಿಯ ಜನ ಈ ಬಾರಿ ನಿರಾಣಿಯ ನೀರಿಳಿಸಿದರೂ ಆಶ್ಚರ್ಯವಿಲ್ಲ.

■ ಮೇಘರಾಜ್

ಮುದ್ನಾಳ್ ಫ್ಯಾಮಿಲಿಯ ಚೆಡ್ಡಿ ಕಳಚಲು ರೆಡಿಯಾಗಿರುವ ಯಾದಗಿರಿ




ಕಲಬುರ್ಗಿ ಜಿಲ್ಲೆಯ ಯಾದಗಿರಿಯ [illegible] ಗೋದಾಮುವಲ್ಲಿ ಇದ್ದುಕೊಂಡೆ ಇಡೀ ಕ್ಷೇತ್ರದಲ್ಲಿ [illegible] ಕೈ ಬಿಡಿದ್ದ ವಿಶ್ವನಾಥರೆಡ್ಡಿ ಮುದ್ನಾಳ್ ಈ ಬಾರಿ ಚುನಾವಣೆಯ ಕಣಕ್ಕೆ ತನ್ನ ಮಕ್ಕಳನ್ನು ಧುಮುಕಿಸಿದ್ದಾನೆ. ಈ ಹಿಂದೆ ಯಾದಗಿರಿ ಮತಕ್ಷೇತ್ರದಲ್ಲಿ ಪಕ್ಷೇತರ ಅಭ್ಯರ್ಥಿಯಾಗಿ ನಿಂತು ಗೆದ್ದ ನಂತರ ಜೆಡಿಎಸ್ ಸೇರಿದ ಡಾ. ವೀರಬಸವಂತರೆಡ್ಡಿ ಮುದ್ನಾಳ ಈತನ [illegible] ಶಾಸಕನಾಗಿದ್ದರೂ ಅಲ್ಲಿ ದರ್ಬಾರು ನಡೆಸಿದ್ದು ಮಾತ್ರ ವಿಶ್ವನಾಥರೆಡ್ಡಿ ಮುದ್ನಾಳ ಹಾಗೂ ಆತನ ಸುಪುತ್ರ ವೆಂಕಟರೆಡ್ಡಿ.

ಅಧಿಕಾರದ ಗದ್ದುಗೆ ಹಿಡಿಯಲು ಮುದಿ ಮುದ್ನಾಳ್ ಎಂಥಾ ಸರ್ಕಸ್ ಮಾಡಲೂ ಸಿದ್ಧ. ಒಂದೆಡೆ ತಾನು ಬಸವ ತತ್ವಗಳನ್ನು ಅಪ್ಪಿಕೊಂಡಿರುವೆ ಎಂದು ಹೇಳುತ್ತಲೇ ಇನ್ನೊಂದೆಡೆ ಪಂಚಾಚಾರ್ಯ ಜಗದ್ಗುರುಗಳ ಕಾಲುಗಳನ್ನು ಗಟ್ಟಿಯಾಗಿ ಹಿಡಿದು ಕೂರುವ ಮನುಷ್ಯನೀತ. ಇಷ್ಟು ವರ್ಷಗಳ ಕಾಲ ಜೆಡಿಎಸ್ ತೆಕ್ಕೆಯಲ್ಲಿದ್ದು ಇನ್ನು ಮುಂದೆ ಆ ಪಕ್ಷ ಅಧಿಕಾರಕ್ಕೆ ಬರುವುದಿಲ್ಲ ಎಂಬುದು ಖಾತ್ರಿಯಾಗುತ್ತಿದ್ದಂತೆ ತನ್ನ ಮಕ್ಕಳಾದ ವೆಂಕಟರೆಡ್ಡಿ ಮುದ್ನಾಳ್ ಹಾಗೂ ಡಾ.ವೀರಬಸವಂತರೆಡ್ಡಿಗೆ ಬಿಜೆಪಿ ಟಿಕೆಟ್ ಕೊಡಿಸಿದ್ದಾನೆ. ಅವರಲ್ಲಿ ಒಬ್ಬರು ಗುರುಮಿಠಕಲ್‌ದಿಂದ ಮತ್ತೊಬ್ಬರು ಯಾದಗಿರಿಯಿಂದ ಸ್ಪರ್ಧಿಸಲಿದ್ದಾರೆ.

ಹೀಗೆ ಅಧಿಕಾರದಾಸೆಯಿಂದ ಬಿಜೆಪಿಗೆ ಶರಣಾಗಿದ್ದರೂ ತಾನು ಜಾತ್ಯತೀತ ಮನುಷ್ಯ ಎಂದು ತೋರಿಸಿಕೊಳ್ಳಲು ಆಗಾಗ ಯಾದಗಿರಿ ಮತ್ತು [illegible] ಮುಸ್ಲಿಂ ಬಂಧುಗಳನ್ನು ತನ್ನ ಗೋದಾಮಿಗೆ [illegible] ಅವರ ತಲೆಯ ಮೇಲೆ ಕೈ ಎಳೆದು ತನ್ನ [illegible] ಪ್ರೇಮ ತೋರಿಸುತ್ತಾನೆ. ಈತನ ಪುತ್ರಗಳು, [illegible] ವರ್ತಗಳು, ವೀರಾವೇಶದ ಭಾಷಣಗಳಲ್ಲಿ [illegible] ಎಂದು ಈಗಾಗಲೇ ಜನ ಗುರುತಿಸಿದ್ದಾರೆ. ಅವರಿಂದ ಬಿಜೆಪಿಗಳು ತೊಟ್ಟಿರುವ ಚೆಡ್ಡಿಗಳನ್ನು ಈ ಚುನಾವಣೆಗೆ ಸಜ್ಜಾಗಿನಿಂತಿರುವ ಮುದ್ನಾಳ್ ಫ್ಯಾಮಿಲಿಯ ಚೆಡ್ಡಿ ಬಿಚ್ಚಲು ಜನರೇ ಸಜ್ಜಾಗಿದ್ದಾರೆ.

ನಾವು ಗಡಿಯನ್ನು ದಾಟಿದೆವು ಅವರು ನಮ್ಮನ್ನು ಕೊಂದರು



(ಅರುಣದಗಳ ಚಿತ್ತ ಚಿತ್ರ)

'ಒಳ್ಳೆಯ ಕವಿತೆ ಅರ್ಥವಾಗುವುದಕ್ಕೆ ಮುಂಚೆಯೇ ಓದುಗರನ್ನು ತಟ್ಟುತ್ತದೆ' ಎಂಬ ಮಾತಿದೆ. ಅಂದರೆ, 'ಇದರ ಅರ್ಥವೇನು?' ಎಂದು ನಾವು ಕೇಳಿಕೊಳ್ಳುವುದಕ್ಕೆ ಮುಂಚೆಯೇ ಅದು ನಮ್ಮ ನರ ನಾಡಿಗಳನ್ನು ತಟ್ಟಿ, ಅನೇಕ ಭಾವನೆಗಳನ್ನು ಒಟ್ಟಿಗೇ ಸೃಷ್ಟಿಸುತ್ತವೆ; ಹಾಡಿನ ಮಧ್ಯದ ಒಂದು ಸಣ್ಣ ಝುಲಕ್, ಒಂದು ಪಲುಕು ನಮ್ಮ ಮನಸ್ಸಿನಲ್ಲಿ ಕೂತು, ಹಾಡು ಮುಗಿದ ಮೇಲೂ ಮುಂದುವರೆಯುವ ಸಿಂಚನದ ಹಾಗೆ.

ಕೆಲವೇ ಸಾಲಿನ ಹಾಯ್ಕು ಪದ್ಯಗಳು ನಮ್ಮನ್ನು ಹಿಡಿದಿಡುವುದೇ ಹೀಗೆ. ಪದಗಳು ನಿರ್ಮಿಸುವ ಅರ್ಥದ ಚೌಕಟ್ಟು, ಆ ಪದಗಳಿಗಷ್ಟೇ ಸೀಮಿತವಾಗಿರುವುದಿಲ್ಲ; ನಮ್ಮ ಅನುಭವದ ಹಿನ್ನೆಲೆ, ನಮ್ಮ ನೆನಪು, ಕನಸುಗಳು ಕೂಡ ನಮ್ಮ ಓದನ್ನು ನಿರ್ದೇಶಿಸುತ್ತಿರುತ್ತವೆ.

ಉದಾಹರಣೆಗೆ 'ನಾವು ಗಡಿಯನ್ನು ದಾಟಿದೆವು. ಅವರು ನಮ್ಮನ್ನು ಕೊಂದರು' ಸಾಲುಗಳಲ್ಲಿನ 'ಗಡಿ' ಪದ ಏನನ್ನು ಸೂಚಿಸುತ್ತದೆ? ದೇಶ? ಧರ್ಮ? ನೈತಿಕತೆ? ರೂಢಿ? ಸಂಪ್ರದಾಯ?..... ಶಂಭೂಕನಿಂದ ಸ್ಪಾರ್ಟಕ್ಸ್‌ವರೆಗೆ; ಬಸವ, ಕ್ರಿಸ್ತ, ಬುದ್ಧ, ಗಾಂಧಿಯಿಂದ ಮಾರ್ಟಿನ್ ಲೂಥರ್ ಕಿಂಗ್‌ನವರೆಗೆ.... ಚರಿತ್ರೆಯಲ್ಲಿ ಗಡಿದಾಟದವರೆಲ್ಲರನ್ನೂ ಕೊಂದು ಹಾಕಲಾಗಿದೆ. ಹಾಗೆಯೇ, ಹೀಗೆ 'ಗಡಿ' ದಾಟದವರಿಂದಲೇ ಸಮಾಜ ಹೊಸ ತಿರುವನ್ನು ಪಡೆಯಲು, ಹೊಸ ಸಾಧ್ಯತೆಗಳನ್ನು ಅನ್ವೇಷಿಸಲು ಸಾಧ್ಯವಾಗಿದ್ದು ಕೂಡ.

ಅಷ್ಟೇ ಅಲ್ಲ, ಇಲ್ಲಿ 'ನಾವು' ಮತ್ತು 'ಅವರು' ಎನ್ನುವ ಸಾಮಾನ್ಯ ಪದಗಳು ಕೂಡ ಶೃತಿ ಹಿಡಿದ ತಂಬೂರಿಯ ಹಾಗೆ ಅನೇಕ ಅರ್ಥ ಸ್ವರಗಳನ್ನು ಹೊರಡಿಸುತ್ತವೆ. 'ನಾವು' ಎನ್ನುವುದು ಚರಿತ್ರೆಯ ಎಲ್ಲ ಪ್ರಗತಿಪರರ, ಸ್ವಾತಂತ್ರ್ಯ ಬಯಸುವ ಹೋರಾಟಗಾರರನ್ನು ಸಂಕೇತಿಸಿದರೆ, 'ಅವರು' ಎನ್ನುವುದು ಎಲ್ಲ ಅಧಿಕಾರವರ್ಗದ ದಬ್ಬಾಳಿಕೆಯನ್ನು ಸೂಚಿಸುತ್ತದೆ. 'ನಾವು'-'ಅವರು' ಎನ್ನುವ ವಿಭಜನೆಯೇ ಶೋಷಣೆಯ ಮೂಲ ಮಂತ್ರ ಎನ್ನುವುದು ಕೂಡ ಇದು ಧ್ವನಿಸುತ್ತದೆ.

ಹೀಗೆ ಯೋಚಿಸುತ್ತಾ ಸಾಗಿದಂತೆ, ಈ ಪದಗಳು ನಮ್ಮನ್ನು ಕಾಲ-ದೇಶಗಳ ಗಡಿಗಳನ್ನು ಮೀರಿ ಚಿಂತಿಸುವಂತೆ, ನಮ್ಮ ಇಂದಿನ ಸಂದರ್ಭಕ್ಕೂ, ಇತಿಹಾಸಕ್ಕೂ ಸಂಪರ್ಕ ಕಲ್ಪಿಸುವ ಶಕ್ತಿಯನ್ನೂ ಪಡೆದುಕೊಳ್ಳುತ್ತವೆ. 'ದಾಟಿದೆವು' ಮತ್ತು 'ಕೊಂದರು' ಎಂಬ ಕ್ರಿಯಾಪದಗಳು ಸೂಚಿಸುವ ಕಾಲ ಕೂಡ ಇಲ್ಲಿ ಮುಖ್ಯವಾಗಿಬಿಡುತ್ತದೆ.

ಆದರೆ ಈ ಪದಗಳು, ಇಷ್ಟೆಲ್ಲಾ ವಿವರಣೆಯ 'ಗಡಿ'ಯನ್ನೂ ದಾಟಿ ನಿಲ್ಲುತ್ತವೆ ಎಂಬುದೇ ಈ ಸಾಲುಗಳ ಚೈತನ್ಯಕ್ಕೆ ಸಾಕ್ಷಿ.

■ ಡಾ. ವಿ.ಎಸ್. ಶ್ರೀಧರ


ಪಂಚಮಸಾಲಿ ಮತ್ತು ಸಾದರ ಹಣಾಹಣಿ!

ಹಾವೇರಿ

ಕೆಲವಾರಗಳ ಹಿಂದೆ ಹುಬ್ಬಳ್ಳಿಯ ಹನ್ಸ್ ಹೋಟೆಲ್‌ನಲ್ಲಿ ರಾಜ್ಯ ಸಾದರ ಲಿಂಗಾಯತ ಜನಾಂಗದ ನಾಯಕರ ಗುಪ್ತ ಸಭೆಯೊಂದು ಬಸವರಾಜ್ ಬೊಮ್ಮಾಯಿ ನೇತೃತ್ವದಲ್ಲಿ ಜರುಗಿತು. ರಾಜ್ಯ ರಾಜಕಾರಣದಲ್ಲಿ ಪಂಚಮಸಾಲಿ ಲಿಂಗಾಯತರೇ ಮೇಲುಗೈ ಸಾಧಿಸಿರುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಆದ್ದರಿಂದ ಹೇಗಾದರೂ ಮಾಡಿ ಪಂಚಮಸಾಲಿಗಳನ್ನು ಹಿಂದೆ ತಳ್ಳಿ ಸಾದರ ಲಿಂಗಾಯತರು ಮೇಲುಗೈ ಪಡೆಯುವಂತೆ ಕಾರ್ಯತಂತ್ರ ರೂಪಿಸುವುದೇ ಆ ಗುಪ್ತ ಸಭೆಯ ಉದ್ದೇಶವಾಗಿತ್ತು.

ಬಸವರಾಜ ಬೊಮ್ಮಾಯಿ ಈ ರೀತಿ ಆಲೋಚಿಸುವುದಕ್ಕೆ ಕಾರಣವೂ ಇಲ್ಲದಿಲ್ಲ. ಈಗಾಗಲೇ ನವಲಗುಂದದಿಂದ ಡಾ. ಶಿರಿಯಣ್ಣನವರ್, ನರಗುಂದದಿಂದ ಸಿ.ಸಿ. ಪಾಟೀಲ, ಕುಂದಗೋಳದಿಂದ ಎಂ.ಎಸ್ ಅಕ್ಕಿ, ಕಲಘಟಗಿಯಿಂದ ಎಸ್.ಐ. ಚಿಕ್ಕನಗೌಡರ್, ಧಾರವಾಡ ಗ್ರಾಮೀಣದಿಂದ ವಿನಯ ಕುಲಕರ್ಣಿ, ಧಾರವಾಡ ಶಹರದಿಂದ ಚಂದ್ರಕಾಂತ ಬೆಲ್ಲದ್ ಶಾಸಕರಾಗಿ ಆಯ್ಕೆಗೊಂಡಿದ್ದರು. ಇವರೆಲ್ಲರೂ ಪಂಚಮಸಾಲಿಗರಾಗಿರುವುದೇ ಸಾದರ ಲಿಂಗಾಯತ ಬಸವರಾಜ ಬೊಮ್ಮಾಯಿಯ ನಿದ್ದೆಗೆಡಿಸಿದೆ. ಪಂಚಮಸಾಲಿಗಳ ರಾಜಕೀಯ ಪ್ರಾಬಲ್ಯ ಹೀಗೇ ಮುಂದುವರೆದರೆ ಸಾದರರನ್ನು ಮೂಸು ನೋಡುವವರೂ ಇರುವುದಿಲ್ಲ ಎಂದು ಭಾವಿಸಿರುವ ಬಸವರಾಜ ಬೊಮ್ಮಾಯಿ ಈಗ ಅವರನ್ನೆಲ್ಲ ಮಟ್ಟ ಹಾಕುವುದಕ್ಕಾಗಿ ತನ್ನದೇ ಆದ ರಣತಂತ್ರವನ್ನು ರೂಪಿಸಿದ್ದಾರೆ.

[illegible] ಬಸವರಾಜ ಬೊಮ್ಮಾಯಿ ಶಿಗ್ಗಾಂವಿ ಕ್ಷೇತ್ರ[illegible] ಸ್ಪರ್ಧಿಸಲು ಬಿಜೆಪಿ ಟಿಕೆಟ್ ಪ[illegible]ದರೆ ಈ ಬಾರಿಯ ಚುನಾವಣೆಯಲ್ಲಿ ಈ ಕ್ಷೇತ್ರ ಅಕ್ಷರಶಃ ಪಂಚಮಸಾಲಿ ಮತ್ತು ಸಾದರ ನಡುವಿನ ಯುದ್ಧಭೂಮಿಯಾಗಿ ಪರಿವರ್ತನೆಗೊಳ್ಳುವ ಎಲ್ಲ ಸೂಚನೆಗಳೂ ಕಾಣುತ್ತಿವೆ. ಇಲ್ಲಿ ಸಾದರ ಲಿಂಗಾಯತ ಬಸವರಾಜ ಬೊಮ್ಮಾಯಿಗೆ ಸೆಡ್ಡು ಹೊಡೆಯುವುದಕ್ಕಾಗಿ ಪಂಚಮಸಾಲಿ ಪ್ರೇಮಾ ಪಾಟೀಲ್ ತಯಾರಿ ನಡೆಸಿದ್ದಾರೆ. ಈ ಕ್ಷೇತ್ರದಲ್ಲಿ ಪಂಚಮಸಾಲಿಗಳು 56,000ದಷ್ಟು ಮತದಾರರನ್ನು ಹೊಂದಿದ್ದರೆ ಮುಸ್ಲಿಮರು ಸುಮಾರು 35,000 ಮತದಾರರನ್ನು ಹೊಂದಿ ಎರಡನೇ ಸ್ಥಾನದಲ್ಲಿದ್ದಾರೆ.



ಬಸವರಾಜ ಬೊಮ್ಮಾಯಿ

ಪ್ರೇಮ ಪಾಟೀಲ್ ವಾಸ್ತವದಲ್ಲಿ ಎಂ.ಪಿ. ಪ್ರಕಾಶರ ಶಿಷ್ಯೆ. ಈ ಹಿಂದೆ ಲೋಕಸಭೆಗೆ ಸ್ಪರ್ಧಿಸಿ 80,000 ಮತಗಳನ್ನು ಪಡೆದಿದ್ದರು. ಅಲ್ಲದೇ ಜಿಲ್ಲಾ ಪಂಚಾಯತ್‌ನ ಮಾಜಿ ಅಧ್ಯಕ್ಷೆ ಬೇರೆ. ಪ್ರೇಮಾ ಪಾಟೀಲ್ ತನಗೆ ಪ್ರಬಲ ಸ್ಪರ್ಧೆಯನ್ನು ಒಡ್ಡುತ್ತಾರೆಂಬ ಭಯ ಬಸವರಾಜ ಬೊಮ್ಮಾಯಿಗೆ ಇದ್ದೇ ಇದೆ, ಆದ್ದರಿಂದ ಆತ ಕಳ್ಳ ದಾರಿ ಹಿಡಿದು "ನೀವು ಸ್ಪರ್ಧಿಸಬೇಡಿ, ನಿಮ್ಮನ್ನು ಎಮ್ಮೆಲ್ಸಿ ಮಾಡುತ್ತೇವೆ" ಎಂದೆಲ್ಲ ಓಲೈಸಲು ಪ್ರಯತ್ನಿಸಿದರಂತೆ. "ಅಲ್ಲಾರಿ, ಕೇವಲ ಆರು ಸಾವಿರ ಮತಗಳನ್ನು ಹೊಂದಿರುವ ಸಾದರರಿಗೆ 35 ಸಾವಿರ ಮತಗಳನ್ನು ಹೊಂದಿರುವ ನಾವು (ಪಂಚಮಸಾಲಿಗಳು) ಅಧಿಕಾರ ಬಿಟ್ಟುಕೊಡಬೇಕೆ?" ಎಂದು ಪ್ರೇಮಾ ಪಾಟೀಲ್ ಅವಾಜ್ ಹಾಕಿದರಂತೆ!

ಒಂದು ವೇಳೆ ಜೆಡಿಎಸ್ ಕೂಡ ಪಂಚಮಸಾಲಿ ಲಿಂಗಾಯತ ಕ್ಯಾಂಡಿಡೇಟ್‌ನ್ನು ಕಣಕ್ಕಿಳಿಸಿದರೆ ತಾನು ಗೆಲ್ಲುವುದು ಕಷ್ಟವಾಗುತ್ತದೆ ಎಂದು ಬೊಮ್ಮಾಯಿಗೆ ಗೊತ್ತು. ಆದ್ದರಿಂದ ಹೇಗಾದರೂ ಮಾಡಿ ತನ್ನ ವಿರುದ್ಧ ಒಂದು ಡಮ್ಮಿ ಕ್ಯಾಂಡಿಡೇಟನ್ನು ಹಾಕಿಸಿಕೊಳ್ಳಲು ಬೊಮ್ಮಾಯಿ ಹೆಣಗುತ್ತಿದ್ದಾರೆ. ಆ ನಿಟ್ಟಿನಲ್ಲಿ ಪಂಚಮಸಾಲಿಗಳೊಂದಿಗೆ ಗುರುತಿಸಿಕೊಂಡಿರುವ ಮಾಜಿ ಸಚಿವ ಪಿ.ಸಿ ಸಿದ್ದನಗೌಡರ್ ಮೂಲಕ ದೇವೇಗೌಡರಿಗೆ ದುಂಬಾಲು ಬಿದ್ದಿದ್ದಾರೆ. ಆದರೆ ಇತ್ತೀಚೆಗೆ ಹಾವೇರಿಯಲ್ಲಿ ನಡೆದ ಜಿಲ್ಲಾ ಜೆಡಿಎಸ್ ಸಮಾವೇಶದಲ್ಲಿ ಖುದ್ದು ದೇವೇಗೌಡರು ಬಸವರಾಜ ಬೊಮ್ಮಾಯಿ ವಿರುದ್ಧ ಬಹಿರಂಗವಾಗಿ ಕಿಡಿಕಾರಿದ್ದನ್ನು ನೋಡಿದರೆ ಬಸವರಾಜ ಬೊಮ್ಮಾಯಿಯ ತಂತ್ರ ಉಲ್ಟಾಪಲ್ಟಾ ಆಗುವ ಸಾಧ್ಯತೆಯೇ ಹೆಚ್ಚು ಅನ್ನಿಸುತ್ತಿದೆ.



ಪಿ.ಸಿ. ಸಿದ್ದನಗೌಡರ್

ಇಷ್ಟೆಲ್ಲಾ ಅಡೆತಡೆಗಳಿದ್ದರೂ ಹಠ ಬಿಡದ ಬಸವರಾಜ್ ಬೊಮ್ಮಾಯಿ ತಮ್ಮ ದಾರಿಯನ್ನು ಸುಗಮಗೊಳಿಸಿಕೊಳ್ಳಲು ನಿರಂತರವಾಗಿ ಹೆಣಗಾಡುತ್ತಲೇ ಇದ್ದಾರೆ. ಈಗಾಗಲೇ ಬಂಗಾರಪ್ಪನೊಂದಿಗೆ ಒಳ ಒಪ್ಪಂದ ಮಾಡಿಕೊಂಡಿರುವ ಈತ ಸಮಾಜವಾದಿ ಪಕ್ಷದಿಂದ ಮುಸ್ಲಿಮ್ ಅಭ್ಯರ್ಥಿಯನ್ನು ಕಣಕ್ಕಿಳಿಸುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಇನ್ನೂ ಅಂಬೆಗಾಲಿಡುತ್ತಿರುವ ಬಿಎಸ್‌ಪಿ ಕೂಡ ಮುಸ್ಲಿಮರನ್ನೇ ಕಣಕ್ಕಿಳಿಸುವ ಯೋಚನೆಯಲ್ಲಿದೆ. ಸಮಾಜವಾದಿ ಮತ್ತು ಬಿಎಸ್‌ಪಿಗಳಿಂದ ಮುಸ್ಲಿಮ್ ಅಭ್ಯರ್ಥಿಗಳು ನಿಂತರೆ ಕಾಂಗ್ರೆಸ್‌ಗೆ ಹೋಗುವ ಮುಸ್ಲಿಮ್ ಮತಗಳು ಒಡೆದು ತಮ್ಮ ದಾರಿ ಸುಲಭವಾಗುತ್ತೆ ಎಂಬುದು ಬಸವರಾಜ ಬೊಮ್ಮಾಯಿಯ ಲೆಕ್ಕಾಚಾರ. ಅಲ್ಲದೇ ಲಿಂಗಾಯತರೂ ತಮಗೆ ಓಟು ಹಾಕುವುದರಿಂದ ತಾನೇ ಗೆಲ್ಲುತ್ತೇನೆಂಬ ಹುಮ್ಮಸ್ಸಿನಲ್ಲಿ ಅವರಿದ್ದಾರೆ.

ಪಂಚಮಸಾಲಿಗಳನ್ನು ಹೇಗಾದರೂ ಓಲೈಸಿಕೊಳ್ಳಬೇಕೆಂಬ ಆತುರದಲ್ಲಿರುವ ಬಸವರಾಜ ಬೊಮ್ಮಾಯಿ ಪಂಚಮಸಾಲಿ ನಾಯಕರನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡು ಶಿಗ್ಗಾಂವಿ ಕ್ಷೇತ್ರದಾದ್ಯಂತ ಪ್ರವಾಸ ಕೈಗೊಂಡಿದ್ದಾರೆ. ಬಸವರಾಜ ಬೊಮ್ಮಾಯಿಯ ತಂತ್ರವರಿತ ಕೆಲವು ಪಂಚಮಸಾಲಿ ನಾಯಕರು ತಮ್ಮ ನವ ಕುಲಗುರುಗಳಲ್ಲಿ ಈಗಾಗಲೇ ಈ ವಿಚಾರ ತಿಳಿಸಿ ಕಿವಿಯೂದಿದ್ದಾರೆ. ಪರಿಣಾಮವಾಗಿ, ಈ ಬಾರಿಯ ಚುನಾವಣೆಯಲ್ಲಿ ಎಲ್ಲ ಪಂಚಮಸಾಲಿ ಸಮುದಾಯದವರು ಕಾಂಗ್ರೆಸ್ ಅಭ್ಯರ್ಥಿ ಅಜ್ಜಂಪೀರ್ ಖಾದ್ರಿಗೆ ಮತ ಹಾಕುವಂತೆ ದಾವಣಗೆರೆಯ ಪಂಚಮಸಾಲಿ ಗುರು ಜಯಮೃತ್ಯುಂಜಯ ಸ್ವಾಮಿಗಳು ಒಳಗೊಳಗೇ ಫರ್ಮಾನು ಹೊರಡಿಸಿದ್ದಾರೆ.

ಸೂಕ್ಷ್ಮವಾಗಿ ಅವಲೋಕಿಸಿದರೆ, ಒಂದೆಡೆ ಮುಸ್ಲಿಮ್ ಮತಗಳು ಗ್ಯಾರಂಟಿಯಿರುವ ಹಾಗೂ ಜಯಮೃತ್ಯುಂಜಯ ಸ್ವಾಮಿಯ ಆಶೀರ್ವಾದವಿರುವ ಕಾಂಗ್ರೆಸ್‌ನ ಅಜ್ಜಂಪೀರ್ ಖಾದ್ರಿಯ ಕಡೆಗೇ ಶಿಗ್ಗಾಂವಿ ಒಲಿಯುವ ಸಾಧ್ಯತೆಗಳು ಕಾಣುತ್ತಿವೆ. ಹಾಗೇನಾದರೂ ಆದರೆ, ಬಸವರಾಜ ಬೊಮ್ಮಾಯಿ ಮತ್ತು ಪಿ.ಸಿ. ಸಿದ್ದನಗೌಡರ್ ಇಬ್ಬರೂ ಮೂಲೆ ಸೇರುವುದು ಖಚಿತ.

■ ವರದಿಗಾರ

ಚುನಾವಣೆ 2008

ಜನತೆಯ ಪ್ರಣಾಳಿಕೆ

ಶಿಕ್ಷಣದ ರಾಷ್ಟ್ರೀಕರಣಕ್ಕೆ ಆಗ್ರಹಿಸೋಣ

■ ಡಾ. ವಿ.ಎಸ್. ಶ್ರೀಧರ

ಮೇ-ಜೂನ್ ತಿಂಗಳು ಬಂತೆಂದರೆ ಪೋಷಕರಲ್ಲಿ ತಳಮಳ ಶುರುವಾಗುತ್ತದೆ. ತಮ್ಮ ಮಕ್ಕಳ ಯೋಗ್ಯ ಶಿಕ್ಷಣಕ್ಕಾಗಿ ಖಾಸಗಿ ಶಾಲಾ-ಕಾಲೇಜುಗಳ ಆಡಳಿತ ಮಂಡಳಿಗಳ ಮುಂದೆ ದಿನಗಟ್ಟಲೆ ಕ್ಯೂ ನಿಂತು, ಎಲ್ಲಿಂದಲೋ ಕಷ್ಟಪಟ್ಟು ಸಂಪಾದಿಸಿದ ಶಿಫಾರಸ್ಸು ಪತ್ರಗಳನ್ನು ಮುಂದೊಡ್ಡಿ ದೈನೇಸಿಯಾಗಿ ಬಗೆಬಗೆಯಾಗಿ ಪ್ರಾರ್ಥಿಸಿಕೊಂಡರೂ ಆಡಳಿತ ಮಂಡಳಿಯವರು ಪ್ರಸನ್ನರಾಗುವುದಿಲ್ಲ. ಎಷ್ಟೇ ಅಂಕ, ಶಿಫಾರಸ್ಸುಗಳಿದ್ದರೂ ಡೊನೇಷನ್ ಇದ್ದರೂ, ಸೀಟು ಸಿಗುವುದಿಲ್ಲ. ಎಲ್.ಕೆ.ಜಿ.ಯ ಸೀಟುಗಳಂತೂ ಡಿಸೆಂಬರ್ ಹೊತ್ತಿಗೇ ಖಾಲಿಯಾಗಿರುತ್ತವೆ. ಒಂದು ಕಾಲದಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಅಷ್ಟೇನೂ ಹಣ ಖರ್ಚಾಗುತ್ತಿರಲಿಲ್ಲ. ಆದರೆ ಇಂದು ವಿಶ್ವವಿದ್ಯಾಲಯದಲ್ಲಿ ಓದಿಸುವುದಕ್ಕಿಂತಲೂ, ಪ್ರೈಮರಿ ಶಾಲೆಗಳೇ ಹೆಚ್ಚು ದುಬಾರಿಯಾಗಿ ಬಿಟ್ಟಿವೆ. ಶಿಕ್ಷಣದ ಈ ಪಡಿಪಾಟಲು ಎಲ್ಲರಿಗೂ ಗೊತ್ತಿರುವ ವಿಷಯವೇ. ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ಎಲ್ಲ ಪೋಷಕರಿಗೂ ಸಹಜವಾಗಿಯೇ ಇರುವ ಆತಂಕವನ್ನೇ ಬಂಡವಾಳ ಮಾಡಿಕೊಂಡಿರುವ ಖಾಸಗಿ ವಿದ್ಯಾ ಸಂಸ್ಥೆಗಳು ಪೋಷಕರನ್ನು ನಾನಾ ವಿಧವಾಗಿ ಸುಲಿಯುತ್ತಿರುವುದನ್ನು ನೋಡಿಯೂ ನಮ್ಮ ಆಡಳಿತವರ್ಗ, ರಾಜಕೀಯ ಪಕ್ಷಗಳು ಸುಮ್ಮನೇ ಇರುವುದು ಏಕೆ ಎನ್ನುವ ಪ್ರಶ್ನೆಗೆ ಅನೇಕ ಸಿದ್ಧ ಉತ್ತರಗಳನ್ನು ನಾವು ಕಂಡಿದ್ದೇವೆ. ಅದರಲ್ಲಿ ಮುಖ್ಯವಾದದ್ದು ಶಿಕ್ಷಣ ಸಂಸ್ಥೆಗಳನ್ನು ಹದ್ದುಬಸ್ತಿನಲ್ಲಿಡುವುದಕ್ಕೆ ಬೇಕಾದ ರಾಜಕೀಯ ಇಚ್ಛಾಶಕ್ತಿ ಇಲ್ಲ ಎನ್ನುವ ವಿವರಣೆ. ಇನ್ನೊಂದು ಎಲ್ಲ ಪಕ್ಷಗಳ ರಾಜಕೀಯ ಮುಖಂಡರೂ ತಮ್ಮ ಮಾನವೀಯ ಮುಖ ಪ್ರದರ್ಶಿಸಲು ಒಂದಲ್ಲಾ ಒಂದು ರೀತಿಯ ಶಿಕ್ಷಣ ಸಂಸ್ಥೆಗಳನ್ನು ತೆರೆದು ತಾವೂ ಜನಸೇವೆ, ರಾಷ್ಟ್ರಸೇವೆ ಮಾಡುತ್ತಿದ್ದೇವೆ ಎಂದುಕೊಂಡಿರುವುದು. ಪ್ರೈಮರಿಯಿಂದ ಹಿಡಿದು ಇಂಜಿನಿಯರಿಂಗ್ ಮೆಡಿಕಲ್ ಕಾಲೇಜುಗಳವರೆಗೂ ಈ ದಂಧೆ ವ್ಯಾಪಿಸಿರುವುದರಿಂದ ಮತ್ತು ಶಾಸಕರೇ ಈ ಸಂಸ್ಥೆಗಳ ಮುಖ್ಯಸ್ಥರಾಗಿರುವುದರಿಂದ ತಮ್ಮ ಸ್ವಂತ ಹಿತವನ್ನೇ ಬಲಿಕೊಟ್ಟುಕೊಳ್ಳುವ ಮೂರ್ಖ ಕೆಲಸವನ್ನು ಯಾವ ಶಾಸಕರೂ ಮಾಡಲಾರರು. ರಾಜಕೀಯ ಇಚ್ಛಾಶಕ್ತಿ ಸಾಧ್ಯವಾಗದೇ ಇರುವುದಕ್ಕೆ ಶಿಕ್ಷಣದ ಸಮಗ್ರ ಖಾಸಗೀಕರಣವೇ ಕಾರಣ.

ನಮ್ಮಲ್ಲಿ ಜಾಗತೀಕರಣದ ಪ್ರಕ್ರಿಯೆ ಪ್ರಾರಂಭವಾಗುವುದಕ್ಕಿಂತ ಮುಂಚೆಯೇ ಬದುಕಿನ ಮೂಲ ಅಗತ್ಯಗಳಾದ ಶಿಕ್ಷಣ, ಆರೋಗ್ಯ, ವಸತಿ ಇವು ಎಂದೋ ಖಾಸಗೀಕರಣಗೊಂಡವು. ಸಾಮಾಜಿಕ ಸೇವಾದೃಷ್ಟಿಯಿಂದ, ರಾಷ್ಟ್ರೀಯತೆಯ ಉತ್ಸಾಹದಿಂದ ಕಟ್ಟಲಾದ ಅನೇಕ ವಿದ್ಯಾಸಂಸ್ಥೆಗಳು ಇಂದು ಪಾಳುಬಿದ್ದ ಸ್ಮಾರಕಗಳಂತಾಗಿ ಬಿಟ್ಟಿವೆ ಅಥವಾ ಪೂರ್ಣವಾಗಿ ಬಂಡವಾಳ-ಲಾಭ ಸೂತ್ರದ ಮೇಲೆ ಆಧುನಿಕಗೊಂಡಿವೆ. ಒಂದು ಕಾಲದಲ್ಲಿ ಉತ್ಕೃಷ್ಟ ಮಾದರಿಗಳಂತಿದ್ದ ಸರ್ಕಾರಿ ಶಾಲಾ ಕಾಲೇಜುಗಳು ಇಂದು ಗಂಜಿ ಕೇಂದ್ರಗಳಾಗಿ ಮಾರ್ಪಟ್ಟು, ಕೇವಲ ನಿರ್ಗತಿಕರು ಮಾತ್ರ ಅವಲಂಬಿಸಬೇಕಾದ ಸ್ಥಿತಿ ಏರ್ಪಟ್ಟಿದೆ. ಶಿಕ್ಷಣದ ಖಾಸಗೀಕರಣದ ವಿಷಯದಲ್ಲಿ ಕರ್ನಾಟಕದ್ದೇ ಇಂದು ಅಗ್ರಸ್ಥಾನ, ದೇಶದ ಇತರ ರಾಜ್ಯಗಳಿಗೆ ಮಾದರಿ.

ಈ ಪರಿಸ್ಥಿತಿ ಯಾಕೆ ಉದ್ಭವವಾಯಿತು? ಇದನ್ನು ನಿಭಾಯಿಸಲು ಅಂದರೆ, ಶಿಕ್ಷಣವನ್ನು ಖಾಸಗೀಕರಣದ ಕಪಿಮುಷ್ಟಿಯಿಂದ ಪಾರು ಮಾಡಲು ಸಾಧ್ಯವೇ ಇಲ್ಲವೇ? ಜಾಗತೀಕರಣದ ಈ ಯುಗದಲ್ಲಿ ಎಲ್ಲವೂ ಖಾಸಗೀಕರಣ, ಮಾರುಕಟ್ಟೆಯ ನಿಯಮಗಳತ್ತಲೇ ಜಾರುತ್ತಿರುವಾಗ ಶಿಕ್ಷಣ ಕ್ಷೇತ್ರದ ಭವಿಷ್ಯ ಏನಾಗಬಹುದು?

ಇವೆಲ್ಲಾ ಪ್ರಶ್ನೆಗಳನ್ನು ಚುನಾವಣೆಯ ಈ ಸಂದರ್ಭದಲ್ಲಿ ಮತ್ತೊಮ್ಮೆ ಕೇಳಿಕೊಳ್ಳಬೇಕಾಗಿದೆ. ನಮ್ಮ ಸಂವಿಧಾನದಲ್ಲಿ ಶಿಕ್ಷಣವನ್ನು ಮೂಲಭೂತ ಹಕ್ಕು ಎಂದೇ ಪರಿಗಣಿಸಲಾಗಿದೆ. ಇದು ಸಾಧ್ಯವಾಗಬೇಕಾದರೆ ಎಲ್ಲರಿಗೂ ಪ್ರಾಥಮಿಕ ಶಿಕ್ಷಣ ಉಚಿತವಾಗಿ ಸಿಗಬೇಕು; ಭಾರತದ ಪ್ರತಿ ಪೋಷಕರಿಗೂ ತಮ್ಮ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ದೊರಕಿಸುವ ಸಮಾನ ಅವಕಾಶವಿರಬೇಕು. ಶಿಕ್ಷಣ ಮೂಲಭೂತ ಹಕ್ಕು, ಎಂದರೆ, ಅದು ಕೇವಲ ಉಚಿತವಾಗಿದ್ದರೆ ಸಾಲದು; ಕೇವಲ ಸಾಕ್ಷರತೆಗೆ ಸೀಮಿತವಾಗಿದ್ದರೆ ಸಾಲದು. ಮೂಲಭೂತ ಹಕ್ಕು ಎಂದರೆ ಎಲ್ಲರಿಗೂ ಸಮವಾದ ಅವಕಾಶ; ಸಮಾನವಾದ ಅವಕಾಶಗಳ ಬಳಕೆಗೆ ಮುಕ್ತವಾಗಿರುವುದು.

ಆದರೆ ಇಂದು ಪ್ರಾಥಮಿಕ ಹಂತದಿಂದಲೇ ಶಿಕ್ಷಣ ಖಾಸಗೀಕರಣಗೊಂಡಿರುವುದರಿಂದ, ಎಳೆ ವಯಸ್ಸಿನಿಂದಲೇ ಮಕ್ಕಳು ಅಸಮಾನತೆಗೆ, ಸಾಮಾಜಿಕ ಭೇದಗಳಿಗೆ ಬಲಿಯಾಗುತ್ತಿದ್ದಾರೆ. ಬಡವರೆಲ್ಲ ಸರ್ಕಾರಿ ಶಾಲೆ, ಸ್ವಲ್ಪಮಟ್ಟಿನ ಹಣಕಾಸಿನ ಸೌಲಭ್ಯ ಹೊಂದಿದ್ದವರೆಲ್ಲಾ ಖಾಸಗಿ ಶಾಲೆಗಳಿಗೆ ಮಕ್ಕಳನ್ನು ಕಳುಹಿಸುವ ಅನಿವಾರ್ಯತೆಯನ್ನು ಈ ಖಾಸಗೀಕರಣ ಸೃಷ್ಟಿಸಿದೆ. ಮೀಸಲಾತಿಯೆಂದ ಕೂಡಲೇ ಸಮಾನತೆ ಇರಬೇಕು ಎಂದು ಬೊಬ್ಬೆ ಇಡುವ ಮಧ್ಯಮ ವರ್ಗ, ಮೇಲ್ಜಾತಿ ಜನ, ಖಾಸಗೀಕರಣ ಸೃಷ್ಟಿಸಿರುವ ಅಘೋಷಿತ ಮೀಸಲಾತಿ ಬಗ್ಗೆ ಧ್ವನಿ ಎತ್ತುವುದೇ ಇಲ್ಲ. ಬಹುತೇಕ ಖಾಸಗಿ ಶಾಲಾ ಕಾಲೇಜುಗಳಿಗೂ, ಸರ್ಕಾರಿ ಶಿಕ್ಷಣ ಸಂಸ್ಥೆಗಳಿಗೂ ಅಂಥ ವ್ಯತ್ಯಾಸವಿರುವುದಿಲ್ಲ. ಹಾಗೆಯೇ

ಪ್ರಾಥಮಿಕ ಶಿಕ್ಷಣದಿಂದಲೇ ಸೃಷ್ಟಿಯಾಗುವ ಅಸಮತೋಲನವನ್ನು ತಪ್ಪಿಸಲು ಇರುವ ಪರ್ಯಾಯ ಮಾರ್ಗ ಒಂದೇ; ಅದು ಇಡೀ ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಕರಣ ಅಂದರೆ ರಾಜ್ಯದ ಎಲ್ಲ ಕಡೆಯೂ ಒಂದೇ ಪಠ್ಯಕ್ರಮ ಇರುವ, ಒಂದೇ ರೀತಿಯ ಸೌಲಭ್ಯಗಳಿರುವ, ಉಚಿತ ಪ್ರವೇಶವಿರುವ ವ್ಯವಸ್ಥೆ. ಇದು ಅಸಾಧ್ಯವಾದ ಆದರ್ಶವಲ್ಲ, ಕನಸಿನ ಮಾತಲ್ಲ; ರಾಜ್ಯ ಸರ್ಕಾರ ಮನಸ್ಸು ಮಾಡಿದರೆ ತಕ್ಷಣವೇ ಸಾಧ್ಯವಾಗುವಂಥದ್ದು.

ಖಾಸಗೀ ಶಾಲೆಗಳಿಗೆ ಹೋಲಿಸಿದರೆ ಬೆರಳೆಣಿಕೆಯಷ್ಟು ಕಡಿಮೆ ಸಂಖ್ಯೆಯಲ್ಲಿರುವ ಸರ್ಕಾರಿ ಶಾಲೆಗಳ ಉನ್ನತೀಕರಣದಿಂದ ಈ ಸಮಸ್ಯೆ ಬಗೆಹರಿಯುವುದಿಲ್ಲ. ಎಳೆವಯಸ್ಸಿನಿಂದಲೇ ಕೀಳರಿಮೆಯನ್ನು ಬೆಳೆಸಿ, ಮೇಲು-ಕೀಳು ಎಂಬ ಭಾವನೆಯನ್ನು ಬೆಳೆಸುವ ಸದ್ಯದ ಶಿಕ್ಷಣ ಪದ್ಧತಿ ಕೇವಲ ಆರ್ಥಿಕ ಅಸಮಾನತೆಯ ಪ್ರಶ್ನೆಯಾಗಿ ಮಾತ್ರ ಉಳಿಯುವುದಿಲ್ಲ. ಇದು ಮುಂದುವರೆದು ಮಕ್ಕಳು ಮುಂದೆ ಬೆಳೆಸಿಕೊಳ್ಳುವ ಸಂವೇದನೆ, ಚಿಂತನಾಕ್ರಮ, ಲೋಕದೃಷ್ಟಿಯ ಮೇಲೂ ಈ ತಾರತಮ್ಯ ಅಗಾಧ ಪ್ರಭಾವ ಬೀರುವುದರಿಂದ, ಪ್ರಾಥಮಿಕ ಶಿಕ್ಷಣದ ಪ್ರಶ್ನೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕಾದ ಅವಶ್ಯಕತೆ ಇದೆ.

ಪ್ರಾಥಮಿಕ ಶಿಕ್ಷಣದಿಂದಲೇ ಸೃಷ್ಟಿಯಾಗುವ ಅಸಮತೋಲನವನ್ನು ತಪ್ಪಿಸಲು ಇರುವ ಪರ್ಯಾಯ ಮಾರ್ಗ ಒಂದೇ; ಅದು ಇಡೀ ಪ್ರಾಥಮಿಕ ಶಿಕ್ಷಣದ ರಾಷ್ಟ್ರೀಕರಣ ಅಂದರೆ ರಾಜ್ಯದ ಎಲ್ಲ ಕಡೆಯೂ ಒಂದೇ ಪಠ್ಯಕ್ರಮ ಇರುವ, ಒಂದೇ ರೀತಿಯ ಸೌಲಭ್ಯಗಳಿರುವ, ಉಚಿತ ಪ್ರವೇಶವಿರುವ ವ್ಯವಸ್ಥೆ. ಇದು ಅಸಾಧ್ಯವಾದ ಆದರ್ಶದ, ಕನಸಿನ ಮಾತಲ್ಲ. ರಾಜ್ಯ ಸರ್ಕಾರ ಮನಸ್ಸು ಮಾಡಿದರೆ ತಕ್ಷಣವೇ ಸಾಧ್ಯವಾಗುವಂಥದ್ದು. ಯಾವ ರಾಜಿಯೂ ಇಲ್ಲದೇ ಇಂಥದೊಂದು ಮುನ್ನೋಲವನ್ನು ತೆಗೆದುಕೊಳ್ಳುವಂತೆ ಮತದಾರರು ರಾಜಕಾರಣಿಗಳ ಮೇಲೆ ಒತ್ತಡ ತರಬೇಕು. ಒಂದರಿಂದ ಹತ್ತನೇ ತರಗತಿಯವರೆಗೆ ರಾಜ್ಯದ ಎಲ್ಲಾ ಶಾಲೆಗಳ ಸಂಪೂರ್ಣ ರಾಷ್ಟ್ರೀಕರಣ ಕುರಿತಂತೆ ಸಮಾನವಾದ ಏಕರೂಪ ಪಠ್ಯಕ್ರಮವನ್ನು ಜಾರಿಗೆ ತರುವುದರ ಬಗ್ಗೆ ಮತವನ್ನು ಯಾಚಿಸಲು ಬರುವವರ ನಿಲುವು ಏನು ಎಂಬುದನ್ನು ಚುನಾವಣಾ ಅಭ್ಯರ್ಥಿಗಳು ಪ್ರಕಟಿಸಬೇಕು.

ಪ್ರಾಥಮಿಕ ಹಾಗೂ ಪ್ರೌಢಶಾಲೆಗಳ ರಾಷ್ಟ್ರೀಕರಣವೆಂದರೆ,

1) ಖಾಸಗೀ ಆಡಳಿತ ಮಂಡಳಿಯ ನಿಯಂತ್ರಣದಿಂದ ಈ ಶಾಲೆಗಳನ್ನು ತಪ್ಪಿಸಿ, ಅವುಗಳಿಗೆ ಪ್ರವೇಶದ ಅಧಿಕಾರವನ್ನು ಸರ್ಕಾರವೇ ವಹಿಸಿಕೊಳ್ಳುವುದು.
2) ನೆರೆಹೊರೆಯಲ್ಲಿ ವಾಸಿಸುವ ಮಕ್ಕಳಿಗೆ ಮಾತ್ರ ಪ್ರವೇಶವನ್ನು ಸೀಮಿತಗೊಳಿಸುವುದು.
3) ಈಗಿರುವ ಪಠ್ಯಕ್ರಮವನ್ನು ಬದಲಾಯಿಸಿ, ಭಾಷಾಬೋಧನೆಯೂ ಸೇರಿದಂತೆ ಎಲ್ಲ ವಿಷಯಗಳ ಬೋಧನಾ ಕ್ರಮದ ಸುಧಾರಣೆಗೆ ಬೇಕಾದ ಕ್ರಮವನ್ನು ಹಂತಹಂತವಾಗಿ ಜಾರಿಗೊಳಿಸುವುದು.
4) ಒಂದರಿಂದ ಹತ್ತನೇ ತರಗತಿಯ ಶಿಕ್ಷಣದ ಸುಧಾರಣೆ, ಶಿಕ್ಷಕರ ತರಬೇತಿ, ಉಸ್ತುವಾರಿಯಂಥ ಕಾರ್ಯಕ್ರಮಗಳಿಗೆ ಮೀಸಲಾದ, ಪ್ರಾಥಮಿಕ ಶಿಕ್ಷಣ ಆಯೋಗವೊಂದನ್ನು ರಚಿಸುವುದು.
5) ಶಿಕ್ಷಕರಿಗೇ ಬೇರೆಯಾದ ಸಂಬಳ ಸಾರಿಗೆ ನೀತಿಯನ್ನು ಜಾರಿಗೊಳಿಸುವುದು.
6) ಎಲ್ಲ ಶಿಕ್ಷಣ ಸಂಸ್ಥೆಗಳನ್ನು ಸರ್ಕಾರವೇ ವಹಿಸಿಕೊಳ್ಳುವುದರಿಂದ ಅನುದಾನ, ಅನುದಾನರಹಿತ ಎಂಬ ವ್ಯತ್ಯಾಸವನ್ನು ಸಂಪೂರ್ಣವಾಗಿ ಅಳಿಸಿಹಾಕುವುದು.

ಇದಕ್ಕೆಲ್ಲಾ ಹಣಕಾಸಿನ ವ್ಯವಸ್ಥೆ ಹೇಗೆ ಎಂಬ ಪ್ರಶ್ನೆ ಮೂಡುವುದು ಸಹಜ. ಶಿಕ್ಷಣದ ಹೊಣೆ- ಅದರಲ್ಲೂ ಪ್ರಾಥಮಿಕ ಹಂತದ್ದು-ರಾಜ್ಯ ಸರ್ಕಾರದ್ದೇ ಆದರೂ, ಕೇಂದ್ರ ಸರ್ಕಾರ ತನ್ನ ವಾರ್ಷಿಕ ಬಜೆಟ್‌ನಲ್ಲಿ ಶಿಕ್ಷಣಕ್ಕಾಗಿ ಮೀಸಲಿಡುವ ಹಣ ಸ್ವಾತಂತ್ರ್ಯ ಬಂದ ದಿನದಿಂದಲೂ ಶೇ. 3ಕ್ಕಿಂತಲೂ ಹೆಚ್ಚಾಗಿಲ್ಲ. ಇದು ಕನಿಷ್ಠ ಶೇಕಡ 6 ಆದರೂ ಇರಬೇಕೆಂದು ಎಲ್ಲ ರಾಷ್ಟ್ರೀಯ ಶಿಕ್ಷಣದ ಆಯೋಗಗಳೂ ಒತ್ತಾಯಿಸುತ್ತಲೇ ಬಂದಿವೆ. 50ರ ದಶಕದಿಂದಲೇ ಶೇಕಡ 6ರಷ್ಟು ಹಣವನ್ನು ಶಿಕ್ಷಣಕ್ಕೆ ಮೀಸಲಾಗಿಟ್ಟಿದ್ದರೆ, ಇಂದಿನ ಪರಿಸ್ಥಿತಿ ಬರುತ್ತಲೇ ಇರಲಿಲ್ಲ. ಇಂದಿನ ಹಣದುಬ್ಬರದ ದಿನಗಳಲ್ಲಿ ಇದು ಶೇಕಡ 6ಕ್ಕಿಂತಲೂ ಹೆಚ್ಚಾಗಬೇಕಿತ್ತು. ಶಿಕ್ಷಣಕ್ಕೆ ಹೋಲಿಸಿದರೆ ನಮ್ಮ ದೇಶದ ರಕ್ಷಣಾ ಬಜೆಟ್ ಪ್ರತಿವರ್ಷವೂ ಏರುತ್ತಾ ಹೋಗಿದೆ. ರಾಷ್ಟ್ರರಕ್ಷಣೆಯಷ್ಟೇ ಶಿಕ್ಷಣವೂ ಒಂದು ದೇಶದ ಆಂತರಿಕ ರಕ್ಷಣೆಗೆ ಮುಖ್ಯವೆಂದು ಯಾವ ರಾಜಕೀಯ ಪಕ್ಷಗಳಿಗೂ ಅನಿಸಿಲ್ಲದೇ ಇರುವುದು ಕೇವಲ ಸೋಜಿಗದ ಮಾತಲ್ಲ. ಹಣದ ಕೊರತೆಯನ್ನು ಒಂದು ನೆಪವಾಗಿ ಮಾತ್ರ ಬಳಸುತ್ತ ಶೋಷಿತ ಜನರಿಂದ ಶಿಕ್ಷಣವನ್ನು ದೂರವಿಟ್ಟಿರುವುದಕ್ಕೂ, ಚುನಾವಣೆಗಳಲ್ಲಿ ಹಣ ಹೆಂಡದಿಂದ ಮತಗಳನ್ನು ಕೊಂಡುಕೊಳ್ಳುತ್ತಿರುವ ಇಂದಿನ 'ಪ್ರಜಾಪ್ರಭುತ್ವ' ಅವನತಿಗೂ ನೇರ ಸಂಬಂಧವಿದೆ ಎನ್ನುವುದನ್ನು ನಾವೆಲ್ಲ ಮನಗಾಣಬೇಕಾಗಿದೆ.

ಇಂದು ಕರ್ನಾಟಕದಲ್ಲಿ ಅಕ್ರಮ ಗಣಿಗಾರಿಕೆಯಿಂದ ಸರ್ಕಾರಕ್ಕೆ ಉಂಟಾಗುತ್ತಿರುವ ನಷ್ಟವನ್ನು ನಿಲ್ಲಿಸಿದರೆ, ಇಡೀ ಪ್ರಾಥಮಿಕ ಶಾಲೆಗಳನ್ನು ರಾಷ್ಟ್ರೀಕರಿಸಿ, ಒಳ್ಳೆಯ ಶಿಕ್ಷಣವನ್ನು ನೀಡಲು ಬೇಕಾದ ಹಣ ಪೂರೈಸಲು ಸಾಧ್ಯ. ಕೇವಲ ಬಿಸಿ ಊಟ, ಸೈಕಲ್ ವಿತರಣೆ ಇತ್ಯಾದಿ ಜನಪ್ರಿಯ ಸುಧಾರಣೆಗಳು ಶಿಕ್ಷಣ ಎದುರಿಸುತ್ತಿರುವ ಮೂಲಭೂತ ಬಿಕ್ಕಟ್ಟನ್ನು ಪರಿಹರಿಸಲಾರವು. ಇಂದು ಖಾಸಗೀ ಶಿಕ್ಷಣ ಸಂಸ್ಥೆಗಳು ಹೊಂದಿರುವ ಜಾಗ, ಕಟ್ಟಡಗಳು ಜನರ ದುಡ್ಡಿನಿಂದಲೇ ಸಂಪಾದಿಸಿದ್ದರಿಂದ ಅವುಗಳನ್ನು ಖಾಸಗಿ ಆಸ್ತಿಗಳೆಂದು ಪರಿಗಣಿಸಲು ಸಾಧ್ಯವಿಲ್ಲ. ಹಾಗೆಯೇ ಖಾಸಗೀ ಶಿಕ್ಷಣ ಸಂಸ್ಥೆಗಳು ಇರುವವರೆಗೆ ಸಮಾನ ಶಿಕ್ಷಣವೂ ಸಹ ಸಾಧ್ಯವಾಗುವುದಿಲ್ಲ.

******





ಉನ್ನತ ಶಿಕ್ಷಣವಂತೂ ಇನ್ನೂ ದೊಡ್ಡ ಬಿಕ್ಕಟ್ಟಿನಲ್ಲಿದೆ. ಯಾವಾಗ ವಿಶ್ವಬ್ಯಾಂಕ್ ಉನ್ನತ ಶಿಕ್ಷಣವನ್ನು ನಾನ್‌ಮೆರಿಟ್ ವಲಯಕ್ಕೆ ಸೇರಿದ್ದು ಎಂದು ಘೋಷಿಸಿತೋ, ಅಂದಿನಿಂದ ವಿಶ್ವ ವಾಣಿಜ್ಯ ಸಂಸ್ಥೆ ವಿಶ್ವ ಬ್ಯಾಂಕುಗಳು ಉನ್ನತ ಶಿಕ್ಷಣದ ಕ್ಷೇತ್ರದಿಂದ ಸರ್ಕಾರ ಹಿಂತೆಗೆಯಲು ಒತ್ತಡ ಹಾಕತೊಡಗಿದವು. ಇಂಥದೊಂದು ಅವಕಾಶಕ್ಕಾಗಿಯೇ ಕಾದಿದ್ದ ಹಾಗೆ, ಸರ್ಕಾರ ಉನ್ನತ ಶಿಕ್ಷಣದ ಜವಾಬ್ದಾರಿಯನ್ನು ಖಾಸಗಿ ವಲಯಕ್ಕೆ ಬಿಟ್ಟುಕೊಟ್ಟಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಇದು ಕಾಲೇಜುಗಳಿಗೆ ಅನುದಾನವನ್ನು ಹಿಂತೆಗೆದುಕೊಳ್ಳುವ ಪ್ರಯತ್ನದಿಂದ ಪ್ರಾರಂಭವಾಯಿತು. 70ರ ದಶಕದಲ್ಲಿ ಅಧ್ಯಾಪಕರ ಹೋರಾಟದ ಫಲವಾಗಿ ನೂರು ಪರ್ಸೆಂಟ್ ಅನುದಾನವನ್ನು ಕೊಡಲಾಯಿತಾದರೂ 90ರ ನಂತರ ಪ್ರಾರಂಭವಾದ ಕಾಲೇಜುಗಳಿಗೆ ಅನುದಾನವನ್ನು ನಿರಾಕರಿಸಲಾಯಿತು. ಕಡೆಗೆ ಅನುದಾನವೆಂಬುದು ಶಾಶ್ವತ ಯೋಜನೆ ಏನಲ್ಲವೆಂಬ ವಾದ ಮುಂದಿಟ್ಟ ಸರ್ಕಾರ, ಶೇ 25 ರಷ್ಟು ಅನುದಾನ ಕಡಿತವನ್ನು ಘೋಷಿಸಿತು. ಇದಕ್ಕೆ ಎದ್ದ ಪ್ರತಿಭಟನೆಯಿಂದ ಆ ನೀತಿಯನ್ನು ಸರ್ಕಾರ ಆ ಕ್ಷಣಕ್ಕೆ ಕೈಬಿಟ್ಟಿತ್ತಾದರೂ ಶಾಶ್ವತವಾಗಿ ಅನುದಾನವನ್ನು ನಿಲ್ಲಿಸುವ ತನ್ನ ಯೋಜನೆಯನ್ನು ಸದ್ದಿಲ್ಲದೆ ಅಘೋಷಿತವಾಗಿ ಮುಂದುವರೆಸಿದೆ.

ಈಗ ಕರ್ನಾಟಕದ ಅನುದಾನ ಪಡೆಯುತ್ತಿರುವ ಕಾಲೇಜುಗಳಲ್ಲಿ ಖಾಲಿಯಾದ ಯಾವ ಹುದ್ದೆಯನ್ನು ಸರ್ಕಾರ ತುಂಬಲು ಅವಕಾಶ ನೀಡಿಲ್ಲ. ಹಾಗೆಯೇ ಹೊಸದಾಗಿ ಪ್ರಾರಂಭಿಸಲಾದ ಯಾವ ಕೋರ್ಸ್‌ಗಳಿಗೂ ಅನುದಾನವನ್ನು ಪಡೆಯುವುದಿಲ್ಲವೆಂಬ ಷರತ್ತನ್ನು ವಿಧಿಸಿದ್ದರಿಂದ ಇಂದು ಒಂದೇ ಕಾಲೇಜಿನಲ್ಲಿ ಅನುದಾನಸಹಿತ ಹಾಗೂ ಅನುದಾನರಹಿತ ಎಂಬ ಎರಡು ರೀತಿಯ ಕೋರ್ಸುಗಳು ನಡೆಯುತ್ತಿವೆ. ಇಂಥ ಅನುದಾನರಹಿತ ಕೋರ್ಸ್‌ಗಳು ಖಾಸಗೀ ಆಡಳಿತ ಮಂಡಳಿಗೆ ನಿರಂತರವಾಗಿ ಹಣ ತರುವಂಥ ಕಾಮಧೇನುಗಳಾಗಿವೆ. ಸರ್ಕಾರದ ಯಾವ ಕಟ್ಟುಪಾಡುಗಳೂ ಅನ್ವಯವಾಗದ ಈ ಕೋರ್ಸುಗಳಿಗೆ ಯಾವ ಮೀಸಲಾತಿ ನಿರ್ಬಂಧವೂ ಇಲ್ಲ; ಹಾಗಾಗಿ ಸಂಪೂರ್ಣ ಡೊನೇಷನ್‌ನಿಂದ ಇವು ನಡೆಯುತ್ತವೆ. ಅನುದಾನ ಪಡೆಯದೇ ಇರುವ ಕಾಲೇಜುಗಳೇ ಇಂದು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ, ಉನ್ನತ ಶಿಕ್ಷಣದ ಖಾಸಗೀಕರಣ ಸಂಪೂರ್ಣ ಯಶಸ್ವಿಯಾಗಿದೆ. ಇಂದು ಒಂದೇ ಕಾಲೇಜನ್ನು, ಒಂದೇ ಕೆಲಸಕ್ಕೆ ಕೆಲವರು ಮೂವತ್ತು ಸಾವಿರ ಸಂಬಳ ಪಡೆದರೆ, ಹೆಚ್ಚಿನ ಸಂಖ್ಯೆಯ (ಖಾಸಗಿಯಾಗಿ ನೇಮಕವಾಗಿರುವ) ಅಧ್ಯಾಪಕರು 10 ಸಾವಿರ ಸಂಬಳ ಪಡೆದರೆ ಹೆಚ್ಚು. ಅನುದಾನ ಪಡೆಯುತ್ತಿರುವ ಈ ಅಲ್ಪಸಂಖ್ಯಾತ ಅಧ್ಯಾಪಕರ ಸಂಖ್ಯೆ ನಿವೃತ್ತಿಯಿಂದಾಗಿ ಪ್ರತಿವರ್ಷವೂ ಕ್ಷೀಣಿಸುತ್ತಿದೆ. ಇದು ಹೀಗೇ ಮುಂದುವರೆದರೆ ಇನ್ನೊಂದು ದಶಕದಲ್ಲಿ ಪೂರ್ಣ ವೇತನ ಪಡೆಯುವ ಅಧ್ಯಾಪಕರೇ ಶಾಶ್ವತವಾಗಿ ಕಣ್ಮರೆಯಾಗುತ್ತಾರೆ. ಅಲ್ಲಿಗೆ ಸರ್ಕಾರ ಉನ್ನತ ಶಿಕ್ಷಣದಿಂದ ಸಂಪೂರ್ಣವಾಗಿ ಕಳಚಿಕೊಂಡು, ವಿಶ್ವಬ್ಯಾಂಕಿನ ನಿರ್ದೇಶನವನ್ನು ಯಶಸ್ವಿಯಾಗಿ ಜಾರಿಗೊಳಿಸಿದ 'ಹಿರಿಮೆ' ಪಡೆದುಕೊಳ್ಳಬಹುದು.

ಆದ್ದರಿಂದ ತಮ್ಮ ಮಕ್ಕಳಿಗೆ ಯೋಗ್ಯ ಶಿಕ್ಷಣ ಕೊಡಿಸಲು ಈ ಬಾರಿ ಮತದಾರರು ಕೆಲವು ಆಗ್ರಹಗಳನ್ನು ಉಮೇದುವಾರರ ಮುಂದೆ ಇಡುವುದು ಅಗತ್ಯ.

ಉನ್ನತ ಶಿಕ್ಷಣಕ್ಕೆ ಸಂಬಂಧಪಟ್ಟಂತೆ ನಾವು ಮುಂದಿಡಬಹುದಾದ ಆಗ್ರಹಗಳು ಇವು-

1) ಅನುದಾನರಹಿತ ಕಾಲೇಜು ಎಂಬ ಪರಿಕಲ್ಪನೆಯೇ ರದ್ದಾಗಬೇಕು
2) ಅನುದಾನವಂಚಿತ ಎಲ್ಲ ಹೊಸ ಪದವಿ ಕೋರ್ಸುಗಳನ್ನು ಅನುದಾನದ ತೆಕ್ಕೆಗೆ ತರಬೇಕು
3) ಎಲ್ಲ ಪದವಿ ಕಾಲೇಜುಗಳಲ್ಲೂ ಸಮಾನ ವೇತನ, ಸಮಾನ ಅರ್ಹತೆ ಸೂತ್ರವನ್ನು ಪಾಲಿಸಬೇಕು
4) ಈಗಿರುವ ವಿಶ್ವವಿದ್ಯಾನಿಲಯ ಕಾಯ್ದೆಯ ಪ್ರಕಾರ ವಿವಿಯ ಅಂಗಸಂಸ್ಥೆಗಳಾದ ಅಕಾಡೆಮಿಕ್ ಕೌನ್ಸಿಲ್, ಸೆನೆಟುಗಳಿಗೆ ಚುನಾವಣೆಗಳೇ ಇಲ್ಲ. ಕೇವಲ ನೇಮಕಾತಿ ಮೂಲಕ ತುಂಬಲಾಗುವ ಈ ಸ್ಥಾನಗಳಲ್ಲಿ ಇಂದು ಶಿಕ್ಷಣಕ್ಕೆ ಸಂಬಂಧಪಟ್ಟಿಲ್ಲದವರೇ ರಾರಾಜಿಸುತ್ತಿದ್ದಾರೆ. ಇದು ಶುದ್ಧ ಅಪ್ರಜಾತಾಂತ್ರಿಕ ಹಾಗೂ ಅಶೈಕ್ಷಣಿಕ. ಹೀಗಾಗಿ ವಿವಿಗಳಲ್ಲಿ ಅಧ್ಯಾಪಕರ, ವಿದ್ಯಾರ್ಥಿಗಳ ಧ್ವನಿಯೇ ಇಲ್ಲದಂತಾಗಿದೆ. ಇದು ಹೋಗಬೇಕಾದರೆ, ವಿವಿ ಕಾಯ್ದೆಯಲ್ಲಿ ಮಾರ್ಪಾಟು ಮಾಡಿ, ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳ ಪ್ರಾತಿನಿಧ್ಯ ಸಿಗಲು ಬೇಕಾದ ಚುನಾವಣೆ ಪದ್ಧತಿಯನ್ನು ಮತ್ತೆ ಜಾರಿಗೊಳಿಸಬೇಕು
5) ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿಭಾಗದಲ್ಲೂ [illegible] ಸೀಟುಗಳನ್ನು ಕಾಲ್ಪನಿಕ ಮಾರಾಟ ಮಾಡಲಾಗುತ್ತಿದೆ. ಇದು ಈ ಶೈಕ್ಷಣಿಕ ವರ್ಷದಿಂದಲೇ ರದ್ದಾಗಬೇಕು. ■

ಮನಿಗೊಂದು ಟಿ.ವಿ. ಅಂದ್ರೆ ನಿನಿಗೊಂದು ಅಂತ ತಿಳಕಬ್ಯಾಡ

ರಣಬಿಸಿಲಿನ ಝಳಕ್ಕೆ ಸೀರ ಮತ್ತು ಕಾಳಮಾವನ ಅಂಗಿ ಹೆಗಲಿಗೆ ನೇತುಬಿದ್ದಿದ್ದವು. ಕೋರಂ ಭರ್ತಿಯಾಗಿತ್ತು. ಎಂದಿನಂತೆ ಪ್ರಸ್ತುತ ರಾಜಕಾರಣವನ್ನು ಅಳೆದು ಸುರಿಯುವ ಕಾರ್ಯ ಜೋರಾಗಿ ನಡೆದಿತ್ತು.

"ಅಂತೂ ಈ ಹಾಳ್ಕಲೆಕ್ಸನ್ ಮುಗಿಯೊವತ್ತಿಗೆ ನಾದಿನ ಮ್ಯಾಲಿರೊ ಆಡುಕುರಿ ಕಾಲಿಯಾಯ್ತವೆ ಕಂಢ್ರ ಉಗ್ರಿ" ಎಂದ ಸೀರ.

ಬಂಗಾಳುಸೀಮೆಯ ಕಟ್ಟೆಪುರಾಣ

■ ಬಿ. ಚಂದ್ರೇಗೌಡ

"ನಿಜ ಕಣ ಮಾವ. ಉಗಾದಿ ಹಬ್ಬದ ವರ್ಸತೊಡಕೆ ಮಾಡಕ್ಕೆ ಅಂತ ಯಲ್ಲಾ ಊರಲ್ಲೂ ಮರಿ ಕೂದ್ರು. ಈಗ ಯಲಕ್ಸನ್ ಮಾಡೊ ಮುಂಡೆಮಕ್ಕಳು ಬಾಡೂಟಕೆ ಅಂತ ಇದ್ದಬದ್ದವ್ನೆಲ್ಲ ಕಾಲಿಯಾಯ್ತವೆ ಅತ್ತಗೆ."

"ನಾವು ಹುಟ್ಟಿದ್ದೂ ಇಂತ ಯಲಕ್ಸನ್ ನೋಡಿರಲಿಲ್ಲ ಬುಢ್ಢ" ಎಂದ ಕಾಳಮಾವ.

"ಯಲಕ್ಸನ್ನ ಅಂದ್ರೆ ಅಂತಿಂತ ಯಲಕ್ಸನ್ ಅಲ್ಲ ಕಣಮಾವ ಇದು. ಗೆಲ್ಲಕ್ಕೆ ಎಷ್ಟು ಕೋಟಿಯಾದ್ರು ಕರ್ಚಾಗ್ಲಿ ಅನ್ನೊ ಕ್ಯಾಂಡೇಟ್ ಬಂದವುರೆ" ಎಂದ ಉಗ್ರಿ.

"ಆಟೊಂತರ ದುಡ್ಡ ಎಲ್ಲಿಂದ ತಂದ್ರೂ?" ಎಂದಳು ಜುಮ್ಮಿ.

"ಎಲ್ಲಿಂದ್ಲೊ ತರಕ್ಕೋದರೇನೆ, ಇಲ್ಲಿದೆ ಅಲವೆ ದುಡ್ಡು. ಆ ಬೆಂಗಳೂರು ಸುತ್ತಮುತ್ತ ಇರೊ ಜಮೀನ ಬಡಬಗ್ಗರಿಂದ ಕಿತಗಂಡು ಮಾರಿದ್ರು. ಕೋಟ್ಯಂತ ರುಪಾಯಿ ಲಾಭ ಬತ್ತು. ಆಟೊಂತರ ದುಡ್ಡ ಕರ್ಚು ಮಾಡೋದ್ಕಂಗೆ ಅಂದ್ರೆ, ಆಗೊ ಇಂತ ಚುನಾವಣೆ" ಎಂದು ಉಗ್ರಿ ಹೇಳುತ್ತಿರುವಾಗ ಮಧ್ಯೆ ಬಾಯಿಹಾಕಿದ ಸೀರ.

"ಭೂಮಿ ಮಾರೊ ದುಡ್ಡಿಗಿಂತ ಗಣಿ ದುಡ್ಡು ಬಂದದಂತೆ ಕಂಢ್ರ" ಎಂದ.

"ಊ ಕಣ ಮಾವ. ರೆಡ್ಡಿ ಒಬ್ನೆ ಸಾಕು ಬಜೆಪಿ ಕ್ಯಾಂಡೇಟ ಚುನಾವಣೆ ಕರ್ಚನ್ನೆಲ್ಲ ನೋಡಿಕತ್ತನಂತೆ."

"ಅಂಗಂತಿಯಾ?"

"ಊ ಮತ್ತೆ. ಅವುನತ್ರ ಸಾವುರಾರು ಕೋಟಿ ಇದ್ದತಂತೆ. ಇನ್ನ ಬೆಂಗಳೂರು ಸುತ್ತಮುತ್ತ ಇರೋ ಭೂಮಿಕೊಂಡು ಮಾರಿರೋರತ್ರ ಸಾವುರಾರು ಕೋಟಿ ಇದ್ದತಂತೆ. ಅದ್ಕೆ ಬಜೆಪಿಗಳು ಅಬ್ಬರುಸ್ತ ಕುಂತವುರೆ."

"ನೋಡಪ್ಪ, ಒಂದು ಕಾಲ್ದಲ್ಲಿ ಆ ಲಾಡಿಗಂಡ್ರು ಉರಿ ಮಂಜ ಕಲಿಸಿಗಂಡು ಗ್ವಾಡೆ ಮ್ಯಾಲೆ ಕಮಲದ ಹೂವ ಬರದುಬುಟ್ಟು ಹೋಗರು. ಅಮ್ಯಾಲೆ ಒಂದು ಹ್ಯಾಂಡಬಿಲ್ಲ ಕೊಟ್ಟು ಕೈಮುಗದು ಹೋಗರು. ಅಂತಾ ಜನ ಇವತ್ತು ಕೋಟ್ಯಾಂತರುಪಾಯ ತಂದು ಯಲಕ್ಸನ್ ಮಾಡ್ತರೆ ಅಂದ್ರೆ ಕಾಲ ಎಲ್ಲಿಗೆ ಬತ್ತು ನೋಡು" ಎಂದು ಕಾಳಮಾವ ಅಚ್ಚರಿ ವ್ಯಕ್ತಪಡಿಸುವಾಗ ಕಾಣಿಸಿಕೊಂಡ ವಾಟಿಸ್ಸೆ,

"ಬಜೆಪಿಯೋರ ಎಗ್ಸಾಂಪಲ್ ಇರ್ಲಿ ದ್ವಡಪ್ಪ ದ್ಯಾವೇಗೌಡ್ರ ಕಂಡಿಷನ್ ಯಂಗಿತ್ತು ಗೊತ್ತೆ?" ಎಂದ.

"ಅವುನು ಕಾಲಾದಿಂದ ಇದ್ದೋನು ಕಂಢ್ರ. ಜನಗಳೇ ದುಡ್ಡು ಕೊಟ್ಟು ಅವುನ ಕೈಲಿ ರಾಜಕಾರಣ ಮಾಡ ಸೋರು."

"ನಿಜ, ನಾನು ನೋಡಿದ್ದೆ. ಇದೇ ಚಂದ್ರಪಟ್ಟದ ಹೋಬಳಲಿ ಮರಕೊಂದು ತೆಂಗಿನಕಾಯಿ ಕೊಟ್ಟು



ಯಗಡೆ ಯಿರುದ್ದ ತ್ವಡೆ ತಟ್ಟು ಅಂತ ಜನಗಳೆ ಕಳಿಸಿದ್ರು ಕಂಢ್ರ" ಎಂದ ಸೀರ.

"ಅವತ್ತು ಮರಕೊಂದು ಕಾಯಿಕೊಟ್ಟದ್ರು ಸರಿ ಚಿಗಪ್ಪ, ದ್ಯಾವೇಗೌಡ ಇವತ್ತ್ಯಂಗವುನೆ ಗೊತ್ತೆ? ಮನಿಗೊಂದು ಮರನೆ ಕೊಡಂಗವುನೆ" ಎಂದ ವಾಟಿಸ್ಸೆ.

"ಯಲ್ಲ ಅವುರೆ ಕಣ್ಯಸಿಲ ಅತ್ರಗೆ. ಕಾಂಗ್ರೆಸಿನೋರು ಮನಿಗೊಂದು ಟಿವಿ ಕೊಡ್ತಿವಿ ಅಂತ ಬಂದವ ಇದಕೇನೇಳ್ತೀ?" ಎಂದ ಸೀರ.

"ಮನಿಗೊಂದು ಅಂದ್ರೆ ನಿನಿಗೊಂದು ಅ ತಿಳಕಬ್ಯಾಡ ಚಿಗಪ್ಪ, ಕಾಂಗ್ರೆಸ್ ಪಾರ್ಟಿ ವರ್ಕರ ಕೊಡ್ತರೆ. ಅಮ್ಯಾಲೆ ಉಳುದಿದ್ರೆ ನಿನಿಗೂ ಕೊಡ್ ಅದೂ ನೀನು ಓಡಾಡಿ ಕಾಂಗ್ರೆಸ್‌ಗೆ ಓಟಾಕ್ಸಿರಬೇ ನೀನಿತ್ತಗೆ ದ್ಯಾವೇಗೌಡ್ರು ಕಡೆ ಓಡಾಡಿ ಅತ್ತಗೊ ಟಿವಿ ಕೇಳಕ್ಕಾಗದಿಲ್ಲ" ಎಂದ ವಾಟಿಸ್ಸೆ.

"ನಾನ್ಯಾವತ್ತೂ ದ್ಯಾವೇಗೌಡನ ಓಡಾಡಿಲ್ಲ ಕಂಢ್ರ. ಆ ಕಾಲದಿಂ ಶ್ರೀಕಂಠಯ್ಯನ್ನ ಬುಟ್ಟು ಅಲ್ಲಾಡಿಲ್ಲ" ಎಂ ಸೀರ.

"ಅವನು ಆಗ್ಲೆ ಕ್ಯಳಿಕಾಗ್ಯವುನೆ" ಎಂ ಕಾಳಮಾವ.

"ಕ್ಯಳಿಕಾದ್ರು ದ್ಯಾವೇಗೌಡನ ಮಕ ನೋಡು, ಆ ಶ್ರೀಕಂಠಯ್ಯನ ಮಕ ನೋಡು. ಯಾರ್ದು ಕಳೇವಾಗ್ಯದೆ ಅ ನಿನಿಗೆ ಗೊತ್ತಾಯ್ತದೆ" ಎಂದ ಉಗ್ರಿ.


"ಶ್ರೀಕಂಠಯ್ಯ ರಸಿಕ ಕಣೊ ಉ ಈ ವಯಸಿನಲ್ಲು ಅಂಗೆ' ಯಯಾ ಇದ್ದಂಗವುನೆ. ಅದೇ ದ್ಯಾವೇಗೌಡನ ಮ ನೋಡು, ಮಾಟಗಾರನ ಮಕಿದ್ದಂಗದ ಎಂದ. ವಾಟಿಸ್ಸೆ. ಆಗ ಉಗ್ರಿ,

"ನಿಜ ಕಣೊ ವಾಟಿಸ್ಸೆ. ಮನಸಲ್ಲಿ ವ ಆಲೋಚನೆಗಳಿದ್ರೆ ಅದು ಮಕಕ್ಕೆ ಒಂದು ಕಳೇ ತತ್ತದೆ. ಆ ದ್ಯಾವೇಗೌಡನ ಮನಸಲ್ಲಿ ಯಾವತ್ತಿಗ ವಳ್ಳೆ ಆಲೋಚನೆಗಳೇ ಇರಲಿಲ್ಲ, ಅದ್ಕೆ ಅವುನ ಮ ಯಾವಾಗ್ಲು ಮಾರಿಗುಡಿ ಪೂಜಾರಿ ಮಕಿದ್ದಂಗಿರತದ ಎಂದ ಉಗ್ರಿ.

ತತ್ವ ಸಿದ್ಧಾಂತ ಆಧಾರಿತ ಪಾತಕಿಗಳು

ಬೆಂಗಳೂರಿಗೆ ಅವತ್ತು ಹೋಗಬಾರದಿತ್ತು. ಅದಕ್ಕೆ ತಕ್ಕ ಪ್ರತಿಫಲ ಆಯಿತು. ಅದಾವುದೋ ಬಡಾವಣೆಯಲ್ಲಿ ಟ್ರಾಫಿಕ್ ಜಾಮ್‌ನಲ್ಲಿ ನಾನು ಜಾಮಾದೆ. ರಸ್ತೆಯ ಎರಡೂ ಬದಿ ಕಾರುಗಳ ಸಾಲು, ಮಧ್ಯೆ ಜನಜಂಗುಳಿ. ಕೆಲವರ ಮುಖದಲ್ಲಿ ಸೂತಕದ ಕಳೆ. ಯಾರೋ ದೊಡ್ಡ ಮನುಷ್ಯರು ಪರಮಾತ್ಮನ ಪಾದಾರವಿಂದ ಸೇರಿರಬೇಕು ಅಂದುಕೊಂಡೆ. ಯಾರು ಇರಬಹುದು ಇವರು ಅನ್ನುವ ಕುತೂಹಲ. ಅಮಾಯಕನ ಕಳೆ ಇದ್ದ ಒಬ್ಬನ್ನ ಹಿಡಿದು "ಯಾರು ಪಾಪ ತೀರಿಕೊಂಡದ್ದು" ಅಂತ ಸೂತಕದ ಮುಖ ಹೊತ್ತೇ ಕೇಳಿದೆ. "ನಾವೇರಿ, ಇನ್ನೇನು ನಾವಿದ್ದೂ ಸತ್ತ ಹಾಗೇ ಅಲ್ಲವ" ಅಂದ ಅವ. ವಿಷಯ ಏನೂ ಅಂತಾನೆ ಅರ್ಥ ಆಗಲಿಲ್ಲ, ಕೆದಕಿದೆ. "ಈ ಸಲ ಗೆಲ್ಲುವುದು ಖಾತರಿ ಇತ್ತು, ಈ ನನ್‌ಮಗ ಟಿಕೇಟೇ ಕೊಡ್ಲಿಲ್ಲ" ಅಲವತ್ತುಕೊಂಡ. ಜ್ಞಾನೋದಯ ಆಯಿತು. ಸೂತಕದ ಕಳೆ ಪಕ್ಷದ ಟಿಕೇಟು ಪಡೆಯಲಾರದೆ ನಿರಾಶರಾಗಿದ್ದರಿಂದ ಅಂತ. ಪ್ರಮುಖ ಪಕ್ಷಗಳ ಅಧಿಪತಿಗಳ ಮನೆಯ ಸುತ್ತಮುತ್ತ ಇಂತಹದ್ದೇ ವಾತಾವರಣ ತುಂಬಿರುವುದರಿಂದ ಇದು ಯಾರ ಮನೆ ಅಂತ ಅಲ್ಲಿ ಇಲ್ಲಿ ವಿಚಾರಿಸಿದೆ. ಸದಾನಂದಗೌಡರ ಮನೆ ಅಂತ ತಿಳಿಯಿತು. ಟಿಕೇಟು ವಂಚಿತನ 'ಸೂತಕ'ದ ಕಳೆಗೆ ಅರ್ಥ ಇತ್ತು, ಭಾರತೀಯ ಜನತಾ ಪಕ್ಷ ಈ ಚುನಾವಣೆಯಲ್ಲಿ ಮಗ್ಗಾಮಲಗುವುದು ಖಚಿತ ಅಂತ ತಿಳಿದಿದ್ದರೂ, ಕಳೆದ ಸಾಲಿನಲ್ಲಿ ಆಯ್ಕೆಯಾದಷ್ಟು ಶಾಸಕರು ಈ ಬಾರಿ ಆಯ್ಕೆ ಯಾಗುವುದಿಲ್ಲ, ಅದು ಐವತ್ತರ ಆಜೂಬಾಜೂ ಬಂದರೂ ಸಾಹಸವೇ ಅಂತ ಗೊತ್ತಿದ್ದರೂ ಸುದ್ದಿಮಾಧ್ಯಮದವರು ತಮ್ಮ ಎಂದಿನ ಜಾಯಮಾನದಂತೆ 'ಅನುಕಂಪದ ಅಲೆ'ಯ ಮೇಲೆ ವಿಧಾನಸೌಧಕ್ಕೆ ಹಾರಿ ಬರುವುದು ಖಚಿತ ಅನ್ನೋ ಭ್ರಮೇನ ಸೃಷ್ಟಿಸಿದ್ದರು. ಅದರ ಬೆನ್ನೇರಿ ವಿಧಾನಸೌಧದಲ್ಲಿ ಡೌಲು ನಡೆಸಬಹುದು ಅನ್ನುವ ಆಶಾಗೋಪುರವನ್ನು ತಲೆಗೇರಿಸಿಕೊಂಡೋ ಅಥವಾ ಟಿಕೇಟು ಅಂತ ಒಂದು ಸಿಕ್ಕಿದ್ದರೆ ಸಾಕು ಚುನಾವಣೆ ಖರ್ಚಿಗೆ ಅಂತ ಕೋಟಿಗಟ್ಟಲೆ ತಂದು ಸುರೀತಾರೆ. ಅದರಲ್ಲಿ ಒಂದಿಷ್ಟು ಶಾಬಾಯಲವಣಾಯ ಮಾಡಿದರೂ ಸಾಕು ಜೀವನಪರ್ಯಂತ ನೆಮ್ಮದಿಯಾಗಿರಬಹುದು. ಪಕ್ಷ ಗೆದ್ದರೆಷ್ಟು ಬಿಟ್ಟರೆಷ್ಟು ಅನ್ನುವ 'ಚುನಾವಣಾ ಅಭ್ಯರ್ಥಿ ಧನ'ಕ್ಕಾಗಿ ಬಾಯಿಬಾಯಿ ಬಿಡುವುದರಿಂದಲೇ ಅವರಿಗೆ 'ಸೂತಕ'ದ ಕಳೆ ತಟ್ಟುವುದು ನ್ಯಾಯವೇ ಆಗಿತ್ತು.

ಬರುವುದು ಹೇಗಿದ್ದರೂ ಬಂದಿದ್ದೀನಿ. ಅಭ್ಯರ್ಥಿಗಳ; ಅವರ ಬೆಂಬಲಿಗರ ಅತಿ ಉತ್ಸಾಹದಿಂದಾಗಿ ಸಮಯಕ್ಕೆ ಸರಿಯಾಗಿ ತಲುಪಬೇಕಾದ ಸ್ಥಳ ಸೇರಕ್ಕಾಗಲ್ಲ; ಅವತ್ತಿನ ನಿಗದಿತ ಕೆಲಸ ಆಗುವುದಿಲ್ಲ, ಭಾಜಪ ಗೌಡರನ್ನಾದರೂ ನೋಡಿ ಹೋಗೋಣ ಅನ್ನಿಸಿತು... ತಿರುಪತಿ ತಿಮ್ಮಪ್ಪನ ದರ್ಶನ ಮಾಡಿದಷ್ಟೇ ಶ್ರಮ ಆಯಿತು. ಆರ್.ಕೆ. ಲಕ್ಷ್ಮಣ್ ಅವರ ಮಿ|| ಸಿಟಿಜನ್ ನಿಂತಿರ್‍ತಾನಲ್ಲ ಆದೇರೀತಿ ನಿಂತುಕೊಂಡೆ.



ಗೌಡರು ಬಿಡುವಿಲ್ಲದ ಕಾರ್ಯಕ್ರಮಗಳ ನಡುವೆಯೂ ಸುದ್ದಿ ಮಾಧ್ಯಮದವರಿಗೆ ಸಂದರ್ಶನ ನೀಡುತ್ತಿದ್ದರು.

"ನಮ್ಮದು ತತ್ವ ಸಿದ್ಧಾಂತಗಳ ಆಧಾರಿತ ಪಕ್ಷ" ಗೌಡರ ಹೆಮ್ಮೆ.

ಇತರೆ ಪಕ್ಷಗಳು?

ಯಾವ ಸಿದ್ಧಾಂತ ಇದೆ? ಯಾವ ತತ್ವ ಇದೆ ಅವಕ್ಕೆ? ಆದಕ್ಕೇ ಅಲ್ಲವೆ ಬೇರೆ ಪಕ್ಷಗಳಿಂದ ಭಾಜಪಕ್ಕೆ ದಂಡುದಂಡಾಗಿ ನಾಯಕರ ವಲಸೆ?

ಬೆಂಕಿ ಮಹದೇವ ಬಂದರು. ರೇವಣ್ಣಸಿದ್ದಯ್ಯ ಬಂದರು. ಹೀಗೆ ಯಾತಕ್ಕಾಗಿ ಬಂದರು?

ಕಾಂಗ್ರೆಸ್ಸಿನಲ್ಲಿ 'ವಲಸಿಗರ ಕಾಟ!'

ಭಾಜಪ ವಲಸಿಗರಿಗೇ ಮಣೆ ಹಾಕುತ್ತಿದೆಯಲ್ಲ?

ಇದು ತತ್ವ ಸಿದ್ಧಾಂತ ಆಧಾರಿತ ವಲಸೆ!

ವಲಸೆ ಅಧ್ಯಾಯ ಇಲ್ಲಿಗೆ ಕೊನೆಕಂಡಿತು.

"ಕ್ರಿಮಿನಲ್‌ಗಳಿಗೆ, ಭೂಮಾಫಿಯಾಗಳಿಗೆ ಟಿಕೆಟು ಇಲ್ಲ!" ಗೌಡರ ಘೋಷಣೆ.

ಪಕ್ಷದ ಅಭ್ಯರ್ಥಿಗಳ ಪಟ್ಟಿ ನೋಡಿ, ಒಬ್ಬ ಕ್ರಿಮಿನಲ್ ಇಲ್ಲ! ಒಬ್ಬ ಭೂ ಮಾಫಿಯಾ ದೊರೆ ಇಲ್ಲ! ಎಂತಹ ಆದರ್ಶ ವ್ಯಕ್ತಿಗಳು ಇವರು!

ಮತದಾರನಿಗೆ ಹಲವು ಅಭ್ಯರ್ಥಿಗಳು ಕಳಂಕಿತರೆಂದು ತೋಚಬಹುದು. ಸದಾನಂದ ಗೌಡರು ಹೇಳುತ್ತಾರೆ-"ನ್ಯಾಯಬದ್ಧ ರೀತಿಯಲ್ಲಿ ರಿಯಲ್ ಎಸ್ಟೇಟ್ ದಂಧೆ ನಡೆಸುತ್ತಿರುವವರನ್ನು ಮಾಫಿಯಾ ಸೇರಿಸುವುದು ಸರಿಯಲ್ಲ"

ಅಂದರೆ ಏನಾಯಿತು, ಅಭ್ಯರ್ಥಿಗಳು ಪಾತಕಿಗಳೇ ಇರಬಹುದು. ಅದು ತತ್ವ ಸಿದ್ಧಾಂತಗಳ ಮೇಲೆ ಮಾಡಿದ ಪಾತಕೀಕರಣ! ಅಂತೆಯೇ ಭೂಮಾಫಿಯಾ ಸಹ ತತ್ವ ಸಿದ್ಧಾಂತ ಆಧಾರಿತ ಭೂಕಬಳಿಕೆ! ತತ್ವ ಸಿದ್ಧಾಂತಗಳ ಮೇಲೆ ಮಾಡಿದ ಅಪರಾಧ ಅಪರಾಧ ಅಲ್ಲ!

ಬಳ್ಳಾರಿಯ ಗಣಿ ಲೂಟಿ?

ತತ್ವ ಸಿದ್ಧಾಂತದ ಲೂಟಿ!

ಮಧುಗಿರಿಯಂತಹ ಪುಟ್ಟ ಪಟ್ಟಣಕ್ಕೆ ಮುನ್ನೂರು ಸ್ಕಾರ್ಪಿಯೋ ಕಾರುಗಳಲ್ಲಿ ಹಾಕಿದ ಮುತ್ತಿಗೆ? ಹಣದ ಧಿಮಾಕಿನ ಅಸಹ್ಯ ಪ್ರದರ್ಶನ?

ಅದು ತತ್ವ ಸಿದ್ಧಾಂತದ ಪ್ರದರ್ಶನ!

ಶಕುಂತಲಾ ಶೆಟ್ಟಿಯವರಿಗೆ ಸೀಟು ನಿರಾಕರಣೆ

"ಪಕ್ಷದ ಶಿಸ್ತು ಉಲ್ಲಂಘನೆಗಾಗಿ!" ಗೌ ಧೀಮಂತ ಹೇಳಿಕೆ.

ಏನು ಆ ಪಕ್ಷದ ಶಿಸ್ತು?

ಗೌಡರ ಆಜ್ಞಾವರ್ತಿಯಾಗಿರುವುದು!

ಹಾಗೆ ವರ್ತಿಸದಿದ್ದರೆ ಅಶಿಸ್ತು!

ಆಹಾ! ಏನು ತತ್ವ! ಏನು ಸಿದ್ಧಾಂತ! ಏ ಶಿಸ್ತು!

ಅಣಾ...

■ ಎಚ್.ಎಲ್. ಕೇಶವಮೂ...

ಇಂತಹ ತತ್ವ ಸಿದ್ಧಾಂತ ಆಧಾರಿತ ಏಕೈಕ ಪ ಚುನಾವಣೆಯಲ್ಲಿ ಗೆಲ್ಲುವುದು ಎಷ್ಟು ಕಡೆ?

"ನೂರೈವತ್ತು ಕ್ಷೇತ್ರಗಳಲ್ಲಿ ನಮ್ಮ ಗೆಲುವು ಖಚಿತ" ಗೌಡರ ನಿರ್ಧಾರಿತ ಧ್ವನಿ.

ಎಪ್ಪತ್ತೈದು ಕ್ಷೇತ್ರಗಳನ್ನು ಬೇರೆ ಪಕ್ಷಗಳ ಧಾರಾಳವಾಗಿ ಬಿಟ್ಟು ಕೊಟ್ಟಿದ್ದು ಯಾಕ ಪ್ರಜಾಪ್ರಭುತ್ವದ ಉಳಿವಿಗಾಗಿ! ಇಲ್ಲದಿದ್ದಲ್ಲಿ ಅವುಗಳನ್ ಭಾಜಪ ಗೋರಿಕೊಳ್ಳುತ್ತಿತ್ತು!

ಪ್ರಜಾಪ್ರಭುತ್ವದ ಉ(ಅ)ಳಿವಿಗಾಗಿ

ಭಾಜಪ ಬೆಂಬಲಿಸಿ!

****

ದೇವೇಗೌಡರ ಬಾಯಲ್ಲಿ ಒಮ್ಮೊಮ್ಮೆ ಸ ಹೊರಬೀಳುತ್ತೆ. ಇತ್ತೀಚೆಗೆ ಬಂದದ್ದು ಏನ ಅಂದರೆ-"ನನ್ನನ್ನು ಬಿಟ್ಟು ಯಾವ ಮಹಾನುಭಾ ಸರ್ಕಾರ ರಚಿಸುತ್ತಾನೋ ನೋಡುತ್ತೀನಿ!"

"ಮುಟಗಂಡು ಕೂತಗಳಿರ್ಲ, ಅದೇನಾರಿ ಆದಿಕಂಡಿರಿ" ಎಂದು ಮೂವ ರೇಗಿದ. ಇದುವರೆಗೂ ಸುಮ್ಮನಿದ್ದ ಚಿಕ್ಕಣ್ಣ,

"ನಾನು ಇವತ್ತಿಂದ ಹೋಟ್ಲು ಬಾಗಲಾಕಿ ಕಾಂಗ್ರೆಸ್ ಕ್ಯಾನುವಾಸಿ ಯಿತ್ತಿನಿ ಕಣೊ" ಎಂದ.

"ಇದ್ದಕ್ಕಿದ್ದಂಗೆ ನಿನಿಗೇನು ಬತ್ತೊ ಚಿಕ್ಕಣ್ಣ?" ಎಂದಳು ಜುಮ್ಮಿ.

"ಅಷ್ಟು ಗೊತ್ತಾಗದಿಲವೇನಕ್ಕ ನಿನಿಗೆ? ಚಿಕ್ಕಣ್ಣ ಹೋಟ್ಲು ಮನಿಗೆ ತಂದು ಮಡಗನ ಅಂತ ಪ್ಲಾನ್ ಮಾಡ್ಯವುನೆ" ಎಂದ ವಾಟಿಸ್ಸೆ.

"ನಿಜವೇನೊ ಚಿಕ್ಕಣ್ಣ?"

"ಈ ಹೋಟ್ಳಲ್ಲಿ ಯಾವ ಆದಾಯದೆ ಅಂತ ಕುಂತಿರನಾ. ಹೋಯ್ತಿನಿ ಊರನಾರ ನೋಡಿದಂಗಾಯ್ತದೆ."

"ಆದ್ರು ನಿನಿಗೆ ಟಿವಿ ಸಿಗದಿಲ್ಲ ಕಣೊ ಚಿಕ್ಕಣ್ಣ."

"ಅದ್ಯಾಕಪ್ಪ?"

"ಟಿವಿ ಕೊಡ್ತಾಯಿರದು ತೀರಾ ಪೂರ್ ಕಂಡಿಷನ್ನಲ್ಲಿ ಇರೋರಿಗೆ. ದು ಹೋಟ್ಲು ಜನರು. ಅಂದ್ರೆ ವ್ಯವಹಾರಸ್ಥ. ನಿನಿಗೆ ಟಿವಿ ಸಿಗದು . ಆದ್ರಿಂದ ಇತ್ತಗೆ ಟಿವಿನು ಇಲ್ಲ, ಅತ್ತಗೆ ಹೋಟ್ಲು ಆದಾಯನೂ ಅನ್ನಂಗೆ ಮಾಡಿಕೊ ಬ್ಯಾಡ. ಸುಮ್ನೆ ಹೋಟ್ಲು ಬಾಗಲತಗಿ. ನಾನೇ ಸ್ನೆಮ್ ಕಿಷ್ಣನಿಗೆ ಇನ್‌ಫ್ಲುಯೆನ್ಸ್ ಮಾಡಿ ಒಂದು ಟಿವಿ ಕೊಡುಸ್ತಿನಿ" ದ ವಾಟಿಸ್ಸೆ. ಆಗ ಜುಮ್ಮಿ ಏನನ್ನೊ ನೆನೆಸಿಕೊಂಡವಳಂತೆ,

"ರಾವುಲಗಾಂಧಿ ಹೋದನೇನ್ಲ?" ಎಂದಳು.

"ಊ ಕಣಕ್ಕ ಬಂದಷ್ಟೇ ಪಾಸ್ಟಾಗಿ ಓಡಿದ."

"ಮದಿವಾಗಿದ್ದನವುನು?"

"ಆಗಿಲ್ಲ ಅದಕ್ಕೆ ಹೆಣ್ಣು ನೋಡಕ್ಕೆ ಬಂದಿದ್ನಂತೆ."

"ಆಹಾ ನಿಜವೇನ್ಲ?"

"ಗಾಡ ಪ್ರಾಮಿಸ್ ಕಣಕ್ಕ. ಯಸ್ಸೆಂ ಕಿಷ್ಣ ಹೆಣ್ಣು ತೋರುಸ್ತಿನಿ ಅಂತ ದು ಆ ಜವಾಬ್ದಾರಿಯ ಕರಗೆಗೆ ವಯಿಸಿದನಂತೆ. ಕರ್ಗೆ ತೋರಿದ ಣ್ಣು ನೋಡಿ ರಾವುಲಗಾಂಧಿ ಯಾರಿಗೂ ಕಾಣದಂಗೆ ಓಡಿದನಂತೆ" ದು ವಾಟಿಸ್ಸೆ ನಕ್ಕ.

"ಆಹಹ ಇಂತ ಸುಳ್ಳನೂ ಹೇಳ್ತರೇನ್ಲ?"

"ಯಲಕ್ಷನ್ ಮುಗಿಯವರಿಗೂ ಯಾರೂ ನಿಜ ಹೇಳದಿಲ್ಲ ಕ್ಕ!"

ಅಂದರೆ ಜಾತ್ಯತೀತ ಜನತಾದಳ ಸರ್ಕಾರ ರಚಿಸುವಷ್ಟು ಸ್ಥಾನ ಯುವುದಿಲ್ಲ ಎಂದಾಯಿತು!

ಹಾಗಾದರೆ ಆ ಪಕ್ಷದ ಪಾತ್ರ ಏನು?

ರಮ್ಮಿ ಆಟದಲ್ಲಿ ಜೋಕರ್ ಇದ್ದ ಹಾಗೆ ಸರ್ಕಾರದ ರಚನೆ ನಾಟಕದಲ್ಲಿ ಬ!

****

ಚುನಾವಣೆ ದಿನಾಂಕ ಘೋಷಣೆ ಆಗಿದೆ.

ಮತದಾರರ ಕೊರತೆ ಇರಬಹುದು. ರಾಜಕೀಯ ಪಕ್ಷಗಳಿಗೆ ಬರ !! ಉದ್ಭವ ಮೂರ್ತಿಗಳ ತರಹ ದಿನಕ್ಕೊಂದು ಹುಟ್ಟುತ್ತಲೇ ಇದ್ದಾವೆ!

'ಹಿಂದುತ್ವ'ದ ತರಹವೇ 'ಪ್ರಗತಿಪರ' ಪದ ಕ್ಲೀಷೆಯಾಗಿದೆ. ಯಾರು ರು, ಯಾರು ಇವರು ಅನ್ನುವುದೇ ಗೊಂದಲ. ಅದಕ್ಕೆ ಈಗ ತಿಪರ' ಬಿಟ್ಟು 'ಜನ' ಹಿಡಿದುಕೊಂಡಿದ್ದಾರೆ.

ಎಷ್ಟು ಕ್ಷೇತ್ರಗಳಲ್ಲಿ ಇವರ ಸ್ಪರ್ಧೆ?

ಇನ್ನೂರ ಇಪ್ಪತ್ತನಾಲ್ಕು ಕ್ಷೇತ್ರಗಳಲ್ಲಿ! ಜನಪರ ಅಲ್ಲವೆ ಅವರು? ರೂ ಇವರ ಪರ ಇರುತ್ತಾರೆ ಎಂಬ ಅಚಲ ನಂಬಿಕೆ.

ಇದರ ಲಾಭ ಯಾರಿಗೆ?

ಚುನಾವಣೆ ಫಲಿತಾಂಶಕ್ಕಾಗಿ ಕಾಯಬೇಕು.

****

ಇಂದು ಸಂವಿಧಾನ ಶಿಲ್ಪಿ ಅಂಬೇಡ್ಕರರ ಒಂದು ನೂರ ಹದಿನೇಳನೇ ದಿನ.

ಈಗತಾನೆ ಹೊಸ ವರ್ಷ ಬಂತು. ಹೋಯಿತು.

ದಲಿತರಿಗೆ ದಕ್ಕಿದ್ದೇನು?

ಕನಕಪುರದ ಅರಳಾಳು ಗ್ರಾಮದಲ್ಲಿ ದಲಿತನ ಕೊಲೆ.

ಮಂಡ್ಯದ ಜಕ್ಕನಹಳ್ಳಿಯಲ್ಲಿ ದಲಿತ-ಸವರ್ಣೀಯರ ನಡುವೆ ಗಲಭೆ.

ಯಾಕೆ ನಡೆಯಿತು ಇವೆಲ್ಲ?

ದೇವಸ್ಥಾನದ ಗರ್ಭಗುಡಿ ಪ್ರವೇಶಿಸಿದ; ದೇವರ ಮೆರವಣಿಗೆಯಲ್ಲಿ ತುಲು ತಮಟೆ ಬಾರಿಸದ ಆರೋಪ.

ದೇವರ ಹೆಸರಿನಲ್ಲಿ ದಲಿತರ ಮೇಲೆ ದೌರ್ಜನ್ಯ.

ಅಂಬೇಡ್ಕರ್ ಜಯಂತಿಗೆ ಹೊಸವರ್ಷದ ಕೊಡುಗೆ!

ಕೂಗುತಿವೆ ಗೋಡೆಗಳೂ

ಒಂದೂ ನಾಡೆಲ್ಲ ಒಂದು'

ಚರಣೆ ಮಾತ್ರ

ಂದುಮುಂದು!



ಹಲ ಬಗೆಯ ಖುಷಿ



ಮರೆಯುವ ಮುನ್ನ

■ ಪಿ. ಲಂಕೇಶ್

ನಾನು ಲೇಖಕನಾಗಿದ್ದು ಆಮೇಲೆ ಈ ಪತ್ರಿಕಾ ವೃತ್ತಿಗೆ ಬಂದವನು; ಆದ್ದರಿಂದಲೇ ನಮ್ಮ ಅನೇಕ ವರದಿಗಾರರಿಗೆ ಸಾಹಿತ್ಯಕವಾಗಬೇಡಿ, ಆಲಂಕಾರಿಕವಾಗಿ ಬರೆಯಬೇಡಿ ಎಂದು ಮತ್ತೆ ಮತ್ತೆ ಹೇಳುವವನು. ಪತ್ರಕರ್ತನ ಬದುಕಿನಲ್ಲಿ ಹಲವಾರು ಸಂತೋಷಗಳಿವೆ. ನಿಖರವಾಗಿ ನೋಡುವುದು, ಕರಾರುವಾಕ್ಕಾಗಿ ಬರೆಯುವುದು ಅವುಗಳಲ್ಲೊಂದು. ಇದು ಪತ್ರಕರ್ತನನ್ನು ವಾಸ್ತವಕ್ಕೆ, ಸರಳ ಬರವಣಿಗೆಯ ಕಲೆಗೆ ಪ್ರೇರೇಪಿಸುತ್ತದೆ. ಪತ್ರಕರ್ತನ ಇನ್ನೊಂದು ಸಂತೋಷ ತನ್ನ ವರದಿ, ತನಿಖೆ, ಅಭಿಪ್ರಾಯ ಜನರ ಮೇಲೆ ಪರಿಣಾಮ ಬೀರುವುದು, ತಪ್ಪನ್ನು ಸರಿಪಡಿಸುವುದು. ಇವೆಲ್ಲ ಏನೇನೊ ಪರಿಣಾಮ ಬೀರದೆ ಇರಲು ಸಾಧ್ಯ, ಯಾವ ಬದಲಾವಣೆಯೂ ಆಗದೆ ಇರುವುದು ಸಾಧ್ಯ. ಹೀಗಾಗುವುದು ಪತ್ರಕರ್ತ ನ್ಯಾಯವಂತನೂ ಪ್ರಾಮಾಣಿಕನೂ ಆಗಿರದೆ ಇದ್ದಾಗ. ನ್ಯಾಯವಂತಿಕೆ ಮತ್ತು ಪ್ರಾಮಾಣಿಕತೆ ಪತ್ರಕರ್ತನ ಬಂಡವಾಳ.


ಇಡೀ ಪತ್ರಿಕಾವೃತ್ತಿ ಬರವಣಿಗೆ ಮತ್ತು ಕ್ರಿಯೆಯನ್ನು ಅವಲಂಬಿಸಿದೆ ಮತ್ತು ಪತ್ರಿಕಾವೃತ್ತಿ ಒಂದು ಸಂದೇಹದ ಮೇಲೆ ನಿಂತಿದೆ. ಅಧಿಕಾರ ಮನುಷ್ಯನನ್ನು ಭ್ರಷ್ಟಗೊಳಿಸುತ್ತದೆ, ಆದ್ದರಿಂದ ಸರ್ಕಾರವನ್ನು ಅನುಮಾನದಿಂದ ನೋಡುವುದು ಪತ್ರಕರ್ತನ ಕರ್ತವ್ಯ.

ಮೇಲಿನ ಎಲ್ಲ ಬಗೆಯ ಸಂತೋಷಗಳು ನನಗೆ ದೊರಕಿವೆ. ಇದರಿಂದ ನನ್ನ ಜವಾಬ್ದಾರಿ ಮತ್ತು ಕೆಲಸ ಎರಡೂ ಹೆಚ್ಚಿವೆ. ಇದೆಲ್ಲದರ ಜೊತೆಗೇ ಒಂದು ತೊಂದರೆ ಕೂಡ ಆಗಿದೆ-ನನಗೆ ಅನಾಮಿಕತೆ ಇಲ್ಲವಾಗಿದೆ. ನನ್ನ ಹೆಸರನ್ನು ನೋಡಿ ಓದುವವರೇ ಹೆಚ್ಚಿದಷ್ಟೂ ನನಗೆ ಮುಜುಗರವಾಗುತ್ತದೆ.

ಪಾಳೇಗಾರರಿಗೆ ಮತವಿಲ್ಲ!

ಒಂದು ವರ್ಣಮಯ ತಿಕ್ಕಲು ದೇಶ...

....ಎರಡು ಸಲ ತನ್ನ ದೊರೆಗಳನ್ನೇ ಕೊಂದು ಜನಶಕ್ತಿಯನ್ನು ತೋರಿದ್ದರೂ ತನ್ನ ದೇಶದ ದೊರೆಯನ್ನು ಆರಾಧಿಸುವ, ಪ್ರಜಾಪ್ರಭುತ್ವದ ತವರೆಂದು ಹೆಸರಾಗಿದ್ದರೂ ಸಂವಿಧಾನವನ್ನೇ ಬರೆದಿಟ್ಟುಕೊಳ್ಳದ, ಸಮಾನತೆಯ ಬಗ್ಗೆ ನಿರಂತರವಾಗಿ ಮಾತಾಡಿದರೂ ಶಿಷ್ಟವರ್ಗವನ್ನು ಹುಶಾರಾಗಿ ಕಾಪಾಡಿಕೊಂಡು ಬಂದಿರುವ ದೇಶ. ಇದು ಬ್ರಿಟನ್. ಬ್ರಿಟನ್ ಕೂಡ ಆಳದಲ್ಲಿ ಐಕ್ಯ ಪಡೆದ ನಾಡಲ್ಲ. ಒಬ್ಬ ವೇಲ್ಸ್‌ನವನನ್ನು ಸ್ಕಾಟ್ಲೆಂಡ್‌ನವನನ್ನು, ಐರ್ಲೆಂಡ್‌ನವನನ್ನು 'ನೀನು ಇಂಗ್ಲಿಷ್ ಮನ್ ಅಲ್ಲವಾ?' ಎಂದು ಕೇಳಿದರೆ ಅಸಮಾಧಾನಗೊಳ್ಳುತ್ತಾನೆ. ಐರ್ಲೆಂಡ್, ವೇಲ್ಸ್, ಸ್ಕಾಟ್ಲೆಂಡ್‌ಗಳು ಇಂಗ್ಲೆಂಡಿನಿಂದ ಪ್ರತ್ಯೇಕಗೊಳ್ಳಲು ನೂರಾರು ವರ್ಷ ಹೋರಾಡಿ ಸುಮ್ಮನಾಗಿವೆ. ಎಲ್ಲರ ಮತದಾನದ ಹಕ್ಕಿಗಾಗಿ ಕೂಡ ನೂರಾರು ವರ್ಷ ಆಂದೋಲನವಾಗಿ ಈಗ 18 ವರ್ಷ ತಲುಪಿದ ಎಲ್ಲರಿಗೆ ಮತದಾನದ ಹಕ್ಕಿದೆ.



ಈ ಬಗ್ಗೆ ಓದುತ್ತಾ ಒಂದು ವಿಚಿತ್ರ ನೋಡಿ ನಗೆ ಬಂತು. ಬ್ರಿಟನ್‌ನಲ್ಲಿ ಮೂರು ಗುಂಪಿಗೆ ಮಾತ್ರ ಮತದಾನದ ಹಕ್ಕಿಲ್ಲ. ಕೈದಿಗಳಿಗೆ, ಹುಚ್ಚರಿಗೆ ಮತ್ತು ಲಾರ್ಡ್ಸ್‌ಗಳಿಗೆ. ಲಾರ್ಡ್ಸ್‌ಗಳೆಂದರೆ ಬ್ರಿಟನ್ನಿನ ಭೂಮಾಲೀಕ ಪಾಳೇಗಾರರು. ಇವರು ತಮ್ಮ ವಿಶೇಷ ಸೌಲಭ್ಯಕ್ಕಾಗಿ, ಅಧಿಕಾರಕ್ಕಾಗಿ ದೊರೆಗಳೊಂದಿಗೆ, ದೊರೆಗಳ ವಿರುದ್ಧ, ಜನರೊಂದಿಗೆ, ಜನರ ವಿರುದ್ಧ ಹೋರಾಡಿದವರು. ಇವರಿಗೆ ಮತದಾನದ ಹಕ್ಕು ಯಾಕಿಲ್ಲವೆಂದರೆ, ಇವರೆಲ್ಲರಿಗೆ ನಮ್ಮ ರಾಜ್ಯಸಭೆಯಂಥ ಮೇಲುಮನೆ ಹೌಸ್ ಆಫ್ ಲಾರ್ಡ್ಸ್‌ನಲ್ಲಿ ಸ್ಥಾನವಿದೆ. ಆದರೆ ಈ ಮೇಲುಮನೆಗೆ ಮಾತಾಡುವ ಹಕ್ಕುಬಿಟ್ಟರೆ ಬೇರೆ ಯಾವ ಅಧಿಕಾರವೂ ಇಲ್ಲ!



ರಾಜಾಧಿರಾಜನನ್ನೇ ಸೇವಕನನ್ನಾಗಿಸಬಲ್ಲ,
ಸಾಮಾನ್ಯಳನ್ನೂ ಸುಂದರಿಯಾಗಿಸಬಲ್ಲ
ಸ್ವಾರ್ಥಕ್ಕೂ ತ್ಯಾಗದ ಲೇಪ ಹಚ್ಚಬಲ್ಲ
ಪ್ರೇಮಕ್ಕೆಂತಹ ಶಕ್ತಿ?



ನಿದ್ದೆ ಬಾರದ ರಾತ್ರಿಯಲ್ಲಿ
ಕಣ್ಣು ರೆಪ್ಪೆಗಳಿಗೆಷ್ಟು ಅಂತರ....
ಹೊರಳಾಡುವ ನರಕದಲ್ಲಿ
ಕನಸುಗಳೆಲ್ಲಿಗೆ ಸ್ಥಳಾಂತರ...

■ ಸಾವಂತ್ರಿ



ಕಾವೇರಿದ್ದ ಭೂಮಿಯು
ಮಳೆಯ ಪ್ರತಿ ಹನಿಯನ್ನೂ
ಪ್ರೇಯಸಿಯ ಮುತ್ತಿನಂತೆ
ಸ್ವೀಕರಿಸಿದ್ದು
ಸಹಜ ಪ್ರೇಮ....



ಕುರುಡ ಬೇಡಿದ ಭಿಕ್ಷೆಗೆ
ಲೋಕದ ಅಂಧತ್ವವೇ ದಾನ

2 ನೇ ಪುಟದಿಂದ...

ಹಣದುಬ್ಬರ, ಬೆಲೆ ಏರಿಕೆ ಮತ್ತು ಪ್ರಜಾ'ಸತ್ತೆ'?

ಟೀಕಿಸುತ್ತಿರುವ ಯಾವ ಪಕ್ಷಗಳೂ ಅದರಲ್ಲೂ ಮುಖ್ಯ ವಿರೋಧ ಪಕ್ಷವಾಗಿದ್ದ ಬಿಜೆಪಿ ಪ್ರಶ್ನಿಸಲೇ ಇಲ್ಲ. ಏಕೆಂದರೆ ಈ ಬಗೆಯ 27 ಅತ್ಯಗತ್ಯ ಆಹಾರ ವಸ್ತುಗಳನ್ನು ಮುಕ್ತ ಆಮದು ಪಟ್ಟಿಯಲ್ಲಿ ಇರಿಸಿದ್ದೇ ಆಗಿನ ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ!

ಅಂದರೆ ಆಹಾರ ಧಾನ್ಯದ ಉತ್ಪಾದನೆಯಲ್ಲಿ ಕುಸಿತವಿಲ್ಲ. ಆದರೂ ಆಹಾರ ಧಾನ್ಯಗಳ ಆಮದು ಆಗುತ್ತಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಆಹಾರ ಧಾನ್ಯಗಳ ಬೆಲೆ ಏರಿರುವುದರಿಂದ ಭಾರತದಲ್ಲಿ ಬೆಲೆ ಏರುತ್ತಾ ಹಣದುಬ್ಬರ ಆಗುತ್ತಿದೆ. ಆದ್ದರಿಂದ ಹಣದುಬ್ಬರದ ನಿಯಂತ್ರಣಕ್ಕೆ ಮತ್ತು ಬೆಲೆ ಏರಿಕೆ ನಿಯಂತ್ರಣಕ್ಕೆ ಇರುವ ಪರಿಣಾಮಕಾರಿ ಮಾರ್ಗ ಅನಗತ್ಯ ಆಹಾರ ಧಾನ್ಯಗಳ ಆಮದನ್ನು ತಡೆಯುವುದೇ ಅಲ್ಲವೇ? ಆದರೆ "ಹಣದುಬ್ಬರ ಉಂಟಾಗಿದೆ ಎಂದು ನಾವು ಕುರುಡು ನಿಯಂತ್ರಣವನ್ನು ಹೇರುವುದಾಗಲೀ, ಕೃಷಿ ಉತ್ಪನ್ನದ ಮಾರಾಟಗಳ ಮೇಲೆ ನಿಯಂತ್ರಣ ಹೇರುವುದನ್ನಾಗಲೀ ಮಾಡಲು ಸಾಧ್ಯವಿಲ್ಲ" ಎಂದು ಸಾಕ್ಷಾತ್ ಪ್ರಧಾನಮಂತ್ರಿಯೇ ಹೇಳಿದ್ದಾರೆ. ಮತ್ತೊಂದೆಡೆ ಕೇಂದ್ರ ಮಂತ್ರಿ ಸಿಬಾಲ್ ಹಣದುಬ್ಬರವನ್ನು ತಡೆಯಲು ಬಡಜನರಿಗೆ ಮತ್ತು ರೈತರಿಗೆ ಸಬ್ಸಿಡಿಗಳನ್ನು ಹೆಚ್ಚಿಸುವ ಯಾವ ಪ್ರಸ್ತಾಪವೂ ಸರ್ಕಾರದ ಮುಂದಿಲ್ಲವೆಂದು ಘಂಟಾಘೋಷವಾಗಿ ಸಾರಿದ್ದಾರೆ. ಆದರೆ ವಿದೇಶಿ ಆಹಾರ ವಸ್ತುಗಳ ಮೇಲಿನ ಆಮದು ಸುಂಕವನ್ನು ಬೇಕಿದ್ದಲ್ಲಿ ಕಡಿತಗೊಳಿಸುವುದನ್ನು ಸರ್ಕಾರ ಸಹಾನುಭೂತಿಯಿಂದ ಪರಿಶೀಲಿಸುತ್ತದೆ ಎಂದು ಹೇಳಿದ್ದಾರೆ.

ಆಮದಿನ ಮೇಲಿನ ಸುಂಕವನ್ನು ಕಡಿಮೆ ಮಾಡುವ ಕ್ರಮ ಆಮದನ್ನು ಹೆಚ್ಚಿಸುವ ಕ್ರಮವೇ ಹೊರತು ಆಮದನ್ನು ನಿಯಂತ್ರಿಸಿ ಬೆಲೆ ಏರಿಕೆಯನ್ನು ಹತೋಟಿಯಲ್ಲಿ ಇಡುವ ಕ್ರಮವಲ್ಲ. ಹೆಚ್ಚೆಂದರೆ ಅದು ಈಗಾಗಲೇ ಹೆಚ್ಚಿರುವ ವಿದೇಶಿ ಆಹಾರ ಧಾನ್ಯಗಳ ಬೆಲೆಯು ಭಾರತದ ಮಾರುಕಟ್ಟೆಯಲ್ಲಿ ಸುಂಕದ ದೆಸೆಯಿಂದ ಮತ್ತಷ್ಟು ಹೆಚ್ಚಾಗುವುದನ್ನು ತಡೆಯಬಹುದಷ್ಟೇ! ಅದೇ ರೀತಿ ಹಣದುಬ್ಬರವನ್ನು ಮತ್ತು ಬೆಲೆ ಏರಿಕೆಯನ್ನೂ ಚುನಾವಣಾ ವಿಷಯವನ್ನಾಗಿ ಮಾಡಿಕೊಳ್ಳುತ್ತೇವೆ ಎನ್ನುತ್ತಿರುವ ಬಿಜೆಪಿಯು ಸಹ ಜನರ ಬಗ್ಗೆ ಮೊಸಳೆ ಕಣ್ಣೀರು ಸುರಿಸುತ್ತಿದೆಯೇ ವಿನಃ ಹಣದುಬ್ಬರವನ್ನು ಯಾವ ರೀತಿಯಿಂದಲೂ ಕಡಿಮೆ ಮಾಡದ ಯುಪಿಎ ಸರ್ಕಾರದ ಈ ಅರೆಮನಸ್ಸಿನ ಕ್ರಮಗಳ ಬಗ್ಗೆ ಯಾವುದೇ ಚಕಾರವೆತ್ತುತ್ತಿಲ್ಲ. ಏಕೆಂದರೆ ಇವೆಲ್ಲವೂ ವಿಶ್ವ ವಾಣಿಜ್ಯ ಸಂಸ್ಥೆಯ ಶರತ್ತುಗಳ ಪ್ರತಿಫಲವೇ ಆಗಿದ್ದು ಕಾಂಗ್ರೆಸ್ ಮತ್ತು ಬಿಜೆಪಿ ಎರಡೂ ಸಹ ದೇಶದ ಜನತೆಯ ಬದುಕನ್ನು ವಿದೇಶಿ ಕಂಪನಿಗಳಿಗೆ ಮಾರಿಕೊಳ್ಳುವ ಈ ಹುನ್ನಾರದಲ್ಲಿ ಸಹ ಪಾಲುದಾರರೇ ಆಗಿದ್ದಾರೆ.



ಈಗಾಗಲೇ ಈ ಹಣದುಬ್ಬರದ ಪ್ರತಿಫಲವನ್ನು ಜಗತ್ತಿನಾದ್ಯಂತ ಜನತೆ ಅನುಭವಿಸುತ್ತಿದ್ದಾರೆ. ಭಾರತವನ್ನೂ ಒಳಗೊಂಡಂತೆ, ಬಾಂಗ್ಲಾ ದೇಶ, ಯೆಮೆನ್, ಬೊಲಿವಿಯಾ ಇನ್ನಿತ್ಯಾದಿ ದೇಶಗಳಲ್ಲಿ ಬಡ ಜನತೆಯ ದುಡಿಮೆಯಿಂದ ಎರಡು ಹೊತ್ತಿನ ಊಟವೂ ದೊರೆಯದಂತಹ ಭೀಕರ ಪರಿಸ್ಥಿತಿ ಎದುರಾಗಿದೆ. ಹೀಗಾಗಿಯೇ ಜಗತ್ತಿನೆಲ್ಲೆಡೆ ಬಡಜನರು ಆಳುವ ಸರ್ಕಾರಗಳ ವಿರುದ್ಧ ಬೀದಿ ಕಾಳಗದಲ್ಲಿ ತೊಡಗಿದ್ದಾರೆ. ಕಳೆದ ಎರಡು ಮೂರು ವಾರಗಳಲ್ಲಿ ಬೆಲೆ ಏರಿಕೆಯ ವಿರುದ್ಧ ಜಗತ್ತಿನಾದ್ಯಂತ ನಡೆದ ಹೋರಾಟಗಳಲ್ಲಿ ಹಲವಾರು ಜನ ಪೊಲೀಸರ ಗುಂಡಿಗೆ ಬಲಿಯಾಗಿದ್ದಾರೆ. ಕಳೆದ ವಾರ ಹೈಟಿಯಲ್ಲಿ ನಡೆದ ಗಲಭೆಗಳಲ್ಲಿ ನಾಲ್ಕು ಜನ ಸತ್ತಿದ್ದಾರೆ. ಕ್ಯಾಮರೂನ್ ದೇಶದಲ್ಲಿ ನಡೆದ ಬೆಲೆ ಏರಿಕೆ ವಿರುದ್ಧದ ಸಮರದಲ್ಲಿ 40 ಜನ ಸತ್ತಿದ್ದಾರೆ. ಮಾರಿಟಿಯಾನ, ಮೊಜಾಂಬಿಕ್, ಇಂಡೋನೇಷಿಯಾ, ಸೆನೆಗಲ್, ಉಜ್ಬೆಕಿಸ್ತಾನ್, ಯೆಮೆನ್, ಬೊಲಿವಿಯಾ ದೇಶಗಳಲ್ಲಿ ಸರ್ಕಾರದ ವಿರುದ್ಧ ಬಡ ಜನತೆಯ ಬೀದಿ ಸಮರಗಳು ಹೆಚ್ಚುತ್ತಿವೆ.

ಭಾರತದಲ್ಲೂ ಬೆಲೆ ಏರಿಕೆ ಮತ್ತು ಬಡಜನತೆಯ ಬವಣೆಗಳು ಆಫ್ರಿಕಾ ದೇಶಗಳಲ್ಲಿನ ಪರಿಸ್ಥಿತಿಯಂತೇ ಬಿಗಡಾಯಿಸುತ್ತಿದೆ. ಜನತೆಯ ನಿರೀಕ್ಷೆಗಳು ಹುಸಿಯಾಗಿ ತಾಳ್ಮೆಗೆಟ್ಟು ಜನ ಬೀದಿಗಿಳಿಯುತ್ತಿದ್ದಾರೆ. ಆದರೆ ಆಫ್ರಿಕಾ ದೇಶಗಳಲ್ಲಿ ಆಳುವ ಸರ್ಕಾರಗಳು ಜನತೆಯ ಪ್ರತಿರೋಧವನ್ನು ಹತ್ತಿಕ್ಕಲು ಬಂದೂಕಿನ ಗುಂಡುಗಳನ್ನು ಬಳಸಿದರೆ ಇಲ್ಲಿ "ಪ್ರಜಾಪ್ರಭುತ್ವ" ನೆಲೆಗೊಂಡಿರುವುದರಿಂದ ಭರವಸೆಯ ಗುಂಡುಗಳನ್ನು ಮತ್ತು ಚುನಾವಣೆಯೆಂಬ ಅನೆಸ್ತೇಷಿಯಾವನ್ನು ಬಳಸಲಾಗುತ್ತದೆ. ಆಗಲೂ ಬಡಜನ ಸಾಯುವುದು ಸರ್ಕಾರದ ದಮನದಿಂದಲೇ! ಆದರೆ ಪ್ರಜಾಪ್ರಭುತ್ವದ ಅಮಲಿನಲ್ಲಿ ಜನರಿಗೆ ತಮ್ಮನ್ನು ಸಾಯಿಸಿದವರು ಯಾರೆಂದು ತಿಳಿಯುವುದೇ ಇಲ್ಲ. ಇದೇ ಅಸ್ತಿತ್ವದಲ್ಲಿರುವ ಪ್ರಜಾ'ಸತ್ತೆ'ಯ ಗಮ್ಮತ್ತು! ■



ಇತ್ತೀಚೆಗೆ ಲಂಕೇಶ್ ವಾರ ಪತ್ರಿಕೆಯು ಅಪಾಯಕಾರಿ ಬಿಜೆಪಿಯ ಬಗ್ಗೆ ಮತ್ತು ಅದರಿಂದಾಗುತ್ತಿರುವ ದಲಿತರ ಮೇಲಿನ ದೌರ್ಜನ್ಯಗಳ ಬಗ್ಗೆ ಚಿತ್ರ ಸಹಿತ ಬರೆದು ಪ್ರಕಟಿಸಿರುವುದು ಸ್ವಾಗತಾರ್ಹ. ನಿಮ್ಮ ಈ ಲೇಖನದಿಂದಾದರೂ ಬಿಜೆಪಿಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿರುವ ಮತ್ತು ಬಿಜೆಪಿಯ ಉನ್ನತಿಗೆ ದುಡಿಯುತ್ತಿರುವ ದಲಿತ (ಮೂರ್ಖ)ರ ಕಣ್ ತೆರೆಯಲಿ ಮತ್ತು ಅವರ ನಿಜವಾದ ದಾರಿ ಹಾಗೂ ಕರ್ತವ್ಯದ ಅರಿವಾಗಲಿ.

ನೀವು ಬರೆದಿರುವಂತೆ ಬಿಜೆಪಿ ತನ್ನ ಅಂತರಾಳದಲ್ಲಿ ಶೂದ್ರ, ದಲಿತ, ರೈತ, ಕಾರ್ಮಿಕ (ಇತ್ತೀಚೆಗೆ ಯಡಿಯೂರಪ್ಪನವರು ಉತ್ತರ ಕರ್ನಾಟಕದಲ್ಲಿ ಮುಷ್ಕರನಿರತ ಕಾರ್ಮಿಕರ ಜೊತೆ ಅಸಹನೀಯವಾಗಿ ನಡೆದುಕೊಂಡು ಇದನ್ನು ಸಾಬೀತು ಪಡಿಸಿದ್ದಾರೆ) ಮತ್ತು ಮಹಿಳಾ ವಿರೋಧಿ ಪಕ್ಷವೂ ಹೌದು.

ಕಳೆದ ಮಾರ್ಚ್ 31ರಂದು ಚಿತ್ರದುರ್ಗದಲ್ಲಿ ದಲಿತರ (SC/ST) ಸಮಾವೇಶವನ್ನು ಬಿಜೆಪಿ ಏರ್ಪಡಿಸಿತ್ತು, ಅಲ್ಲಿ ಕಂಡ ದಲಿತರ ನಾಚಿಕೆಗೇಡಿನ ವರ್ತನೆ, ದಲಿತರನ್ನು ಗುಲಾಮರಂತೆ ನಡೆಸಿಕೊಳ್ಳುವ ಪುರೋಹಿತಶಾಹಿ ಬಿಜೆಪಿಗಳ ಯಜಮಾನ್ಯತೆ, ಎಲ್ಲವೂ ವಾಕರಿಕೆ ತರಿಸುವಂತಿತ್ತು, ಸ್ವಾಭಿಮಾನವಿಲ್ಲದ, ಅಂಬೇಡ್ಕರ್ ವಿರೋಧಿಗಳಾಗಿರುವ, ದಲಿತ ವಿರೋಧಿಗಳಾಗಿಯೂ ತಮ್ಮನ್ನು ಸ್ವಯಂಘೋಷಿತ ದಲಿತ ನಾಯಕರೆಂದು ಬಿಂಬಿಸಿಕೊಳ್ಳುವ ಹಲವು ಜನ ಬಿಜೆಪಿ ಕೊಡುವ ಎಂಜಲಿಗಾಗಿ ಆ ಪಕ್ಷದ ನಾಯಕರನ್ನು ಆ ಸಮಾವೇಶದಲ್ಲಿ ಇಂದ್ರ, ಚಂದ್ರ ಎಂದು ಹೊಗಳಿದ್ದು ಮತ್ತು ಅವರು ಕಾಲಲ್ಲಿ ತೋರಿಸಿದ್ದನ್ನು ತಮ್ಮ ತಲೆಯ ಮೇಲೆ ಹೊತ್ತು ಮೆರೆದದ್ದೂ ಅಸಹ್ಯ ಹುಟ್ಟಿಸುವಂತಿತ್ತು.

ಮಾದಿಗ ಜನಾಂಗದವರನ್ನು ತಮ್ಮತ್ತ ಸೆಳೆಯಲೆಂದೇ ಕಮ್ಯುನಿಸ್ಟ್ ಪರಂಪರೆಯಿಂದ ತಮ್ಮ ರಾಜಕೀಯ ಜೀವನ ಪ್ರಾರಂಭಿಸಿದ ಶಾಣಪ್ಪನವರಿಗೆ ಬಿಜೆಪಿ ಕೊಟ್ಟ ಭಿಕ್ಷೆ ರಾಜ್ಯಸಭಾದ ಸದಸ್ಯತ್ವ. ಇದರಿಂದ ಸಂಪ್ರೀತರಾದ ಶಾಣಪ್ಪನವರು ಬಿಜೆಪಿ ನಾಯಕರನ್ನು ಯದ್ವಾತದ್ವಾ ಹೊಗಳುತ್ತಾ, ಬಿಜೆಪಿಯ ತತ್ವಸಿದ್ಧಾಂತಗಳ ಬಗ್ಗೆ ಪುರೋಹಿತರಿಗಿಂತಲೂ ಹೆಚ್ಚಾಗಿ ಆ ಸಮಾವೇಶದಲ್ಲಿ ಮಾತನಾಡಿದ್ದು ವಿಪರ್ಯಾಸವೇ ಸರಿ.

ಎಸ್‌ಸಿ/ಎಸ್‌ಟಿ ಎಂಪ್ಲಾಯೀಸ್ ಯೂನಿಯನ್ನಿನ ಲೀಡರ್ ಆಗಿದ್ದ ಡಿ.ಎಸ್. ವೀರಯ್ಯ ಎಂಬಾತ ಸಮಯ ಸಿಕ್ಕಾಗಲೆಲ್ಲ ಬುದ್ಧಿ (ಲದ್ದಿ) ಜೀವಿಯಂತೆ ವರ್ತಿಸುವಾತ. ಈತನ ಮೂಲಕವೂ ದಲಿತರನ್ನು ಓಲೈಸುವ ದೃಷ್ಟಿಯಿಂದ ಈತನಿಗೆ ಬಿಜೆಪಿ ಕೊಟ್ಟ ಭಿಕ್ಷೆ ಎಂಎಲ್‌ಸಿಗಿರಿ. ಇದರಿಂದ ತೃಪ್ತನಾಗಿರುವ ವೀರಯ್ಯ ಅದೇ ಸಮಾವೇಶದಲ್ಲಿ ಯಡಿಯೂರಪ್ಪ ದಲಿತರ ಉದ್ಧಾರಕ್ಕೆ ಹುಟ್ಟಿರುವ ಮತ್ತೊಬ್ಬ ಅಂಬೇಡ್ಕರ್ ಎಂದೂ, ಮತ್ತೊಬ್ಬ ಗೌತಮ ಬುದ್ಧನೆಂದೂ ಕರೆದದ್ದೂ ಎಲ್ಲರಲ್ಲಿ ದಿಗ್ಭ್ರಮೆ ಮೂಡಿಸಿತು.



ಪುರೋಹಿತಶಾಹಿಗಳ ಗುಲಾಮ ಯಡಿಯೂರಪ್ಪನೆಲ್ಲಿ? ರಾಜಕುಮಾರನಾಗಿ ಜನಿಸಿದ್ದ ಸಿದ್ಧಾರ್ಥ ಗೌತಮನಾಗಿ ಸಮಾಜಕ್ಕೆ ಹೊಸ ದಿಕ್ಕನ್ನೇ ಕೊಟ್ಟ ಬುದ್ಧನೆಲ್ಲಿ? ಯಡಿಯೂರಪ್ಪನಂತಹ ಅಯೋಗ್ಯರನ್ನು ಹೊಗಳಲೂ ಒಂದು ಮಿತಿ ಬೇಡವೆ ಈ ಮೂರ್ಖರಿಗೆ? ಇಂತಹ ದಲಿತ ಮುಖಂಡರಿಂದಲೇ ಇವತ್ತು ದಲಿತರು ಸರ್ವನಾಶವಾಗುತ್ತಿರುವುದು. ಇಂತಹವರ ಬಗ್ಗೆ ಇವರು ಪ್ರತಿನಿಧಿಸುತ್ತಿರುವ ಸಂಘಟನೆಯ ಅಸಲಿ ಸಿದ್ಧಾಂತದ ಬಗ್ಗೆ ನೀವು ದಲಿತರನ್ನು ಎಚ್ಚರಿಸುತ್ತಿರಬೇಕು.


ಈ ಬಾರಿ ಯಾವ ಕಾರಣಕ್ಕೂ ಬಿಜೆಪಿ ಅಧಿಕಾರಕ್ಕೆ ಬಾರದಂತೆ ತಡೆಯಲು ನಿಮ್ಮ ಪತ್ರಿಕೆ ದಲಿತರಿಗೆ ಮಾರ್ಗದರ್ಶನ ನೀಡಲಿ. ನಿಮ್ಮ ಹೋರಾಟಕ್ಕೆ ನನ್ನಂತಹ ಸಾವಿರಾರು ದಲಿತ ಯುವಕರ ಮತ್ತು ಪ್ರಜ್ಞಾವಂತರ ಸಹಕಾರ ನಿರಂತರವಾಗಿರುತ್ತದೆ.

- ಟಿ.ಎಸ್. ಮುನಿಯಪ್ಪ

'ಶ್ರೀರಾಮುಲು: ಮನವಾಡಾ? ರೆಡ್ಡಿವಾಡಾ?' ಎಂಬ ವರದಿಗೆ ಪೂರಕವಾಗಿ ಈ ಪತ್ರ. ಶ್ರೀರಾಮುಲು ಕ್ಯಾಬಿನೆಟ್ ಮಂತ್ರಿಯಾಗಿದ್ದಾಗಲೂ ರೆಡ್ಡಿಗಳು ಆತನನ್ನು ತಮ್ಮ ಬಾಡಿಗೆ ಬಂಟನಂತೆ ಬಳಸಿಕೊಂಡಿರುವುದು ಎಲ್ಲರಿಗೂ ತಿಳಿದಿರುವ ಸತ್ಯ. ಯಾವುದೇ ವಿವಾದಗಳು ಎದ್ದಾಗ (ಉದಾಹರಣೆಗೆ ನಗರಸಭಾ ಚುನಾವಣೆಯಲ್ಲಿ ರೆಡ್ಡಿಯ ಸಂಬಂಧಿಕರ ಮನೆಯಲ್ಲಿದ್ದ ಮದ್ಯದ ದಾಸ್ತಾನಿನ ಮೇಲೆ ಪೊಲೀಸರು ದಾಳಿ ಮಾಡಿದಾಗ) ರೆಡ್ಡಿಗಳ ಪರವಾಗಿ ಶ್ರೀರಾಮುಲು ತೋಳೇರಿಸಿಕೊಂಡು ಹೋಗಿ ಬೀದಿ ರೌಡಿಯಂತೆ ಫೈಟ್ ಮಾಡಬೇಕು. ಈ ಬಗ್ಗೆ ಸ್ವತಃ ಶ್ರೀರಾಮುಲು ತನ್ನ ಆಪ್ತರ ಮುಂದೆ "ಈ ರೆಡ್ಡಿಗಳು ನನಗಲ್ಲದೇ ಹೋದರೂ ನನ್ನ ಕ್ಯಾಬಿನೆಟ್ ಮಂತ್ರಿಸ್ಥಾನಕ್ಕಾದರೂ ಬೆಲೆ ಕೊಡಬಾರದೇ? ತಾವು ನಾಲ್ಕು ಜನ ಅಣ್ಣತಮ್ಮಂದಿರಿದ್ದು ತಮ್ಮಲ್ಲೇ ಒಬ್ಬರು ಹೋಗಬಹುದಲ್ಲವೇ? ನಾನು ಮಂತ್ರಿ ಎನ್ನುವುದನ್ನೇ ಮರೆತು ಸಣ್ಣ ಸಣ್ಣ ವಿಷಯಗಳಿಗೂ ನನಗೇ ಫೋನ್ ಮಾಡುತ್ತಾರೆ" ಎಂದು ನೋವು ತೋಡಿಕೊಂಡಿದ್ದನಂತೆ. ಆದರೆ ಈತನ ದೌರ್ಬಲ್ಯವೇನಿದೆಯೋ ಏನೋ? ಈಗಲೂ ರೆಡ್ಡಿಗಳ ಮುಂದೆ ತುಟಿಪಿಟಕ್ಕೆನ್ನುವುದಿಲ್ಲ.

ಈಗ ಚುನಾಯಿತ ಸರಕಾರ ಇಲ್ಲದಿರುವುದು ಗಣಿ ಮಾಲೀಕರಿಗೆ ಮಂತ್ರಿಗಳ 'ವಸೂಲಿ ಕಾಟ' ಇಲ್ಲದಂತಾಗಿದೆ. ಆದರೂ ರೆಡ್ಡಿಗಳ ವಸೂಲಿಯಿಂದ ಅವರು ತಪ್ಪಿಸಿಕೊಳ್ಳಲಿಕ್ಕಾಗುತ್ತಿಲ್ಲ. ತಿಂಗಳಿಗೊಮ್ಮೆ ಸಾಮೂಹಿಕ ವಿವಾಹ, ಯುಗಾದಿ ಉತ್ಸವ, ತೆಲುಗು ಸಮಾವೇಶಗಳ ಹೆಸರಿನಲ್ಲಿ ಜಿಲ್ಲೆಯ ಪ್ರತಿ ಗಣಿಮಾಲೀಕರಿಂದಲೂ ರೆಡ್ಡಿಗಳು 10 ರಿಂದ 20 ಲಕ್ಷಗಳವರೆಗೆ ವಸೂಲಿ ಮಾಡುತ್ತಲೇ ಇದ್ದಾರೆ. ಅದೆಲ್ಲ ಇರಲಿ, ಈ ರೆಡ್ಡಿಯ ಪ್ರಸ್ತುತ ರಾಜಕೀಯ ಸ್ಕೆಚ್ ಅಂತೂ ಕನ್ನಡಿಗರು ಭಯಪಡುವಂತಿದೆ. ಈ ಬಾರಿ ಚುನಾವಣೆಯಲ್ಲಿ ಸುಮಾರು 40 ಮಂದಿ ತೆಲುಗು ಭಾಷಿಕರಿಗೆ ಬಿಜೆಪಿ ಟಿಕೆಟ್ (ಬೆಂಗಳೂರು ನಗರದಲ್ಲಿ 15 ಜನ; ಚಿಕ್ಕಬಳ್ಳಾಪುರ, ಕೋಲಾರ ಹಾಗೂ ಬೆಂಗಳೂರು

ದಲಿತ ವಿರೋಧಿ ಪುರೋಹಿತಶಾಹಿಗಳ ಗುಲಾಮ ಯಡ್ಡಿ



ಗ್ರಾಮಾಂತರ ಜಿಲ್ಲೆಗಳಿಂದ 10 ಜನ; ಬಳ್ಳಾರಿ ಜಿಲ್ಲೆಯಲ್ಲಿ ತೆಲುಗು ಮಾತೃಭಾಷೆಯ ಬೇಡ ಜನಾಂಗದವರಿಗೆ) ಕೊಡಿಸುವ ಉದ್ದೇಶ ರೆಡ್ಡಿಯದ್ದು. ಅವರಲ್ಲಿ ಕನಿಷ್ಠ 30 ಜನರಾದರೂ ಗೆದ್ದು ಶಾಸಕರಾದರೆ ಅವರೆಲ್ಲರ ಬೆಂಬಲದೊಂದಿಗೆ ಬಿಜೆಪಿ ಶಾಸಕಾಂಗ ಪಕ್ಷದ ನಾಯಕ ಸ್ಥಾನಕ್ಕೆ ಹಕ್ಕು ದಾವೆ ಹೂಡುವುದು ರೆಡ್ಡಿಯ ಗುರಿ. ಇದಕ್ಕೆ ಸ್ಫೂರ್ತಿ ಏನೆಂದರೆ ಕಳೆದ ಚುನಾವಣೆಯಲ್ಲಿ ಬಿಜೆಪಿಯ 79 ಶಾಸಕರ ಶಾಸಕಾಂಗ ಪಕ್ಷದ ಅಧ್ಯಕ್ಷಸ್ಥಾನಕ್ಕೆ ಯಡಿಯೂರಪ್ಪ ಮತ್ತು ಅನಂತ್‌ಕುಮಾರ್ ನಡುವೆ ಮುಸುಕಿನ ಗುದ್ದಾಟ ನಡೆದು ಕೊನೆಗೆ 33 ಲಿಂಗಾಯತ ಶಾಸಕರು ಪಕ್ಷಾಂತರ ಮಾಡುವ ಬೆದರಿಕೆ ಹಾಕಿದಾಗ, ಅನಂತ್ ಹಿಂದೆ ಸರಿದು ಯಡ್ಡಿಗೆ ಪಟ್ಟ ಕಟ್ಟಲಾಯಿತು. ಹೇಗಿದ್ದರೂ ಈ ಬಾರಿಯೂ ಬಿಜೆಪಿ 70 ರಿಂದ 80 ಸ್ಥಾನಗಳಷ್ಟೇ ಗೆಲ್ಲುವುದು ಖಚಿತ. ಆಗ 30 ಶಾಸಕರ ಬೆಂಬಲವಿದ್ದರೆ ತಾನೇ ಶಾಸಕಾಂಗ ಪಕ್ಷದ ನಾಯಕನಾಗಬಹುದಲ್ಲವೆ ಎಂಬುದು ರೆಡ್ಡಿಯ ಯೋಜನೆ. ಇದಕ್ಕಾಗಿ ಈತ 100 ಕೋಟಿ ರೂ.ಗಳ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿದ್ದಾನೆ. ಇದಕ್ಕೆ ಅನಂತ್‌ಕುಮಾರ್, ಸುಷ್ಮಾ ಸ್ವರಾಜ್ ಮತ್ತು ವೆಂಕಯ್ಯ ನಾಯ್ಡುಗಳ ಬೆಂಬಲವೂ ಇದೆ.

ಈ ರೆಡ್ಡಿಗಳಿಂದ ಕರ್ನಾಟಕಕ್ಕೆ ಏನೇನು ಕಾದಿದೆಯೋ? ನೆನೆಸಿಕೊಂಡರೆ ಭಯವಾಗುತ್ತದೆ.

-ಕುಮಾರರಾಮ, ಬಳ್ಳಾರಿ

ಚಿತ್ರದುರ್ಗದ ಮುರುಘ ರಾಜೇಂದ್ರ ಶರಣರು ಹಮ್ಮಿಕೊಂಡ ಬಸವ ಧರ್ಮದ ಲಿಂಗ ದೀಕ್ಷೆಯ ಬಗ್ಗೆ ತಲೆ ಕೆಡಿಸಿಕೊಂಡಿರುವ ಪೇಜಾವರರು ಲಿಂಗಾಯತರನ್ನು ಮತಾಂತರಿಗಳೆಂದು ಜರೆದಿರುವುದನ್ನು ನೋಡಿದರೆ-ವಿನಾಶಕಾಲೇ ವಿಪರೀತ ಬುದ್ಧಿ ಎಂಬ ಗಾದೆ ಮಾತು ನೆನಪಾಗುತ್ತದೆ. ಪೇಜಾವರರ ಫಾರಿನ್ ಮಠ ಯೋಜನೆಯನ್ನುದ್ದೇಶಿಸಿ ಪುತ್ತಿಗೆ ಶ್ರೀಗಳ ಭಕ್ತವೃಂದ ಪ್ರಕಟಿಸಿರುವ ಕರಪತ್ರದಲ್ಲಿ ಕೇಳಲಾದ ಪ್ರಶ್ನೆಗಳಾಗಲೀ, ನಿಮ್ಮ ಪ್ರಶ್ನೆಗಳೇ ಆಗಲೀ 'ವರ್ಗಾಂತರ'ದ ಹಾದಿಯಲ್ಲಿರುವ ಪೇಜಾವರರಿಗೆ ನಾಟುವ ಪ್ರಶ್ನೆಯೇ ಇಲ್ಲ.

ಪೇಜಾವರ ಶ್ರೀಗಳು ಸಾರ್ವಜನಿಕ ಸಮಾರಂಭಗಳಲ್ಲಾಗಲೀ, ಮಾಧ್ಯಮಗಳ ಸಂದರ್ಶನಗಳಲ್ಲಾಗಲೀ, ಉದುರಿಸುವ ಮುತ್ತುಗಳೆಂದರೆ- "ಅಸ್ಪೃಶ್ಯತೆ ಹಿಂದೂ ಧರ್ಮಕ್ಕಂಟಿದ ಶಾಪ. ಅದರ ನಿರ್ಮೂಲನಕ್ಕಾಗಿ ನಾವೆಲ್ಲ ಹೋರಾಡಬೇಕು" ಎಂಬುದು. ಇದೇ ಮಹಾನುಭಾವರು ಹುಟ್ಟೂರು ರಾಮಕುಂಜದಲ್ಲಿ ಇತ್ತೀಚೆಗೆ ಹಮ್ಮಿಕೊಂಡಿದ್ದ ಮೂರು ದಿನದ ಕಾರ್ಯಕ್ರಮದಲ್ಲಿ "ಅಸ್ಪೃಶ್ಯನೊಬ್ಬ ನನಗೆ ಜೀವದಾನ ಮಾಡಿದ್ದ" ಎಂದು ಅಸ್ಪೃಶ್ಯರನ್ನು 'ವಾಚಾಮಗೋಚರ' ಹೊಗಳಿದರು. ಬಾಲ್ಯದಲ್ಲಿ ಬಾವಿಗೆ ಬಿದ್ದ ಇವರನ್ನು ಅಸ್ಪೃಶ್ಯನೊಬ್ಬ ಉಳಿಸಿದನಂತೆ.

ಆದರೆ ಇವರದ್ದೇ ಉಸ್ತುವಾರಿಯ ಆ ಕಾರ್ಯಕ್ರಮದಲ್ಲಿ ಇದ್ದ ಭೋಜನ ವ್ಯವಸ್ಥೆ (ತಯಾರಿ ಹಾಗು ಸ್ವೀಕಾರ)ಯಲ್ಲಿ ಮಾತ್ರ ಬ್ರಾಹ್ಮಣರು-ಇತರರು ಎಂಬ ಬೇಧ ಭಾವವಿತ್ತು. ಅದರ ಬಗ್ಗೆ ಮಾತ್ರ ಪೇಜಾವರರು ಚಕಾರವೆತ್ತಲೇ ಇಲ್ಲ! ಪೇಜಾವರರ ಅಸ್ಪೃಶ್ಯತಾ ನಿರ್ಮೂಲನ ಹೋರಾಟದ ಪರಿ ಇದು! ಅದೇರೀತಿ ಉಡುಪಿಯ ಬನ್ನಂಜೆಯಲ್ಲಿರುವ ಬಿಲ್ಲವರ ನಾರಾಯಣ ಗುರು ಮಂದಿರಕ್ಕೆ ಬಿಜಂಗೈದ ಪೇಜಾವರರನ್ನು ಬಿಲ್ಲವರು ಪ್ರೀತಿಯಿಂದ ಬರಮಾಡಿಕೊಂಡರಲ್ಲದೆ ಭಕ್ತಿಯಿಂದ ಸತ್ಕರಿಸಿದರು. ಆ ಬಳಿಕ ಪೇಜಾವರರ ಕೈಯಿಂದ ತಮ್ಮ ಪೂಜ್ಯ ನಾರಾಯಣ ಗುರುಗಳಿಗೆ ಪೂಜೆ ಮಾಡುವಂತೆ ವಿನಂತಿಸಿಕೊಂಡರು. ಆದರೆ ಕೆಳವರ್ಗಕ್ಕೆ ಸೇರಿದ ನಾರಾಯಣ ಗುರುಗಳಿಗೆ ವಂದಿಸುವುದನ್ನು ಸಾರಾಸಗಟಾಗಿ ತಿರಸ್ಕರಿಸಿದ ಪೇಜಾವರರು ಬಿಲ್ಲವ ಸಮುದಾಯದವರಿಗೂ, ಅವರ ಗುರುಗಳಿಗೂ ಅವಮಾನ ಮಾಡಿದರು. ಇದನ್ನೆಲ್ಲ ನೋಡಿದಾಗ ಅವರೀಗ ಆರಂಭಿಸ ಹೊರಟಿರುವ ವೈಷ್ಣವ ಧರ್ಮ ದೀಕ್ಷಾ ಕಾರ್ಯಕ್ರಮದ ಹಣೆಬರಹ ಏನಾಗಬಹುದೆಂಬುದನ್ನು ಈಗಲೇ ಊಹಿಸಬಹುದಲ್ಲವೇ?


-ರವಿ ಪುತ್ತೂರ, ದಕ್ಷಿಣ ಕನ್ನಡ

"ಸತ್ಯ-ಸುಳ್ಳುಗಳ ಹೊಗೇನಕಲ್ ವಿವಾದ" ಎಂಬ ಸಂಪಾದಕೀಯ ಹೊಗೇನಕಲ್ ವಿವಾದದ ಬಗ್ಗೆ ವಾಸ್ತವದ ಬೆಳಕು ಚೆಲ್ಲಿತು. ಇದು ಎರಡು ರಾಜ್ಯಗಳ ನಡುವಿನ ಕುಡಿಯುವ ನೀರಿನ ಹಾಗೂ ವಿದ್ಯುತ್ ಉತ್ಪಾದನಾ ವಿವಾದವಾಗಿದ್ದು ಪರಸ್ಪರ ಮಾತುಕತೆಯ ಮೂಲಕ ಬಗೆಹರಿಸಿಕೊಳ್ಳಬಹುದಾಗಿದೆ. ಆದರೆ ಇದಕ್ಕೆ ಇಂದು ಹಲವರು ರಾಜಕೀಯ ಬಣ್ಣ ಹಚ್ಚುತ್ತಿರುವುದು ವಿಷಾದನೀಯ.

-ಡಿ.ಎಲ್. ನಾಗರಾಜ್, ಹರಪನಹಳ್ಳಿ

ಏಪ್ರಿಲ್ 9ರ 'ಕಂಡಹಾಗೆ' ಪ್ರಸಕ್ತ ಚುನಾವಣೆಯ ಸಂದರ್ಭದಲ್ಲಿ ನಮ್ಮ ಮುಂದಿರುವ ಆಯ್ಕೆಗಳ ಕುರಿತು ಹೇಳುತ್ತಾ, ಮತದಾನದ ವಿಚಾರದಲ್ಲಿ ನಾಗರಿಕರೆಲ್ಲಾ ಪ್ರಜ್ಞಾವಂತರಾಗಬೇಕೆಂದು ತಿಳಿಸಿತು. ಮತದಾನ ನಮ್ಮೆಲ್ಲರ ಹಕ್ಕಾದರೂ, ಈ ಹಕ್ಕನ್ನು ಸರಿಯಾಗಿ ಉಪಯೋಗಿಸಿ ಸಮಾಜದ ಒಳಿತಿಗಾಗಿ ದುಡಿಯುವ ನಾಯಕನನ್ನೇ ಆರಿಸಬೇಕಾಗಿದೆ. ಬೊಗಳೆ ಮಾತನ್ನಾಡಿ ವಂಚಿಸುವ ನಾಯಕರು ನಮಗೆ ಬೇಡ. ಹಾಗೆಯೇ ಸ್ವಾರ್ಥ ರಾಜಕಾರಣಿಗಳೂ ಬೇಡ. ಬದಲಾಗಿ ಎಲ್ಲರನ್ನ ಸಮಾನವಾಗಿ ನೋಡುವ, ಸಮಾಜದ ಬಡವರ ಹಿತವನ್ನು ಕಾಪಾಡುವ ನಾಯಕ ಬೇಕು. ಆದರೆ ಈಗಾಗಲೇ ಹೀನಾಯ ಸ್ಥಿತಿ ತಲುಪಿರುವ ಎಲ್ಲಾ ರಾಜಕೀಯ ಪಕ್ಷಗಳು ರಿಯಲ್ ಎಸ್ಟೇಟ್ ಉದ್ಯಮಿ, ರೌಡಿಗಳ ಆಕ್ರಮಣಕ್ಕೆ ಒಳಗಾಗಿವೆ. ಅಂತಹ ವಲಯಗಳಿಂದ ಬಂದವರಿಗೇ ಟಿಕೆಟ್ ನೀಡುತ್ತಿವೆ. ನಾಗರಿಕರಾದ ನಾವು ಅಂತಹ ವ್ಯಕ್ತಿಗಳಿಗೆ ನಮ್ಮ ಮತ ಹಾಕಬೇಕೆ? ಇದೆಂತಹ ಸಂಕಟ ನಮ್ಮ ಎದುರಿಗಿದೆ?

- ಶಂಶೀರ್, ಬುದೋಳಿ



ಸರ್ಕಾರಕ್ಕೆ ಬ್ಲೇಡು ಹಾಕಿದ 'ಗರಗಸ'

ಮತ್ತೊಂದು ಚಿತ್ರ ಸಬ್ಸಿಡಿ ಕಮಿಟಿಗೆ ಉಂಡೆ ನಾಮ ತಿಕ್ಕುವಲ್ಲಿ ಯಶಸ್ವಿಯಾಗಿದೆ. ಈ ವಾರ ತೆರೆ ಕಂಡಿರುವ ದಿನೇಶ್ ಬಾಬು ನಿರ್ದೇಶನದ 'ಮಿ. ಗರಗಸ' ಚಿತ್ರ 'ಡಿನ್ನರ್ ಗೇಮ್' ಎಂಬ ಫ್ರೆಂಚ್ ಚಿತ್ರ ಮತ್ತು ಇತ್ತೀಚೆಗೆ ತಾನೆ ಹಿಂದಿಯಲ್ಲಿ ನಿರ್ಮಾಣವಾಗಿದ್ದ 'ಬೇಜಾ ಫ್ರೈ' ಸಿನಿಮಾದ ರೀಮೇಕ್. 'ಗರಗಸ'ವನ್ನು ನೋಡಿದ ಎಂಥ ದಡ್ಡನಿಗಾದರೂ ಈ ವಿಷಯ ಗೊತ್ತಾಗದೇ ಇರುವುದಿಲ್ಲ.

ಆದರೂ ಈ ಚಿತ್ರದವರು 'ಸಂಪೂರ್ಣ ಸ್ವಮೇಕ್' ಎಂದು ಹೇಳಿಕೊಂಡು ಹಂಡ್ರೆಡ್ ಪರ್ಸೆಂಟ್ ಟ್ಯಾಕ್ಸ್ ಫ್ರೀ ಪಡೆದಿದ್ದಾರೆ. ಅಲ್ಲದೆ ಈ ಚಿತ್ರಕ್ಕೆ ಹೆಚ್ಚೆಂದರೆ ನಲವತ್ತೈದು ಐವತ್ತು ಲಕ್ಷ ಖರ್ಚಾಗಿರಬಹುದು. ಹೀಗೆ ಕಡಿಮೆ ಖರ್ಚಿನಲ್ಲಿ ಕದ್ದ ಕತೆಗಳೊಂದಿಗೆ ಸಿನಿಮಾ ಮಾಡಿ ಲಾಭ ಮಾಡುವ ಇವರುಗಳ ಮಧ್ಯೆ ವರ್ಷಗಟ್ಟಲೆ ಕೂತು ಕತೆ ಹೆಣೆದು ಕೋಟಿಗಟ್ಟಲೆ ದುಡ್ಡು ಸುರಿದು ಸಿನಿಮಾ ಮಾಡುವವರಿಗೆ ಅನ್ಯಾಯವಾಗುವುದಿಲ್ಲವೇ?


ಸಿನಿಮಾಮಂದಿಗೇನೋ ಸರ್ಕಾರವನ್ನು ಮಂಗ ಮಾಡುವುದೇ ಫುಲ್‌ಟೈಂ ಕೆಲಸ. ಆದರೆ ಸರ್ಕಾರ ನೇಮಿಸಿರುವ 'ರಿಮೇಕ್ ಪೊಲೀಸಿಂಗ್ ಕಮಿಟಿ' ಯವರೇನು ಮಂಡಕ್ಕಿ ತಿನ್ನುತ್ತಿರುತ್ತಾರಾ? ಇಂತಹ ಕಳ್ಳರನ್ನು ಹಿಡಿದು ಅವರಿಂದ ಹಣ ಕಕ್ಕಿಸಲೇ ಬೇಕಲ್ಲವೇ?

ಅಮೀರ್ ಈಗ 'ಗಜಿನಿ'

ಅಮೀರ್ ಖಾನ್‌ನ ಮುಂದಿನ ಚಿತ್ರ 'ಗಜಿನಿ' ಎಂಬುದು ಈಗ ಖಚಿತವಾಗಿದೆ. ಸೂರ್ಯ ನಟಿಸಿದ್ದ 'ಗಜಿನಿ' ಚಿತ್ರ ತಮಿಳುನಾಡಿನಲ್ಲಿ ಸೂಪರ್ ಹಿಟ್ ಆಗಿತ್ತು. ಈ 'ಗಜಿನಿ'ಯ ಹಿಂದಿ ಅವತರಣಿಕೆಯನ್ನು ಸಹ ತಮಿಳು ನಿರ್ದೇಶಕ ಮುರುಗದಾಸ್‌ರೇ ನಿರ್ದೇಶಿಸುತ್ತಿದ್ದಾರೆ. ಈಗಾಗಲೇ 'ಗಜಿನಿ' ಹೆಸರು ಪಾಪ್ಯುಲರ್ ಆಗಿರುವುದರಿಂದ ಹಿಂದಿಯಲ್ಲೂ ಅದೇ ಹೆಸರನ್ನೇ ಇಟ್ಟಿದ್ದಾರೆ.

'ಗಜಿನಿ'ಗಾಗಿ ಅಮೀರ್‌ಖಾನ್ ತನ್ನ ಕೇಶಮುಂಡನ ಮಾಡಿಸಿಕೊಂಡು ವಿಭಿನ್ನವಾದ ಗೆಟಪ್ಪಿನಿಂದ, ಬೋಳು ತಲೆಯಲ್ಲಿ ಮಿರಮಿರ ಮಿಂಚುತ್ತಿದ್ದಾರೆ.

ಹಾಗೆ ನೋಡಿದರೆ ಕನ್ನಡದವರು 'ಗಜಿನಿ' ಚಿತ್ರದ ಹಲವಾರು ಭಾಗಗಳನ್ನು ಬೇರೆ ಬೇರೆ ಚಿತ್ರಗಳಲ್ಲಿ ಪಿತ ನೀರಾವರಿಯಂತೆ ಉಪಯೋಗಿಸಿಕೊಂಡಿದ್ದಾರೆ. ಏನೇ ಆಗಲಿ ನಮ್ಮ ಕನ್ನಡದವರು ಕದಿಯೋದ್ರಲ್ಲೂ ತುಂಬಾ ಫಾಸ್ಟು!



ಕ್ರಿಕೆಟ್ ಅಭಿಮಾನಿಗಳು ಯಾರು? ಓಳು ಬಿಡುವವರು ಯಾರು?

ಮುಂದಿನವಾರ ಬೆಂಗಳೂರಿನಲ್ಲಿ ಬಹು ನಿರೀಕ್ಷೆಯ ಅದ್ದೂರಿಯ ಐಪಿಎಲ್ ಕ್ರಿಕೆಟ್ ಪಂದ್ಯಾವಳಿ ಆರಂಭವಾಗಲಿದೆ. ಈ ಪಂದ್ಯಾವಳಿಯಲ್ಲಿ ರಾಹುಲ್ ದ್ರಾವಿಡ್ ನಾಯಕತ್ವದ ಬೆಂಗಳೂರು ತಂಡ ಆರಂಭದ ಪಂದ್ಯವನ್ನು ಆಡಲಿದೆ. ಈ ತಂಡದ ಯಜಮಾನ ಯುಬಿ ಕಂಪೆನಿಯ ವಿಜಯಮಲ್ಯ ಆದ್ದರಿಂದ ಅಂದು ಸಾಕಷ್ಟು ಸಿನಿಮಾ ತಾರೆಯರು, ಬಿಕಿನಿ ಬೆಡಗಿಯರು ಇದ್ದೇ ಇರುತ್ತಾರೆಂದೇ ಅರ್ಥ.

ಅಷ್ಟೇ ಅಲ್ಲ, ಕನ್ನಡ ಚಿತ್ರರಂಗದ ಉಪೇಂದ್ರ ಮತ್ತು ರಮ್ಯಾ ತರಹದ ತಾರೆಯರು ಕೂಡಾ ವಿಶೇಷ ಅತಿಥಿಗಳಾಗಿ ಅಲ್ಲಿ ಪ್ರೇಕ್ಷಕರನ್ನು ರಂಜಿಸಲಿದ್ದಾರಂತೆ. ಹೀಗಾಗಿ ಉಪ್ಪಿ ಈಗಲೇ "ನನಗೆ ಕ್ರಿಕೆಟ್ ಎಂದರೆ ಪಂಚಪ್ರಾಣ" ಎಂದೆಲ್ಲಾ ಓಳು ಬಿಡಲು ಆರಂಭಿಸಿದ್ದಾರೆ. ವಾಸ್ತವವಾಗಿ ಇಂತಹ ಸಮಾರಂಭಗಳಿಗೆ ದುಬಾರಿ ಹಣ ಕೊಟ್ಟು ತಾರೆಯರನ್ನು ಆಹ್ವಾನಿಸುವುದು ಸಂಪ್ರದಾಯ. ಅಂದರೆ ಕನ್ನಡ ತಾರೆಯರಿಗೆ ಮಲ್ಯ ಸಾಕಷ್ಟು ಹಣ ನೀಡಿರುವುದರಿಂದ ಇವರೆಲ್ಲ ವಿಶೇಷ 'ಆಹ್ವಾನಿತರಾಗಿ' ಅಂದು ಮೆರೆಯಲಿದ್ದಾರೆಯೇ ಹೊರತು ಕ್ರಿಕೆಟ್ ಬಗ್ಗೆ ಅವರಿಗೆ ಅಪಾರ ಆಸಕ್ತಿ ಇದೆ ಎಂಬ ಕಾರಣಕ್ಕಲ್ಲ.

ಹಾಗೆ ನೋಡಿದರೆ ಈ ಹಿಂದೆ ಬೆಂಗಳೂರಿನಲ್ಲಿ ಯಾವುದೇ ದೇಶದ ಕ್ರಿಕೆಟ್ ತಂಡ ಆಟವಾಡುತ್ತಿದ್ದಾಗ ಈ ಉಪ್ಪಿ, ರಮ್ಯ... ಮೊದಲಾದವರು ಸ್ಟೇಡಿಯಂನಲ್ಲಿ ಒಂದು ಬಾರಿಯೂ ಕಾಣಿಸಿದ್ದೇ ಇಲ್ಲ. ಅಂತಹ ಸಂದರ್ಭಗಳಲ್ಲಿ ಕಾಣಿಸಿಕೊಂಡವರೆಂದರೆ ಅಂಬರೀಶ್, ರಜನೀಕಾಂತ್ ಮತ್ತು ಶಿವರಾಜ್‌ಕುಮಾರ್ ಮಾತ್ರ. ಅಂದರೆ, ನಿಜವಾದ ಕ್ರಿಕೆಟ್ ಅಭಿಮಾನಿಗಳು ಯಾರು? ಓಳು ಬಿಡುವವರು ಯಾರು ಎಂದು ನೀವು ಸುಲಭವಾಗಿ ನಿರ್ಧರಿಸಬಹುದು ಅಲ್ಲವೇ?



'ಬಿರುಗಾಳಿ'ಯಲ್ಲಿ ಸಿಲುಕಿರುವ ಹರ್ಷ



ಕನ್ನಡ ಚಿತ್ರರಂಗದಲ್ಲಿ ಈಗ ಯುವ ನಿರ್ದೇಶಕರು ಎಷ್ಟೊಂದು ಸಂಖ್ಯೆಯಲ್ಲಿದ್ದಾರೆಂದರೆ ಎಲ್ಲಿ ನೋಡಿದರಲ್ಲಿ ಯುವಕರೇ ಕಾಣಿಸುತ್ತಿದ್ದಾರೆ. ಅಂತಹ ಯುವಕರ ದಂಡಿನಲ್ಲಿ ಎದ್ದು ಕಾಣುವ ಹುಡುಗ ಇಪ್ಪತ್ತೇಳರ ಹರೆಯದ ಹರ್ಷ.

ಇಪ್ಪತ್ತೊಂದನೆ ವಯಸ್ಸಿನಲ್ಲೇ 'ರಂಗ ಎಸ್ಸೆಲ್ಸಿ' ಚಿತ್ರದ ಮುಖಾಂತರ ನೃತ್ಯ ನಿರ್ದೇಶನ ಪ್ರಾರಂಭಿಸಿದ ಹರ್ಷ ಈಗಾಗಲೇ ನೂರಾರು ಹಾಡುಗಳಿಗೆ ನೃತ್ಯ ನಿರ್ದೇಶನ ಮಾಡಿ ಹೆಸರು ಮತ್ತು ಖ್ಯಾತಿಯನ್ನು ಪಡೆದಿದ್ದಾನೆ. ಅದಕ್ಕಿಂತಲೂ ಮೊದಲು ಈತ 'ಎಕ್ಸ್‌ಟ್ರೀಮರ್ಸ್' ಎಂಬ ನೃತ್ಯ ತಂಡವನ್ನು ಕಟ್ಟಿ ಅದರ ಮುಖಾಂತರ ನೂರಾರು ಲೈವ್ ಪ್ರದರ್ಶನಗಳನ್ನು ನೀಡಿದ್ದ. ಈಗಲೂ ಅಷ್ಟೇ, ದೊಡ್ಡ ದೊಡ್ಡ ಸಮಾರಂಭಗಳಲ್ಲಿ ನೃತ್ಯ ಮಾಡಲು ಮೊದಲ ಆಹ್ವಾನ ಬರುವುದೇ ಈ ಎಕ್ಸ್‌ಟ್ರೀಮರ್ಸ್ ತಂಡದ ನಾಯಕ ಹರ್ಷನಿಗೆ.


ಅಂದಹಾಗೆ ಈತನ ಮೊದಲ ನಿರ್ದೇಶನದ 'ಗೆಳೆಯ' ಚಿತ್ರ ಅಷ್ಟೊಂದು ಯಶಸ್ಸು ಕಾಣದಿದ್ದರೂ ಆತ ನಿರ್ದೇಶಕನಾಗಿ ಎಲ್ಲರ ಗಮನ ಸೆಳೆದಿದ್ದ. ಅದಕ್ಕಿಂತಲೂ ಮುಖ್ಯವಾಗಿ ಆ ಚಿತ್ರದಲ್ಲಿ 'ಈ ಸಂಜೆ ಯಾಕಾಗಿದೆ ನೀನಿಲ್ಲದೇ....' ಎಂಬ ಹಾಡನ್ನು 16 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಸುಂದರವಾಗಿ ಚಿತ್ರೀಕರಿಸಿದ್ದ. ಈ ಹಾಡಲ್ಲಿ ಯುವ ನಾಯಕ ತರುಣ್ ಎಷ್ಟು ಸುಂದರವಾಗಿ ಕಾಣಿಸುತ್ತಿದ್ದನೆಂದರೆ ಆ ಹಾಡಿನಿಂದಾಗಿಯೇ ಆತನಿಗೆ ಅನೇಕ ಚಿತ್ರಗಳು ದೊರೆತವು.

ಈಗ 'ಆ ದಿನಗಳು' ಖ್ಯಾತಿಯ ನಾಯಕನಟ ಚೇತನ್‌ನನ್ನು ಹಾಕಿಕೊಂಡು 'ಬಿರುಗಾಳಿ' ಎಂಬ ಚಿತ್ರವನ್ನು ಹರ್ಷ ಆರಂಭಿಸಿದ್ದಾನೆ. ಹರ್ಷನ ವೃತ್ತಿ ಜೀವನದಲ್ಲಿ ಈ 'ಬಿರುಗಾಳಿ' ಯಾವ ಥರದ ಪ್ರಭಾವ ಬೀರುತ್ತದೋ ನೋಡಬೇಕು.

ಸಿನಿ ಬಿಟ್ಸ್




ಚಿತ್ರದ ಹೆಸರು 'ಹರಿಶ್ಚಂದ್ರ ಘಾಟ್'. ಅದಕ್ಕೆ ಅದರ ಚಿತ್ರೀಕರಣವನ್ನು ಸುಮಾರು ಏಳು ದಿನಗಳ ಕಾಲ ಬೆಂಗಳೂರಿನ ಸ್ಮಶಾನವಾದ ಹರಿಶ್ಚಂದ್ರ ಘಾಟ್‌ನಲ್ಲೇ ಅದರ ನಿರ್ದೇಶಕ ಶಿವಸಮಯ್ ಎಂಬ ಹೊಸಬ ಮಾಡಲಿದ್ದಾರಂತೆ. ಚಿತ್ರದ ಕತೆಗೂ ಆ ಸ್ಮಶಾನಕ್ಕೂ ಸಂಬಂಧ ಇರಬಹುದು ಎಂದು ಸದ್ಯಕ್ಕೆ ನಂಬೋಣ. ಆದರೆ ಈ ಚಿತ್ರ ಸೆಟ್ಟೇರುವ ಮುನ್ನವೇ ಅದರ ನಾಯಕ ಅಕ್ಷಯ್‌ನನ್ನು ಕರೆದುಕೊಂಡು ಹೋಗಿ ಹರಿಶ್ಚಂದ್ರ ಘಾಟ್‌ನಲ್ಲೇ ಒಂದು ಹೆಣ್ಣು ಶವದೊಂದಿಗೆ ಫೋಟೋ ಸೆಷನ್ ಮಾಡಿಸಿದ್ದಾರಂತೆ. ಇದನ್ನೆಲ್ಲ ಹೊಸ ಪ್ರಯೋಗ ಎನ್ನುವುದೋ, ಹೊಸ ಚಿಂತನೆ ಎನ್ನುವುದೋ, ಹುಚ್ಚಾಟ ಎನ್ನುವುದೋ ಅಥವಾ ಬರೀ ಪಬ್ಲಿಸಿಟಿ ಗಿಮ್ಮಿಕ್ ಎನ್ನುವುದೋ ನೀವೇ ನಿರ್ಧರಿಸಿ....





'ಕಾಳಿದಾಸ ಲವ್ವಲ್ಲಿ ಬಿದ್ದ' ಎಂಬ ವಿಚಿತ್ರ ಹೆಸರಿನ ಸಿನಿಮಾದಲ್ಲಿ ಬಹುತೇಕ ಹೊಸಬರೇ ತುಂಬಿದ್ದಾರಲ್ಲದೆ, ಅದರ ನಿರ್ದೇಶಕ ವೆಂಕಟೇಶ್ ಪಂಚಾಂಗ ಕೂಡ ಚಿತ್ರರಂಗಕ್ಕೆ ಹೊಸಬರು. ಅಂದಹಾಗೆ, ಈ ಚಿತ್ರತಂಡ ಮೊನ್ನೆ ಕಾಂಬೋಡಿಯಾಕ್ಕೆ ಹೋಗಿ 18 ದಿನಗಳ ಕಾಲ ಶೂಟಿಂಗ್ ಮುಗಿಸಿ ಬಂದಿದೆ. ಭಾರತೀಯ ಚಿತ್ರರಂಗದಲ್ಲಿ ಕಾಂಬೋಡಿಯಾದಲ್ಲಿ ಚಿತ್ರೀಕರಿಸಲ್ಪಟ್ಟ ಮೊದಲ ಚಿತ್ರ ಇದು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕಾಂಬೋಡಿಯಾಕ್ಕೂ ಕಾಳಿದಾಸನಿಗೂ ಯಾವ ಸಂಬಂಧ ಎಂಬ ಪ್ರಶ್ನೆಗೆ ಚಿತ್ರ ನೋಡಿದ ನಂತರವೇ ಉತ್ತರ ಸಿಗಬಹುದು....

ಎಂಭತ್ತರ ದಶಕದಲ್ಲಿ ಅನಂತ್‌ನಾಗ್ ಮತ್ತು ಲಕ್ಷ್ಮಿ ಜೋಡಿ ಎಷ್ಟು ಪಾಪ್ಯುಲರ್ ಆಗಿತ್ತೆಂದರೆ ನಿಜಜೀವನದಲ್ಲೂ ಅವರಿಬ್ಬರು ಪತಿ-ಪತ್ನಿಯರೆಂದೇ ಅನೇಕರು ನಂಬಿದ್ದರು. ಈಗ ಇತ್ತ ಅರವತ್ತರ ಹರೆಯದ ಅನಂತ್ ಇನ್ನೂ ಸಿನಿಮಾ ಮತ್ತು ಟಿವಿಯಲ್ಲಿ ಬೇಡಿಕೆ ಹೊಂದಿದ್ದರೆ, ಅತ್ತ ಲಕ್ಷ್ಮಿಗೆ ಕಿರುತೆರೆಯೊಂದರಲ್ಲಿ ಮಾತ್ರ ಅವಕಾಶ ಸಿಗುತ್ತಿದೆ. ವಿಷಯ ಅದಲ್ಲ, ಅದೇನೆಂದರೆ ಈಗ ತನ್ನ ಅಂದಿನ ತಾರಾ ಜೋಡಿ ಲಕ್ಷ್ಮಿಯ ಸುಪುತ್ರಿ ಐಶ್ವರ್ಯಾ ಜೊತೆ 'ಮಿ. ಗರಗಸ' ಚಿತ್ರದಲ್ಲಿ ಅನಂತ್ ನಾಗ್ ನಟಿಸಿದ್ದಾರೆ. ತನ್ನ ಮಾಜಿ ನಾಯಕಿಯೊಬ್ಬಳ ಮಗಳ ಜೊತೆಯೂ ನಾಯಕನಾಗಿ ನಟಿಸುವ ಅಪರೂಪದ ಅವಕಾಶ ಅನಂತ್‌ಗೆ ಸಿಕ್ಕಿದೆ. ಇದು ಬಹಳಷ್ಟು ನಟರಿಗೆ ಸಿಗುವ ಅವಕಾಶವಲ್ಲ.




ನಾಲ್ಕು ವರ್ಷಗಳ ಹಿಂದೆ 'ಚಂದ್ರಚಕೋರಿ' ಎಂಬ ಚಿತ್ರ ಬಿಡುಗಡೆಯಾಗಿ 500 ದಿನಗಳ ಪ್ರದರ್ಶನವನ್ನೂ ಕಂಡು ದಾಖಲೆ ನಿರ್ಮಿಸಿತ್ತು. ಈ ಚಿತ್ರವನ್ನು ಮಾಜಿ ಮುಖ್ಯಮಂತ್ರಿ ಮತ್ತು ಮಣ್ಣಿನ ಮೊಮ್ಮಗ ಕುಮಾರಸ್ವಾಮಿ ನಿರ್ಮಿಸಿದ್ದರು. ಅಂದು ಚಿತ್ರ ಐನೂರು ದಿನಗಳ ಪ್ರದರ್ಶನ ಕಂಡರೂ ಯಾರೂ ಒಂದೇ ಒಂದು ಸಂತೋಷಕೂಟವನ್ನು ಏರ್ಪಡಿಸಿರಲಿಲ್ಲ.

ಅದೇಕೋ ಏನೋ ನಾಲ್ಕು ವರ್ಷದ ದೀರ್ಘಾವಧಿಯ ನಂತರ ಈ ಚಿತ್ರದ ನಿರ್ದೇಶಕ ಎಸ್. ನಾರಾಯಣ್‌ಗೆ ಮೊನ್ನೆ ಇದ್ದಕ್ಕಿದ್ದಹಾಗೆ ಸಮಾರಂಭವೊಂದನ್ನು ಮಾಡಿ 'ಚಂದ್ರಚಕೋರಿ'ಯಲ್ಲಿ ದುಡಿದ 80 ಜನ ತಂತ್ರಜ್ಞರಿಗೆ ಮೊಮೆಂಟೋಗಳನ್ನು ವಿತರಿಸಿದ್ದಾರೆ. ಬೇರೆ ಎಲ್ಲದರಲ್ಲೂ ಫಾಸ್ಟಾಗಿರುವ ಇವರು ಇದನ್ನು ಮಾತ್ರ ಯಾಕೆ ಇಷ್ಟೊಂದು ಲೇಟಾಗಿ ಮಾಡಿದ್ದಾರೆ? ಇದಕ್ಕೂ ಮುಂದೆ ಬರುತ್ತಿರುವ ಚುನಾವಣೆಗೂ ಏನಾದರು ಸಂಬಂಧವಿದೆಯೇ?







ಕಲರ್‌ಫುಲ್ ಹರಿಶ್ಚಂದ್ರ

ಸತ್ಯ ಹರಿಶ್ಚಂದ್ರನ ಕತೆಯನ್ನಾಧರಿಸಿ ಖ್ಯಾತ ನಿರ್ಮಾಪಕ ದಾದಾ ಫಾಲ್ಕೆಯವರು 'ರಾಜಾ ಹರಿಶ್ಚಂದ್ರ' ಎಂಬ ಸಿನಿಮಾವನ್ನು ಹಿಂದಿಯಲ್ಲಿ ಹಲವು ದಶಕಗಳ ಹಿಂದೆ ನಿರ್ಮಿಸಿದ್ದರು. ನಂತರ ಅದೇ ಚಿತ್ರ 1964ರಲ್ಲಿ ಕನ್ನಡದಲ್ಲೂ ನಿರ್ಮಾಣವಾಗಿ ಮೈಲಿಗಲ್ಲು ಸ್ಥಾಪಿಸಿತ್ತು. ಹುಣಸೂರು ಕೃಷ್ಣಮೂರ್ತಿಯವರ ಸಂಭಾಷಣೆಯೊಂದಿಗೆ ಪಂಡರೀಬಾಯಿ, ಉದಯ್‌ಕುಮಾರ್, ಅಶ್ವಥ್ ಮತ್ತು ರಾಜ್‌ಕುಮಾರ್‌ರ ಮನೋಜ್ಞ ಅಭಿನಯ ಪ್ರೇಕ್ಷಕರ ಮನ ಗೆದ್ದಿದ್ದವು.

ಅದಾದನಂತರ ನಲವತ್ತು ವರ್ಷಗಳ ಕಾಲ ಡಬ್ಬಾದಲ್ಲೇ ಇದ್ದು ಸವೆದು ಸವಕಲಾಗಿ ವಿನಾಶದ ಅಂಚಿನಲ್ಲಿದ್ದ 'ಸತ್ಯ ಹರಿಶ್ಚಂದ್ರ'ನ ರೀಲಿಗೆ ಕೆ.ಸಿ.ಎನ್. ಗೌಡರು ಈಗ ಮತ್ತೆ ಜೀವಕಳೆ ತುಂಬಿದ್ದಾರೆ. ಅಂದು ವಿಜಯಾಪ್ರೊಡಕ್ಷನ್‌ನ ಕೆ.ವಿ. ರೆಡ್ಡಿ ನಿರ್ಮಿಸಿದ್ದ ಆ ಚಿತ್ರದ ಸಂಪೂರ್ಣ ಹಕ್ಕನ್ನು ಖರೀದಿಸಿರುವ ಗೌಡರು ಆ ಕಪ್ಪು-ಬಿಳುಪು ಚಿತ್ರಕ್ಕೆ ಈಗ ಈಸ್ಟ್‌ಮನ್ ಕಲರ್ ಅಳವಡಿಸಿದ್ದಾರೆ. ಮಾತಿನ ಭಾಗವನ್ನೂ ಡಿಟಿಎಸ್‌ಗೆ ಪರಿವರ್ತಿಸಿದ್ದಾರಲ್ಲದೆ ರಾಜೇಶ್ ರಾಮನಾಥ್‌ರಿಂದ ಹೊಸದಾದ ಹಿನ್ನೆಲೆ ಸಂಗೀತವನ್ನೂ ನೀಡಿದ್ದಾರೆ. ಜೊತೆಗೆ 60 ಎಂಎಂನಲ್ಲಿದ್ದ ಚಿತ್ರವನ್ನು ವೈಡ್ ಆ್ಯಂಗಲ್‌ಗೆ ಬದಲಾಯಿಸಿದ್ದಾರೆ. ಅಮೆರಿಕದ ಗೋಲ್ಡ್ ಸ್ಟೋನ್ ಸಂಸ್ಥೆಯ 150ಕ್ಕೂ ಹೆಚ್ಚು ಕಂಪ್ಯೂಟರ್ ಕಲಾವಿದರು ಇದರ ಪ್ರತಿ ಫ್ರೇಮಿಗೂ ಬಣ್ಣ ಹಚ್ಚಿದ್ದಾರೆ. ಇದೆಲ್ಲಕ್ಕೆ ತಗುಲಿರುವ ವೆಚ್ಚ ಬರೋಬ್ಬರಿ 3 ಕೋಟಿ ರೂಗಳು.

ಅಂದರೆ ಚಿತ್ರದ ಒಂದು ಸೆಕೆಂಡಿಗೆ ಇಪ್ಪತ್ತು ಸಾವಿರದಂತೆ, ಒಂದೊಂದು ಹಾಡಿಗೆ ಹತ್ತು ಲಕ್ಷಗಳನ್ನು ಖರ್ಚುಮಾಡಿರುವ ಗೌಡರು ಈ ಬಣ್ಣಮಯ 'ಹರಿಶ್ಚಂದ್ರ'ದ 30 ಪ್ರಿಂಟ್‌ಗಳನ್ನು ಇದೇ 24ರಂದು ರಾಜ್ಯಾದ್ಯಂತ ಬಿಡುಗಡೆ ಮಾಡುತ್ತಿದ್ದಾರೆ. ಬೆಂಗಳೂರಿನಲ್ಲಿ ಸುಮಾರು 10 ಚಿತ್ರಮಂದಿರಗಳಲ್ಲಿ ಇದು ತೆರೆಕಾಣಲಿದೆ.

ಇತ್ತೀಚೆಗೆ ಕನ್ನಡದಲ್ಲಿ ನಿರ್ಮಾಣವಾದ ಪೌರಾಣಿಕ ಚಿತ್ರಗಳ ನಸೀಬೇ ಚೆನ್ನಾಗಿದ್ದಂತಿಲ್ಲ. ಏಳು ಕೋಟಿ ಖರ್ಚಿನಲ್ಲಿ ನಿರ್ಮಾಣವಾದ 'ಗಂಡುಗಲಿ ಕುಮಾರರಾಮ' ಹೇಳಹೆಸರಿಲ್ಲದಂತೆ ನೆಲಕಚ್ಚಿತು. ಇನ್ನು ದೇವರಾಜ್ ಅಭಿನಯದ 'ಪ್ರಚಂಡರಾವಣ' ಸಿದ್ಧವಾಗಿ ಒಂದು ವರ್ಷವಾದರೂ ಇನ್ನೂ ಡಬ್ಬಾದಿಂದ ಎದ್ದಿಲ್ಲ. ಇಂಥದರಲ್ಲಿ 82ರ ಈ ಇಳೀ ವಯಸ್ಸಿನಲ್ಲೂ ಧೈರ್ಯದಿಂದ ಮೂರು ಕೋಟಿ ಸುರಿದು ಸಿನಿಮಾ ಮಾಡಿರುವ ಕೆ.ಸಿ.ಎನ್. ಗೌಡರನ್ನು ಆ ಹರಿಶ್ಚಂದ್ರನೇ ಕಾಪಾಡಬೇಕು.

ಕಾಮಿಡಿ ಕಿಂಗ್ ಕೋಮಲ್



ಕನ್ನಡ ಚಿತ್ರರಂಗದಲ್ಲಿ ಈಗ ಅತ್ಯಂತ ಬೇಡಿಕೆಯಲ್ಲಿರುವ ಕಾಮಿಡಿ ನಟ ಎಂದರೆ ಕೋಮಲ್. ಆನಂತರದ ಸ್ಥಾನದಲ್ಲಿ ಶರಣ್, ಬುಲೆಟ್ ಪ್ರಕಾಶ್, ಬಿರಾದಾರ್ ಮೊದಲಾದವರು ಕಾಣಸಿಗುತ್ತಾರೆ. ಆದರೆ ಹಾಸ್ಯ ನಟ ಮಾತ್ರವಾಗಿರದೆ, ತನ್ನ ಅಣ್ಣಾ ಜಗ್ಗೇಶ್‌ತರಹ ಹೀರೋ ಆಗಬೇಕೆಂದು ಬಯಸಿದ ಕೋಮಲ್ ಒಂದೆರಡು ವರ್ಷಗಳ ಹಿಂದೆ ಆ ಪ್ರಯತ್ನವನ್ನು ಮಾಡಿ ಮಕಾಡೆ ಮುಗ್ಗರಿಸಿದ್ದರು.

ಆನಂತರ ಅವರು ಕಾಮಿಡಿ ಪಾತ್ರಗಳಿಗೇ ಪ್ರಾಮುಖ್ಯತೆ ನೀಡಿದ್ದರಾದರೂ ಈಗ 'ಮಿ. ಗರಗಸ' ಚಿತ್ರದಲ್ಲಿ ಮತ್ತೊಮ್ಮೆ ಹೀರೋ ಆಗಿ ಕಾಣಿಸಿಕೊಂಡಿದ್ದಾರೆ. ಆದರೆ ಯಥಾಪ್ರಕಾರ ಅವರು ನಾಯಕಿಯೊಂದಿಗೆ ಮರ ಸುತ್ತುವ ಅಥವಾ ಒಮ್ಮೆಗೆ ಹತ್ತಾರು ಜನರನ್ನು ಸದೆ ಬಡಿಯುವ ಹೀರೋ ಆಗಲು ಹೋಗದೆ ಕಾಮಿಡಿಯೇ ಪ್ರಾಮುಖ್ಯತೆ ಪಡೆದಿರುವ ಚಿತ್ರದಲ್ಲಿ ನಟಿಸಿದ್ದಾರೆ.

ಅದ್ಭುತವಾದ ಡೈಲಾಗ್ ಡೆಲಿವರಿ ಟೈಮಿಂಗ್, ಬಾಡಿ ಲಾಂಗ್ವೇಜ್ ಮತ್ತು ಮುಗ್ಧ ಮುಖಚರ್ಯೆ ಕೋಮಲ್‌ನ ಪ್ಲಸ್ ಪಾಯಿಂಟ್. ಅದನ್ನೆಲ್ಲ 'ಮಿ.ಗರಗಸ' ಚಿತ್ರದ ನಿರ್ದೇಶಕ ದಿನೇಶ್ ಬಾಬು ಸಮರ್ಪಕವಾಗಿ ಬಳಸಿಕೊಂಡಿದ್ದಾರೆ. ಕೋಮಲ್ ಜೊತೆ ಅನಂತ್‌ನಾಗ್‌ನಂತಹ ಮತ್ತೋರ್ವ ಅದ್ಭುತ ನಟ ಕೂಡ ಇದ್ದು, ಅವರಿಬ್ಬರ ನಡುವಿನ ಡೈಲಾಗ್‌ಗಳು ಜುಗಲ್‌ಬಂದಿಯಂತೆ ಸಾಗುತ್ತವೆ.

ಅಂತೂಇಂತೂ ಹೀರೋ ಆಗಿ ಎಸ್ಟಾಬ್ಲಿಷ್ ಆಗಿರುವ ಕೋಮಲ್ ಇಂತಹ ಹಾಸ್ಯ ಪಾತ್ರಗಳಲ್ಲೇ ಕಾಣಿಸಿಕೊಂಡರೆ ಅವರು ನಾಯಕ ನಟನಾಗಿ ಮುಂದುವರೆಯಬಹುದು. ಇದೀಗ ಬಂದ ಸುದ್ದಿಯಂತೆ ಕೋಮಲ್‌ರ ಮುಂದಿನ ಚಿತ್ರ 'ಮುದ್ದುಕೃಷ್ಣ' ಎಂಬ ಮತ್ತೊಂದು ಕಾಮಿಡಿ.



ಕೆಲಸಕ್ಕೆ ಬಾರದ

ಯ | ಜ | ಮಾ | ನ್ರು

'ನಮ್ಮೆಜಮಾನ್ರು' ಎಂಬ ಹೊಸ ಚಿತ್ರ ಮುಂದಿನ ವಾರ ಸೆಟ್ಟೇರಲಿದ್ದು ಅದರಲ್ಲಿ ವಿಷ್ಣುವರ್ಧನ್ ನಟಿಸಲಿದ್ದಾರೆ. ನಾಗಾಭರಣ ಈ ಚಿತ್ರದ ನಿರ್ದೇಶಕ. ಕಳೆದ ಒಂದು ವರ್ಷದಿಂದ ವಿಷ್ಣು ಮತ್ತು ನಾಗಾಭರಣ ಯಾವುದೇ ಕೆಲಸವಿಲ್ಲದೆ ವಿಶ್ರಾಂತಜೀವನ ನಡೆಸುತ್ತಿದ್ದರು. ಇದೇ ಹೊತ್ತಿಗೆ ನಿರ್ದೇಶನ ಮತ್ತು ನಟನೆಯ ವಿಭಾಗಗಳಲ್ಲಿ ಹೆಚ್ಚಾಗಿ ಯುವಕರೇ ವಿಜೃಂಭಿಸುತ್ತಿರುವಾಗ ಇವರಿಬ್ಬರೂ ವಿಧಿ ಇಲ್ಲದೆ ಚಿತ್ರರಂಗದಿಂದ ದೂರ ಸರಿದಿದ್ದಾರೆ ಎಂದೇ ವ್ಯಾಖ್ಯಾನಿಸಲಾಗಿತ್ತು. ಇಂಥ ಸಂದರ್ಭದಲ್ಲಿ ಈಗ ಈ ಹಳೇ ಹುಲಿಗಳು ಒಂದಾಗಿರುವುದು ಕುತೂಹಲಕಾರಿಯಾಗಿದೆ.

ಅದ್ಯಾಕೋ 'ಜನುಮದ ಜೋಡಿ' ನಂತರ ನಾಗಾಭರಣರ ಯಾವ ಚಿತ್ರವೂ ಬರಕತ್ತಾಗುತ್ತಿಲ್ಲ. ಮೊದಲಿಗೆ ಜಯಂತಿ, ತಾರಾ, ಶಿಲ್ಪಾರಂತಹ ನಟಿಮಣಿಯರನ್ನು ಹಾಕಿಕೊಂಡು 'ವಿಮೋಚನೆ' ಎಂಬ ಮಹಿಳಾಪ್ರಧಾನ ಚಿತ್ರವನ್ನು ತೆಗೆದರು. ಆದರೆ ಭರಣರಿಗೆ ಆ ಚಿತ್ರದಿಂದ ಯಾವ ರೀತಿಯ ವಿಮೋಚನೆಯೂ ಸಿಗಲಿಲ್ಲ. ಆನಂತರ



ಶರತ್‌ಬಾಬುರನ್ನು ಕರೆತಂದು ಶಿವಣ್ಣನೊಂದಿಗೆ ಸೇರಿಸಿ 'ಜನುಮದಾತ' ಚಿತ್ರ ಮಾಡಿದರು. ಆದರೆ 'ಜನುಮದಾತ' ನಿರ್ಮಾಪಕರಿಗೆ ಆ ಚಿತ್ರ ಅನ್ನದಾತನಂತೂ ಆಗಲಿಲ್ಲ. ನಂತರ ರಾಜ್‌ಕುಮಾರರ ಬ್ಯಾನರ್ ವಜ್ರೇಶ್ವರಿ ಕಂಬೈನ್ಸ್‌ಗೆ ಖ್ಯಾತ ಸಾಹಿತಿ ಶಿವರಾಮ ಕಾರಂತರ ಕಾದಂಬರಿ ಆಧರಿಸಿ 'ಚಿಗುರಿದ ಕನಸು' ಮಾಡಿದರು. ಆ ಚಿತ್ರವೂ ಭರಣರ ಕನಸನ್ನು ಚಿಗುರಿಸಲಿಲ್ಲ. ಇನ್ನು ಮಧು ಬಂಗಾರಪ್ಪ ನಿರ್ಮಿಸಿದ 'ಕಲ್ಲರಳಿ ಹೂವಾಗಿ' ಚಿತ್ರದಲ್ಲಿ ಕಲ್ಲಿನಂತಹ ನಟ ವಿಜಯ ರಾಘವೇಂದ್ರನನ್ನು ಹೂವಾಗಿಸುವಲ್ಲೂ ಸೋತು ಆ ಚಿತ್ರವೂ ಇನ್ನಿಲ್ಲದಂತೆ ನೆಲಕಚ್ಚಿತು.

ಇನ್ನು ಹೊಗೇನಕಲ್ ವಿವಾದ ಭುಗಿಲೆದ್ದಾಗ ಇಲ್ಲಿದ್ದು ಯಜಮಾನನಂತೆ ವರ್ತಿಸಬೇಕಿದ್ದ ವಿಷ್ಣುವರ್ಧನ್ ಹಾಗೆ ಮಾಡದೇ ಜಾರಿಕೊಂಡಿದ್ದರು. ಅದಿನ್ನೂ ಜನರ ಮನಸ್ಸಿನಲ್ಲಿ ಹಸಿಯಾಗಿರುವಾಗಲೇ ಅವರು 'ನಮ್ಮೆಜಮಾನ್ರು' ಎಂಬ ಚಿತ್ರದಲ್ಲಿ ನಟಿಸುವ ಮೂಲಕ ತಾನು ಎಲ್ಲರ ಯಜಮಾನ ಎಂದು ಹೇಳಲು ಹೊರಟಿರುವುದು ಸೋಜಿಗವಾಗಿದೆ. ಬರೀ ಪರದೆಯ ಮೇಲೆ ಯಜಮಾನಿಕೆಯನ್ನು ತೋರುತ್ತಾ ಬಾಯಲ್ಲಿ ಬನ್ನಂಜೆಯ ಪ್ರವಚನವನ್ನು ಹೇಳುತ್ತಾ, ಬಿಳಿಬಟ್ಟೆ ತೊಟ್ಟು ಸಂತನಂತೆ ಪೋಸು ಕೊಡುವ 'ನಮ್ಮೆಜಮಾನ್ರ'ನ್ನು ನಿಜವಾಗ್ಲೂ ನಮ್ಮ ಜನ ಒಪ್ಪುತ್ತಾರಾ ಎಂಬುದೇ ಮಿಲಿಯನ್ ಡಾಲರ್ ಪ್ರಶ್ನೆಯಾಗಿದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar